


ಎಂ. ಎನ್. ಕಾಮತ್

ಒಂದು ಪರಿಚಯ

ಜಿ. ವರದರಾಯ ಪೈ

ಪ್ರತಿಗಳು ಇಲ್ಲಿ ದೊರೆಯುತ್ತವೆ:

- **ಅಧ್ಯಕ್ಷರು**
  ಕರ್ನಾಟಕ ಸಂಘ
  ಪುತ್ತೂರು - 574 201, ದ. ಕ.

- **ಶೋಭಾ ಪುಸ್ತಕ ಭಂಡಾರ**
  ಏಳ್ಮುಡಿ - ಪುತ್ತೂರು - 574 201
  ದಕ್ಷಿಣ ಕನ್ನಡ

- **ಮೆಸರ್ಸ್ ಅತ್ರಿ ಬುಕ್ ಸೆಂಟರ್**
  ಶರಾವತಿ ಬಿಲ್ಡಿಂಗ್
  ಬಲ್ಮಠ, ಮಂಗಳೂರು - 575 003

- **ಮೆಸರ್ಸ್ ಪೊಪ್ಯುಲರ್ ನ್ಯೂಸ್ ಏಜೆನ್ಸಿ**
  ಪುತ್ತೂರು - 574 201
  ದಕ್ಷಿಣ ಕನ್ನಡ

ಪೂಜ್ಯ ಶ್ರೀ ಎಂ. ವಿ. ಸುಬ್ರಹ್ಮಣ್ಯ
ಅವರಿಗೆ

ಪ್ರೀತಿಯ ಕಾಣಿಕೆ

ಜಿ. ವರದರಾಜ ರಾವ್

ಮುಳಿಯ ಕೃಷ್ಣ ಭಟ್ಟ ಸ್ಮಾರಕ ಪುಸ್ತಕಮಾಲೆ - ೪

ಎಮ್. ಎನ್. ಕಾಮತ್

- ಒಂದು ಪರಿಚಯ

○

ಜಿ. ವರದರಾಯ ಪೈ

○

ಕರ್ನಾಟಕ ಸಂಘ

ಪುತ್ತೂರು - ೫೭೪ ೨೦೧, ದಕ್ಷಿಣ ಕನ್ನಡ

M. N. KAMATH - ONDU PARICHAYA – an introduction to M. N. Kamath and his Works by G. Varadaraya Pai
Edited and Published by Karnataka Sangha,
Puttur - 574 201, Da. Ka.

First Impression 1984

Pages: viii+58 Price: Rs. 6-00

ಸಂಪಾದಕ ಮಂಡಳಿ:

ಶ್ರೀ ಬೋಳಂತಕೋಡಿ ಈಶ್ವರ ಭಟ್ಟ
ಶ್ರೀ ವಿ. ಬಿ. ಮೊಳೆಯಾರ
ಶ್ರೀ ವಿ. ಬಿ. ಅರ್ತಿಕಜೆ

ಬೆಲೆ: ರೂಪಾಯಿ ಆರು

ಮುಖಚಿತ್ರ:
ಶ್ರೀ ಎಂ. ರಾಮಪ್ರಸಾದ, ಬಿ. ಕಾಂ.
ಕರಿಯಾಲ, ದರ್ಬೆ, ಪುತ್ತೂರು, ದ. ಕ.

ಮುದ್ರಣ:
ರಾಜೇಶ್ ಪವರ್ ಪ್ರೆಸ್
ದರ್ಬೆ - 574 202
ಪುತ್ತೂರು, ದಕ್ಷಿಣ ಕನ್ನಡ, ಕರ್ನಾಟಕ
ದೂರವಾಣಿ : 476

ಪ್ರಕಾಶಕರ ಮಾತು

ಪಂಜೆ ಮಂಗೇಶರಾಯರು, ಮಂಜೇಶ್ವರ ಗೋವಿಂದ ಪೈಗಳು ಮತ್ತು ಎಮ್. ಎನ್. ಕಾಮತರು ಹೆಚ್ಚುಕಡಿಮೆ ಸಮಕಾಲೀನರು. ಕೆಲವು ವರ್ಷಗಳ ಹಿಂದೆ ಪಂಜೆ ಮಂಗೇಶರಾಯರ ಜನ್ಮಶತಮಾನೋತ್ಸವ ಮಂಗಳೂರಿನಲ್ಲಿ ವಿಜೃಂಭಣೆಯಿಂದ ನಡೆಯಿತು. ಕಳೆದ ವರ್ಷವಷ್ಟೆ ನಾಡಿನ ವಿವಿಧ ಭಾಗಗಳಲ್ಲಿ ಮಂಜೇಶ್ವರ ಗೋವಿಂದ ಪೈಯವರ ಜನ್ಮಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದೆವು. ಎಮ್. ಎನ್. ಕಾಮತರು ಹುಟ್ಟಿ ನೂರು ವರ್ಷಗಳು ಈಗಾಗಲೇ ಸಂದರೂ ಅದೇಕೋ ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಲ್ಲಿಸಿದ ಸೇವೆ ಯಾರ ಗಮನವನ್ನೂ ಸೆಳೆದಂತೆ ಕಾಣುವುದಿಲ್ಲ. ಅವರಿಗೆ ಸಲ್ಲಬೇಕಾದ ಗೌರವವನ್ನು ನಾಡು ಅವರಿಗೆ ಸಲ್ಲಿಸಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಪುತ್ತೂರು ಕರ್ನಾಟಕ ಸಂಘ ಪುತ್ತೂರಿನ ಇತರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಸಹಯೋಗದಿಂದ ಎಮ್. ಎನ್. ಕಾಮತ್ ಅವರ ಜನ್ಮಶತಮಾನೋತ್ಸವವನ್ನು ವಿವಿಧ ಕಾರ್ಯಕ್ರಮಗಳೊಡನೆ ಇಂದು ನಾಡಿನಲ್ಲೇ ಪ್ರಥಮವಾಗಿ ಆಚರಿಸುತ್ತಿರುವುದು ನಮಗೆ ಹೆಮ್ಮೆಯ ವಿಷಯ. ಈ ಸಂದರ್ಭದಲ್ಲಿ, "ಎಮ್. ಎನ್. ಕಾಮತ್-ಒಂದು ಪರಿಚಯ" ಎಂಬ ಈ ಕೃತಿಯನ್ನು "ಮುಳಿಯ ಕೃಷ್ಣ ಭಟ್ಟ ಸ್ಮಾರಕ ಪುಸ್ತಕಮಾಲೆ"ಯ ನಾಲ್ಕನೇ (ಕರ್ನಾಟಕ ಸಂಘದ ಆರನೇ) ಪ್ರಕಟನೆಯಾಗಿ ಹೊರತರಲು ಅತ್ಯಂತ ಸಂತೋಷವೆನಿಸುತ್ತದೆ. ಕೃತಿಯನ್ನು ಪ್ರಕಟಿಸಲು ಒಪ್ಪಿಗೆಯಿತ್ತ ಲೇಖಕ ಶ್ರೀ ಜಿ. ವರದರಾಯ ಪೈ ಅವರಿಗೆ ನಾವು ಋಣಿಗಳಾಗಿದ್ದೇವೆ.

ಈ ಹೊತ್ತಗೆ ಎಮ್. ಎನ್. ಕಾಮತರ ಕುರಿತಾದ ಪರಿಪೂರ್ಣ ಕೃತಿಯೆಂದೇನೂ ನಾವು ಭಾವಿಸುವುದಿಲ್ಲ. ಆದರೆ, ಅವರ ಬದುಕು-ಬರೆಹಗಳ ಬಗ್ಗೆ ಮುಂದೆ ಅಭ್ಯಾಸ ಮಾಡುವವರಿಗೆ ಇದು ಒಂದು ಉತ್ತಮ ಪ್ರವೇಶಿಕೆಯಾದಲ್ಲಿ ಇದನ್ನು ಪ್ರಕಟಿಸುವುದರಲ್ಲಿ ನಾವು ವಹಿಸಿದ ಶ್ರಮ ಸಾರ್ಥಕವಾಗುತ್ತದೆ ಎಂದು ನಮ್ಮ ಅಂಬೋಣ.

ಕೃತಿ ಪ್ರಕಟಣೆಯಲ್ಲಿ ಶ್ರೀಗಳಾದ ವಿ. ಬಿ. ಮೊಳೆಯಾರ, ವಿ. ಬಿ. ಅರ್ತಿಕಜೆ ಮತ್ತು ಹರಿನಾರಾಯಣ ಮಾಡಾವು ಇವರು ವಿವಿಧ ರೀತಿಗಳಲ್ಲಿ ನಮಗೆ ನೆರವಾಗಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ನಾವು ಸ್ಮರಿಸಿಕೊಳ್ಳುತ್ತೇವೆ. ಅದೇ ರೀತಿ, ಸುಂದರವಾದ ರಕ್ಷಾಕವಚವನ್ನು ರಚಿಸಿಕೊಟ್ಟ ತರುಣ ಕಲಾವಿದ ಶ್ರೀ ರಾಮಪ್ರಸಾದ ಎಂ. ಅವರಿಗೂ, ಅಂದವಾಗಿ ಮುದ್ರಿಸಿದ ರಾಜೇಶ್ ಪವರ್ ಪ್ರೆಸ್ಸಿನ ಮಿತ್ರರಾದ ಶ್ರೀ ಎಂ. ಎಸ್. ರಘುನಾಥ ರಾವ್ ಮತ್ತು ಅವರ ಕೆಲಸಗಾರ ಬಂಧುಗಳಿಗೂ ನಾವು ಕೃತಜ್ಞರಾಗಿದ್ದೇವೆ.

ಪುತ್ತೂರು
ತಾ. 10—3—1984

ಬೋಳಂತಕೋಡಿ ಈಶ್ವರ ಭಟ್ಟ
ಅಧ್ಯಕ್ಷ, ಕರ್ನಾಟಕ ಸಂಘ

ನಾಲ್ಕು ಮಾತುಗಳು

ನಾನು ಪುತ್ತೂರು ಬೋರ್ಡ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ದಿವಂಗತ ಎಂ. ಎನ್. ಕಾಮತರ 'ಎಲ್ಲಿ ಮನಕಳುಕಿರದೊ ಎಲ್ಲಿ ತಲೆಬಾಗಿರದೊ' ಕವನವು ನಮ್ಮ ಪ್ರಾರ್ಥನೆಯ ಗೀತವಾಗಿತ್ತು. ಈ ಕವನವು ನನ್ನ ಮೇಲೆ ತುಂಬ ಪ್ರಭಾವವನ್ನು ಬೀರಿತು. ಇದರಿಂದಾಗಿ ಕಾಮತರ ಸಾಹಿತ್ಯದ ಬಗೆಗೆ ನನ್ನ ಆಸಕ್ತಿ ಕೆರಳಿತು. ಕಾಮತರು ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ನನ್ನ ತಂದೆಯವರ ಅಧ್ಯಾಪಕರಾಗಿದ್ದ ಕಾರಣ, ಅವರ ಬಗ್ಗೆ, ಅವರ ಸಾಹಿತ್ಯದ ಬಗ್ಗೆ, ತಂದೆಯವರಿಗೆ ತುಂಬ ಗೊತ್ತಿತ್ತು. ಆದುದರಿಂದ ಕಾಮತರ ಸಾಹಿತ್ಯದ ಬಗ್ಗೆ ಆ ದಿನಗಳಲ್ಲೇ ನಾನು ಸಾಕಷ್ಟು ತಿಳಿಯುವಂತಾಯಿತು.

1981ರಲ್ಲಿ ಕಾಮತರ ಬಗ್ಗೆ ಒಂದು ಚಿಕ್ಕ ಲೇಖನವನ್ನು ಬರೆದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸಂಪಾದಕರಿಗೆ ಕಳುಹಿಸಿದೆ. "A Mid-Summer Flower" ಎಂಬ ಆ ಲೇಖನವು ಆ ಕೂಡಲೇ ಪ್ರಕಟವಾಯಿತು. (30-8-'81)

ಡಿಸೆಂಬರ್ 17, 1983ರಂದು "ತರಂಗ" ಪತ್ರಿಕೆಯ ಸಂಪಾದಕರಾದ ಶ್ರೀ ಸಂತೋಷಕುಮಾರ ಗುಲ್ವಾಡಿಯವರು ನನಗೆ ಬರೆದರು- "ನೀವು ಶ್ರೀ ಎಂ.ಎನ್. ಕಾಮತರ ಬಗ್ಗೆ "ತರಂಗ"ಕ್ಕಾಗಿ ಒಂದು ಸಮಗ್ರ ಲೇಖನ ಬರೆದು ಕೊಡಬಹುದೆ? ಅದು ಈ ತಿಂಗಳಾಂತ್ಯದಲ್ಲಿ ಸಿಕ್ಕರೆ ಅನುಕೂಲ." ನನ್ನ ತಂದೆಯವರು ನನಗೆ ಬಿಟ್ಟು ಹೋದ ಅಮೂಲ್ಯ ಗ್ರಂಥಭಂಡಾರದಲ್ಲಿ ಕಾಮತರ "ಅಂದಿನ ಆವೂರು" ಕೃತಿಯನ್ನೂ ಸೇರಿದಂತೆ ಹದಿನೈದು ಕೃತಿಗಳಿದ್ದುವು. ಅವನ್ನೆಲ್ಲ ಓದಿ ಅತ್ಯವಸರದಲ್ಲಿ ಒಂದು ಲೇಖನ ವನ್ನು ಬರೆದು ಗುಲ್ವಾಡಿಯವರಿಗೆ ಕಳುಹಿಸಿದೆ. ಈ ರೀತಿ ಗುಲ್ವಾಡಿಯವರ ಕೃಪೆಯಿಂದಾಗಿ ನಾನು ಮತ್ತೊಮ್ಮೆ ಕಾಮತರ ಕೆಲವು ಕೃತಿಗಳನ್ನು ಓದು ವಂತಾಯಿತು. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ.

ನನ್ನ ಪೂಜ್ಯ ಗುರುಗಳಾದ ಶ್ರೀ ವಿ. ಬಿ. ಮೊಳೆಯಾರ ಅವರು ನಾನು ಬರೆದ "ಜಿ. ಎನ್. ಲಕ್ಷ್ಮಣ ಪೈಯವರ ಬದುಕು-ಬರೆಹ" ಕೃತಿಯನ್ನು ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನ ಕನ್ನಡ ಸಂಘದ 'ಚೈತನ್ಯಮಾಲೆ'ಯಲ್ಲಿ ಪ್ರಕಟಿಸಿ ಪ್ರೋತ್ಸಾಹಿಸಿದರು. ಆ ಸಂದರ್ಭದಲ್ಲಿ ನಾನು ಅವರನ್ನು ಆಗಾಗ ಭೇಟಿಯಾಗುವುದು ಅನಿವಾರ್ಯವಾಯಿತು. ಅದೊಂದು ದಿನ ಅವರು ಸೂಚಿಸಿದರು- "ಎಮ್.ಎನ್. ಕಾಮತರ ಬಗ್ಗೆ ಒಂದು ಪರಿಚಯಾತ್ಮಕ ಕೃತಿಯನ್ನು ನೀವೇಕೆ ಬರೆಯಬಾರದು? ಕರ್ನಾಟಕ ಸಂಘವು ಅವರ ಬಗ್ಗೆ ಒಂದು ಪುಸ್ತಕವನ್ನು ಹೊರಡಿಸಲು ಆಸಕ್ತಿ ಹೊಂದಿದೆ. ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಬೋಳಂತಕೋಡಿ ಈಶ್ವರ ಭಟ್ಟರು

ಹಾಗೆಂದು ನನ್ನೊಡನೆ ತಿಳಿಸಿದರು. ನನ್ನ ಅಭಿಪ್ರಾಯವೂ ಅದೇ ಆಗಿದೆ.” ಆಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಆ ಕೂಡಲೇ ನಾನು ಒಪ್ಪಿದೆ. ನನ್ನ ಈ ಕೃತಿಗೆ ಮುನ್ನುಡಿಯನ್ನು ಬರೆದು ಹರಸಿದ ಗುರುಗಳಾದ ಶ್ರೀ ವಿ. ಬಿ. ಮೊಳೆಯಾರ ಅವರಿಗೂ, ಕರ್ನಾಟಕ ಸಂಘ, ಪುತ್ತೂರು - ಇದರ ವತಿಯಿಂದ ಪ್ರಕಟಿಸಿದ ಶ್ರೀ ಬೋಳಂತಕೋಡಿ ಈಶ್ವರ ಭಟ್ಟರಿಗೂ ನನ್ನ ನಮನಗಳು.

ಕಾಮತರ ಬಗ್ಗೆ ಒಂದು ಪುಸ್ತಕವನ್ನು ಬರೆಯುವಾಗ ನಾನು ಹೆಚ್ಚು ಜವಾಬ್ದಾರಿಯನ್ನು ವಹಿಸಬೇಕಾಗುತ್ತದೆ. ಆದುದರಿಂದ ಕಾಮತರ ಕೃತಿಗಳಿಗಾಗಿ ಹುಡುಕಾಟ ಆರಂಭಿಸಿದೆ. ಸಹಜವಾಗಿಯೇ ನನ್ನ ನೆನಪಿಗೆ ಮೊತ್ತಮೊದಲು ಬಂದ ವ್ಯಕ್ತಿಯೆಂದರೆ ಸುರತ್ಕಲ್ ಗೋವಿಂದದಾಸ ಕಾಲೇಜಿನ ಶ್ರೀ ಶೇಖರ ಇಡ್ಯ ಅವರು. ಕನ್ನಡ ಸಾಹಿತ್ಯದ ಹಳೆಯ ಕೃತಿಗಳು ಬೇಕಾದಾಗ ಕನ್ನಡಿಗರು ಮೊದಲು ಇಡ್ಯರನ್ನು ಸಂಪರ್ಕಿಸುತ್ತಾರೆ. ನಾನೂ ಅದನ್ನೇ ಮಾಡಿದೆ. ಇಡ್ಯರು ನನಗೆ ಕಾಮತರ ಆರು ಕೃತಿಗಳನ್ನೂ, ಅವರ ಕಥೆ, ಕವನ ಮತ್ತು ಪ್ರಬಂಧಗಳಿದ್ದ ಹಲವಾರು ಹಳೆಯ ಪತ್ರ ಪುಸ್ತಕಗಳನ್ನೂ ಒದಗಿಸಿದರು. ಅವರು ಮಾಡಿದ ಉಪಕಾರವನ್ನು ನಾನು ಮರೆಯು ವಂತಿಲ್ಲ. ಅವರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ. ಅದೇ ರೀತಿ ಕಾಮತರ ಕೆಲವು ಕೃತಿಗಳನ್ನು ನನಗೆ ಒದಗಿಸಿದ ಕೊಲೆಕಾಡಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗಣಪತಿ ಶೆಣೈ, ಶ್ರೀ ರಾಮದಾಸ ಭಟ್, ಮೂಲ್ಕಿ, ಅವರಿಗೂ, ಮೂಲ್ಕಿಯ ಯೂನಿಯನ್ ಕ್ಲಬ್ಬಿನ ಪದಾಧಿಕಾರಿಗಳಿಗೂ ನಾನು ಕೃತಜ್ಞನಾಗಿದ್ದೇನೆ.

ಈ ಕೃತಿಯನ್ನು ಬರೆಯುವಾಗ ನನ್ನ ವಿದ್ಯಾರ್ಥಿಮಿತ್ರ ಶ್ರೀ ಎಂ. ಭಾಸ್ಕರ ಕುಡ್ವ ಅವರು ನನಗೆ ಸಹಕಾರ ನೀಡಿದ್ದಾರೆ. ಅವರಿಗೂ ನನ್ನ ಅಭಿನಂದನೆಗಳು.

ಪುಸ್ತಕದ ಹಸ್ತಪ್ರತಿಯನ್ನು ಓದಿ, ತಿದ್ದಿದ ಶ್ರೀ ಹರಿನಾರಾಯಣ ಮಾಡಾವು ಅವರನ್ನು ತುಂಬುಹೃದಯದಿಂದ ನೆನೆಯುತ್ತೇನೆ.

ಕೊನೆಯ ಒಂದು ಮಾತು. ಈ ಪುಸ್ತಕದಲ್ಲಿ ನನಗೆ ಸಿಕ್ಕಿದ ಕಾಮತರ ಕೃತಿಗಳ ಪರಿಚಯವನ್ನು ತಮಗೆ ಮಾಡಿಕೊಟ್ಟಿದ್ದೇನೆ. ಇದೀಗ ಇವುಗಳ ವ್ಯಾಪಕ ವಿಮರ್ಶೆಯಾಗಬೇಕಾಗಿದೆ. ಈ ಅತ್ಯಂತ ಜವಾಬ್ದಾರಿಯುತವಾದ ಕೆಲಸವನ್ನು ನಾಡಿನ ಖ್ಯಾತ ವಿಮರ್ಶಕರು ಮಾಡಬೇಕೆಂದು ಅವರನ್ನು ಕಳಕಳಿಯಿಂದ ವಿನಂತಿಸುತ್ತಿದ್ದೇನೆ. ಕಾಮತರ ಎಲ್ಲ ಕೃತಿಗಳನ್ನು ಸಂಗ್ರಹಿಸಿ, ಒಂದು ಸಂಪುಟವನ್ನು ಯಾರಾದರೂ ಪ್ರಕಟಿಸಿದಲ್ಲಿ, ಅದೊಂದು ದೊಡ್ಡ ಪುಣ್ಯದ ಕೆಲಸವಾದೀತು. ಆ ಕೆಲಸವನ್ನು ಯಾರಾದರೂ ಅವಶ್ಯ ಮಾಡುತ್ತಾರೆ ಎಂಬ ವಿಶ್ವಾಸ ನನ್ನದು.

ವಿಜಯಾ ಕಾಲೇಜು
ಮೂಲ್ಕಿ (ದ. ಕ.)
ತಾ. 29—2—1984

ಜಿ. ವರದರಾಯ ಪೈ

ಮುನ್ನುಡಿ

ದಕ್ಷಿಣಕನ್ನಡ ಜಿಲ್ಲೆಯ ಹಿರಿಯ ಸಾಹಿತಿಗಳಲ್ಲಿ ದಿ। ಎಮ್. ಎನ್. ಕಾಮತರು ಚಿರಸ್ಮರಣೀಯರು. ಈ ಶತಮಾನದ ಆರಂಭದ ದಶಕಗಳಲ್ಲಿ ಪ್ರಚಲಿತವಾಗಿದ್ದ ಇಂಗ್ಲಿಷ್ ಮಾಧ್ಯಮದಲ್ಲಿ ವ್ಯಾಸಂಗ ನಡೆಸಿ, ಆಂಗ್ಲಸಾಹಿತ್ಯದ ಪ್ರಭಾವ, ಪ್ರೇರಣೆಗಳಿಂದ ಹೊಸ ಅನುಭವಗಳನ್ನು ಮೈಗೂಡಿಸಿಕೊಂಡು, ಬಂಗಾಳಿ ಭಾಷೆ-ಸಾಹಿತ್ಯಗಳ ಅಧ್ಯಯನದಿಂದ ನಾಡು-ನುಡಿಗಳ ಕಡೆಗೆ ಸ್ಪಂದಿತರಾಗಿ, ತಮ್ಮ ಕವನ, ಕತೆ, ಗದ್ಯ ಲೇಖನ, ಸಂಪಾದಕೀಯ, ನಾಟಕಗಳಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ಎಮ್. ಎನ್. ಕಾಮತರು. ಆ ಕಾಲದ ಸಾಹಿತ್ಯದಿಗ್ಗಜಗಳಾದ ಪಂಜೆ ಮಂಗೇಶರಾಯರು ಮತ್ತು ಮಂಜೇಶ್ವರ ಗೋವಿಂದ ಪೈ ಅವರಿಂದ ಮುಕ್ತಪ್ರಶಂಸೆಯನ್ನು ಪಡೆದವರು. ವೈಯಕ್ತಿಕ ಜೀವನದ ಬಡತನದ ಬವಣೆ, ಅಧ್ಯಾಪಕತನದ ಇತಿ-ಮಿತಿಗಳು, ಉದರಂಭರಣಕ್ಕಾಗಿಯೇ ಲೇಖನಿಯನ್ನು ಬಳಸಬೇಕಾದುದು, ಪಠ್ಯ ಪುಸ್ತಕ ಮತ್ತು ಪತ್ರಿಕಾಪ್ರಕಟಣೆಯ ಸಾಲ-ಸೋಲಗಳು, ಹೆಚ್ಚಿನ ಚಿಂತನೆಗೆ ಕಾಲಾವಕಾಶವಿಲ್ಲದುದು - ಬಹುಶಃ ಅವರಿಗೆ ಶ್ರೇಷ್ಠಮಟ್ಟದ ಕೃತಿರಚನೆಗೆ ಅಡ್ಡಿಯನ್ನೊಡ್ಡಿದ ಕಾರಣಗಳೆನ್ನಬಹುದು. ಆದರೂ, ಅವರ ಕವನಗಳು, ನಾಟಕಗಳು, ಲಲಿತಪ್ರಬಂಧಗಳು, ಸಣ್ಣಕತೆಗಳು ಅವರನ್ನು ಕನ್ನಡ ನವೋದಯ ಸಾಹಿತ್ಯದ ಗಣ್ಯರನ್ನಾಗಿಸಿವೆ. 1940ರಲ್ಲಿ ಬೆಂಗಳೂರಿನಲ್ಲಿ ಜರಗಿದ ಕನ್ನಡ ಕತೆಗಾರರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದುದು, ಅವರಿಗೆ ಸಂದ ಸೂಕ್ತ ಗೌರವವಾಗಿದೆ.

ಎಮ್. ಎನ್. ಕಾಮತರು ದಕ್ಷ ಅಧ್ಯಾಪಕರು; ಕ್ರಾಂತಿಕಾರಕಧೋರಣೆಯ ಸಾಹಿತಿಗಳು. ಜಾತಿಭೇದ, ವರದಕ್ಷಿಣೆಯ ಪಿಡುಗು, ಧಾರ್ಮಿಕ ಢಾಂಬಿಕತನ, ಶೋಷಣೆ, ಜಿಪುಣತನಗಳ ವಿರುದ್ಧ ತಮ್ಮ ಲೇಖನಿಯನ್ನು ಬಳಸಿದವರು. ಗಾಂಧೀತತ್ವಗಳನ್ನು ಮೆಚ್ಚಿದ ಕಾಮತರು ಸಾಮಾಜಿಕ ಅಸಮಾನತೆಯ ವಿರುದ್ಧ ದನಿಯೆತ್ತಿದವರು. ತಮ್ಮ ಕವನ, ನಾಟಕ, ಲೇಖನಗಳಲ್ಲಿ ಅದನ್ನು ಧಾರಾಳ ತೋರಿಸಿದವರು. ತಮ್ಮ ಹಾಡುಗಾರಿಕೆಯಿಂದ ಹಾಗೂ ಭಾಷಣಗಳಿಂದ ಜನರನ್ನು ಮೈಮರೆಸಿದವರು. ನಗೆಯ ಮಾತು-ಕತೆಗಳಿಂದ ರಂಜಿಸಿದವರು. ಹೀಗೆ-'ಬಟ್ಟ ಬೇಸಗೆಯ ಹೂ' ಆಗಿ, ಕನ್ನಡ ಪತ್ರಿಕೆಗಳಿಗೆ 'ಅಕ್ಷಯಪಾತ್ರ' ಆಗಿ, ಶಾಲಾ ಕಾಲೇಜುಗಳಲ್ಲಿ ಅಭಿನಯಿಸಲು ಯೋಗ್ಯವಾದ ಕನ್ನಡ ಏಕಾಂಕನಾಟಕಗಳನ್ನು ರಚಿಸಿ, ದಿಗ್ದರ್ಶಿಸಿದವರಲ್ಲಿ ಮೊದಲಿಗರಾಗಿ, ರವೀಂದ್ರನಾಥ ಠಾಕೂರರ 'ಎಲ್ಲಿ ಮನಕಳುಕಿರದೊ, ಎಲ್ಲಿ ತಲೆಬಾಗಿರದೊ' ಕವನದ ಭಾಷಾಂತರಕಾರರಾಗಿ, ಶಾಲೆ ಶಾಲೆಗಳ ಮಕ್ಕಳಿಗೆ ಆ ಪ್ರಸಿದ್ಧ ಪ್ರಾರ್ಥನಾಗೀತೆಯನ್ನು ನೀಡಿದವರಾಗಿ, ದಕ್ಷಿಣಕನ್ನಡ ಜಿಲ್ಲೆಯ ಜನಪ್ರಿಯ ಸಾಹಿತಿಯಾಗಿ ಅಮರರಾದವರು.

ಎಮ್. ಎನ್. ಕಾಮತರ ಜನ್ಮಶತಮಾನೋತ್ಸವದ ಸಂವತ್ಸರ ಇದೀಗ ಕಳೆದಿದೆ. ಜನಮನದಲ್ಲಿ ಕನ್ನಡಸಾಹಿತ್ಯದ ಈ ದಿವ್ಯಚೇತನದ ಸಂಸ್ಮರಣೆ ಮರವೆಯ ಆಳದಿಂದ ಮೂಡಿಬರಬೇಕಾದ ಸನ್ನಿವೇಶ ಸಮಾಹಿತವಾಗಿದೆ. ಮರೆತುಹೋದ,

ಅಲ್ಲಲ್ಲಿ ಚೆನರಿಹೋದ, ಅಲಭ್ಯವಾದ ಅವರ ಕೃತಿಗಳನ್ನು ಸಂಗ್ರಹಿಸಿ, ಪ್ರದರ್ಶಿಸಿ, ಸಂಕಲನರೂಪದಲ್ಲಿ ಯಥಾಸಾಧ್ಯ ಪ್ರಕಟಿಸಿ, ಅವರು ಕನ್ನಡ ನಾಡಿನಲ್ಲಿ ಹಾಸು ಹೊಕ್ಕಾಗುವಂತೆ ಸಾಹಿತ್ಯಾಭಿಮಾನಿಗಳು ಇಂದು ಅವಶ್ಯ ಮಾಡಬೇಕಾಗಿದೆ. ಇತ್ತೀಚೆಗೆ ಡಾ| ಕೋಟ ಶಿವರಾಮ ಕಾರಂತರು ಮಂಗಳೂರಲ್ಲಿ ಜರಗಿದ ದಿ| ಮುಳಿಯ ತಿಮ್ಮಪ್ಪಯ್ಯನವರ ಸಂಸ್ಮರಣ ಸಮಾರಂಭದ ಅಧ್ಯಕ್ಷಪೀಠದಿಂದ, "ನಮ್ಮ ಜಿಲ್ಲೆಯ ಅನೇಕ ಸಾಹಿತಿಗಳ ನೆನಪು ಈ ಹೊತ್ತು ಜನರಿಂದ ಮರೆಯಾಗಿದೆ. ಅವರಲ್ಲಿ ಎಮ್. ಎನ್. ಕಾಮತ್ ಒಬ್ಬರು. ಇದು ಅವರ ಜನ್ಮಶತಮಾನದ ವರ್ಷ" ಎಂದು ಎಚ್ಚರಿಸಿದ ಮಾತು, ಪುತ್ತೂರಿನಲ್ಲಿ ನೆರವೇರಲಿರುವ ಎಮ್. ಎನ್. ಕಾಮತರ ಜನ್ಮ ಶತಮಾನೋತ್ಸವದ ಆಚರಣೆಗೂ, ಕರ್ನಾಟಕ ಸಂಘದ ವತಿಯಿಂದ ತರುಣ ಸಾಹಿತಿ ಶ್ರೀ ಜಿ. ವರದರಾಯ ಪೈಯವರ ಈ ಕೃತಿ ಪ್ರಕಟಣೆಗೂ ಪ್ರೇರಣೆಯಾಯಿತು.

ಶ್ರೀ ಜಿ. ವರಧರಾಯ ಪೈ ಅವರ 'ಎಮ್.ಎನ್. ಕಾಮತ್-ಒಂದು ಪರಿಚಯ' ಎಂಬ ಈ ಕಿರುಹೊತ್ತಗೆ ಹೊಸತಲೆಮಾರಿನವರಿಗೆ ಕಾಮತರ ಪರಿಚಯವನ್ನು ಮಾಡಿಕೊಡುವ ದೃಷ್ಟಿಯಿಂದ ಗಮನಾರ್ಹವಾಗುತ್ತದೆ. ಹಲವು ಆಕರಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ, ತಮಗೆ ಲಭ್ಯವಾದ ಪತ್ರಪುಸ್ತಕಗಳನ್ನೂ, ಕಾಮತರ ಕೃತಿಗಳನ್ನೂ ಪರಾಂಬರಿಸಿ, ಇದರಲ್ಲಿ ಎಮ್. ಎನ್. ಕಾಮತರ ಬದುಕು-ಬರೆಹಗಳ ಪರಿಚಯವನ್ನು ಸ್ಥೂಲವಾಗಿ ಶ್ರೀಯುತರು ಮಾಡಿದ್ದಾರೆ. ಎಮ್. ಎನ್. ಕಾಮತ ರನ್ನು ಕುರಿತು ಮರೆದವರನ್ನು ಜಾಗೃತಗೊಳಿಸಲು, ಅರಿಯದವರಿಗೆ ಪರಿಚಯ ನೀಡಲು, ಆಸಕ್ತರಿಗೆ ಆ ನಿಟ್ಟಿನಲ್ಲಿ ಮುಂದುವರಿಯಲು ಇದು ಮಾರ್ಗದರ್ಶಿಯಾಗು ತ್ತದೆ. ಎಮ್. ಎನ್. ಕಾಮತರ ಬಾಲ್ಯ, ವಿದ್ಯಾಭ್ಯಾಸ, ವಿವಾಹ, ಬದುಕಿನ ಬವಣೆ, ಕ್ರಾಂತಿಕಾರಕ ಮನೋಧರ್ಮ, ಸಾಮಾಜಿಕ ಕಳಕಳಿ, ಕನ್ನಡದ ದುಡಿಮೆಯ ನಾನಾ ಮಜಲುಗಳು, ಅವರ ಲಭ್ಯ ಕೃತಿಗಳ ಪರಿಚಯಗಳು - ಈ ಕೃತಿಯಲ್ಲಿ ಒಡಮೂಡಿವೆ.

'ಜಿ. ಎಸ್. ಲಕ್ಷ್ಮಣ ಪೈಯವರ ಬದುಕು-ಬರೆಹ' ಎಂಬ ತಮ್ಮ ಕೃತಿಯಿಂದ ಈಗಾಗಲೆ ಸಾಹಿತ್ಯಕ್ಷೇತ್ರದಲ್ಲಿ ಕಾಲಿರಿಸಿದ ಶ್ರೀ ಜಿ. ವರದರಾಯ ಪೈ ಅವರ ಈ ಕೃತಿ ಕೂಡ ಓದುಗರ ಮೆಚ್ಚುಗೆಗಳಿಸಿ, ಸಾಹಿತ್ಯಾಸಕ್ತರಲ್ಲಿ ಎಮ್. ಎನ್. ಕಾಮತರ ಕುರಿತು ಕುತೂಹಲ, ಅಧ್ಯಯನಶೀಲತೆಗಳನ್ನು ಬೆಳೆಸಲಿ ಎಂದು ಆಶಿಸುತ್ತೇನೆ. ಇದು, ಎಮ್. ಎನ್. ಕಾಮತರ ಕುರಿತು ಕೆಲವು ಅಮೂಲ್ಯ ದಾಖಲೆಗಳನ್ನೂ ಮಾಹಿತಿಗಳನ್ನೂ ಒದಗಿಸುವಷ್ಟರ ಮಟ್ಟಿನ ಸೀಮಿತ ಉದ್ದೇಶವನ್ನಿಟ್ಟುಕೊಂಡಿರುವ ಕೃತಿಯಾದುದರಿಂದ, ಆ ನಿಟ್ಟಿನಲ್ಲಿ ಸಾರ್ಥಕವಾಗುತ್ತದೆ. ಕೃತಿಕಾರರಿಂದ ಇನ್ನೂ ಹೆಚ್ಚಿನ ಸಾಹಿತ್ಯಕ ದುಡಿಮೆ ಸಶಕ್ತವಾಗಿ ಮುಂದುವರಿಯಲಿ ಎಂದು ಹಾರೈಸುತ್ತೇನೆ.

ವಿ. ಬಿ. ಮೊಳೆಯಾರ

ದರ್ಬೆ, ಪುತ್ತೂರು, ದ. ಕ.
ಮಾರ್ಚ್ 5, 1984

ಪ್ರಾಧ್ಯಾಪಕ ಮತ್ತು ಮುಖ್ಯಸ್ಥ
ಕನ್ನಡ ವಿಭಾಗ, ಸಂತ ಫಿಲೋಮಿನಾ ಕಾಲೇಜು

ಪ್ರಾರ್ಥನೆ

ಎಲ್ಲಿ ಮನಕಳುಕಿರದೊ ಎಲ್ಲಿ ತಲೆಬಾಗಿರದೊ
ಎಲ್ಲಿ ತಿಳಿವಿಗೆ ತೊಡಕು ತೋರದಿಹುದಲ್ಲಿ

ಎಲ್ಲಿ ಮನೆಯೊಕ್ಕಟ್ಟು ಸಂಸಾರ ನೆಲೆಗಟ್ಟು
ಧೂಳೊಡೆಯದಿಹುದೊ ತಾನಾನಾಡಿನಲ್ಲಿ

ಎಲ್ಲಿ ಸತ್ಯದಗಾಧ ನೆಲೆಯಿಂದ ಸವಿಮಾತು
ಸಲ್ಲಲಿತ ನಡೆಯಿಂದ ಮುಂಬರಿವುದಲ್ಲಿ

ಎಲ್ಲಿ ದಣಿವಿರದ ಸಾಧನೆಯು ಸಫಲತೆ ಕಡೆಗೆ
ತೋಳ ನೀಡಿಹುದೊ ತಾನಾನಾಡಿನಲ್ಲಿ

ಎಲ್ಲಿ ಸುವಿಚಾರ ಜಲದೊಸರು ನಿರ್ಮಲ ಹರಿದು
ಕಾಳು ರೂಢಿಯ ಮರಳೊಳಿಂಗಿ ಕೆಡದಲ್ಲಿ

ಎಲ್ಲಿ ನೀನೆಮ್ಮ ಚಿಂತನವನುದ್ಯಮವ ಸುವಿ-
ಶಾಲತೆಯ ಪೂರ್ಣತೆಗೆ ಮುನ್ನಡೆಸುವಲ್ಲಿ

ಅಲ್ಲಿಯಾ ಬಂಧನರಹಿತ ಸುಖದ ಸ್ವರ್ಗದಲಿ
ಪಾಲಿಸೈ ಪಿತ ನಮ್ಮ ನಾಡೆಚ್ಚರಿರಲಿ.

ಎಮ್. ಎನ್. ಕಾಮತ್

ಅಂದಿನ ಆವೂರು

ದಿ। ಎಂ. ಎನ್. ಕಾಮತ್ ಅವರು ಕನ್ನಡ ನವೋದಯ ಸಾಹಿತ್ಯದ ದುಡಿಮೆಗಾರರಲ್ಲೊಬ್ಬರಾಗಿ ಗಮನಾರ್ಹರು. ಕನ್ನಡದಲ್ಲಿ ಸಣ್ಣ ಕತೆ ಮತ್ತು ನಾಟಕಗಳನ್ನು ಬರೆದ ಆದ್ಯರಲ್ಲಿ ಒಬ್ಬರಾಗಿ ಕವಿತೆ, ಕಾದಂಬರಿ, ಹರಟೆ, ಲಲಿತ ಪ್ರಬಂಧಗಳು ಇತ್ಯಾದಿ ಪ್ರಕಾರಗಳಲ್ಲಿ ಗಣನೀಯ ಕೊಡುಗೆಯನ್ನು ನೀಡಿದವರು. ಕಡುಬಡತನದ ಗೋಳು ಅವರ ಪ್ರತಿಭಾ ವಿಕಸನಕ್ಕೆ ತಡೆಯಾದರೂ ಅವರ ಸಾಹಿತ್ಯಕ ಸಾಧನೆ ಅಲ್ಪವೇನಲ್ಲ. ಹೀಗಿದ್ದೂ, ಇಂದು ಕನ್ನಡ ನಾಡು, ನುಡಿಗಳಲ್ಲಿ ಕಾಮತರ ಕುರಿತು ಮರವೆ ಮುಸುಕಿದಂತಿರುವುದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡಾ ಹೊಸ ತಲೆಮಾರಿನವರು ಅವರ ಸಾಹಿತ್ಯದ ಬಗೆಗೆ ಅಜ್ಞರಂತಿರುವುದು ತುಂಬ ವಿಷಾದಕ್ಕೆ ಎಡೆಮಾಡುವಂತಿದೆ. ಇಂಥ ಸ್ಥಿತಿಯು ದೂರವಾಗಿ, ಕನ್ನಡ ಸಾಹಿತ್ಯಲೋಕದಲ್ಲಿ ಎಂ. ಎಸ್. ಕಾಮತರಿಗೆ ಸೂಕ್ತ ಸ್ಥಾನದ ಸ್ಥಾಪನೆಯಾಗಲೆಂಬ ಸದಾಶಯದೊಂದಿಗೆ ಈ ಬರೆಹ ತೊಡಗುತ್ತದೆ.

1940ರ ಜನವರಿಯಲ್ಲಿ ಬೆಂಗಳೂರಿನಲ್ಲಿ ನಡೆದ ಮೊದಲ ಕನ್ನಡ ಕಥೆಗಾರರ ಸಮ್ಮೇಳನಕ್ಕೆ ಕಾಮತರು ಅಧ್ಯಕ್ಷರಾಗಿದ್ದರು. ಬೆಂಗಳೂರಿನಿಂದ ಊರಿಗೆ ಹಿಂತಿರುಗಿದ ಅವರು ಉದರ ಬೇನೆಯಿಂದಾಗಿ ಹಾಸಿಗೆ ಹಿಡಿದರು; ಅದೇ ವರ್ಷ ಎಪ್ರಿಲ್ 24ರಂದು ನಿಧನರಾದಾಗ ಅವರಿಗೆ 57 ವರ್ಷ ಪ್ರಾಯ. ಮುಂದಿನ ವರ್ಷ ಮಂಗಳೂರಿನ 'ಮಿತ್ರಮಂಡಲಿ' ಕಾಮತರ ಸಣ್ಣ ಕತೆಗಳ ಸಂಕಲನವೊಂದನ್ನು ಪ್ರಕಟಿಸಿತು." ಅಂದಿನ ಆವೂರು" ಎಂಬ ಈ ಗ್ರಂಥವು ಕೇವಲ ಕಥಾಸಂಕಲನವಷ್ಟೇ ಅಲ್ಲ; ಇದೊಂದು ಪುಟ್ಟ ಸಂಭಾವನಾ ಗ್ರಂಥವೂ ಆಗಿದೆ. ಮಿತ್ರಮಂಡಲಿಯೂ ಈ

ಗ್ರಂಥದ ಸಂಪಾದಕರಾದ ಜಿ. ವಾಮನ ಭಟ್ಟ ಅವರೂ ಈ ಒಂದು ಉಪಯುಕ್ತ ಕೆಲಸವನ್ನು ಮಾಡಿದ್ದರಿಂದ ಕಾಮತರ ಬಗ್ಗೆ ಎಷ್ಟೋ ವಿಷಯಗಳನ್ನು ತಿಳಿಯಲು ಸಾಧ್ಯವಾಗಿದೆ.

ಈ ಗ್ರಂಥದ ಮುನ್ನುಡಿಯಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಬರೆದ ಮಾತುಗಳು ಮನನೀಯವಾಗಿವೆ. "...........ಬಾಳಿನಲ್ಲಿ ಮುಖ್ಯ ತತ್ವ ಬೆಳಕು. ಯಾವುದು ಕಣ್ಣಿಗೆ ಬೆಳಕೋ ಅದೇ ದೇಹದಲ್ಲಿ ಜೀವ, ಮನಸ್ಸಿನಲ್ಲಿ ಅರಿವು, ಆತ್ಮದಲ್ಲಿ ಆನಂದ. ಪುಣ್ಯವಂತರು ಎಲ್ಲಿದ್ದರೂ ಎಂತಿದ್ದರೂ, ಬೆಳಕಾಗಿ, ಜೀವವಾಗಿ, ಅರಿವಾಗಿ, ಆನಂದವಾಗಿ ಇರುತ್ತಾರೆ. ಅವರು ತಾವೂ ಇವನ್ನು ಅನುಭವಿಸುವರು, ಇತರರಿಗೆ ಇವನ್ನು ಕೊಡುವರು. ಇದು ಹೆಚ್ಚಾದಷ್ಟೂ ಒಬ್ಬ ವ್ಯಕ್ತಿಯ ಪ್ರಭಾವ ಹೆಚ್ಚುತ್ತದೆ. ಅವನಿಗೂ ತಿಳಿಯದೆ ಇತರರಿಗೂ ತಿಳಿಯದೆ ಅವನು ಒಳ್ಳೆಯ ಬಾಳಿನ ಕಾಂತಿಯುತವಾದ ಖಂಡ ಒಂದಾಗುತ್ತಾನೆ. ಕಾಮತರು ಇಂಥ ಒಬ್ಬ ವ್ಯಕ್ತಿ. ಕಾಮತರ ಬಾಳುವೆ ಎಷ್ಟು ಕಷ್ಟದ ದಾರಿಯಲ್ಲಿ ನಡೆಯಿತೆನ್ನುವುದನ್ನು ನಮ್ಮ ಮಿತ್ರರು ಬರೆದಿರುವ ಇಲ್ಲಿಯ ಲೇಖನಗಳಿಂದ ಕಾಣಬಹುದು. ಆದರೆ ಎಲ್ಲ ಕಷ್ಟವೂ ಕಾಮತರ ಧೃತಿಯ ಎದುರಿಗೆ ತಗ್ಗಿತು ಹೊರತಾಗಿ ಕಷ್ಟದ ಎದುರಿಗೆ ಕಾಮತರ ತಲೆ ತಗ್ಗಲಿಲ್ಲ.................................(ಸಮ್ಮೇಳನದಲ್ಲಿ) ಕಾಮತರ ಭಾಷಣವನ್ನು ಕೇಳುತ್ತ ಸಭೆ ಹತ್ತಾರು ಸಲ ನಗೆಯಿಂದ ತೂಗಿತು; ಕುಳಿತಷ್ಟು ಹೊತ್ತೂ ಒಂದು ಪಾಠವನ್ನು ಕಲಿಯಿತು; ಪಾಠವನ್ನು ಕಲಿಯುತ್ತಿದ್ದೇನೆಂದು ತಿಳಿಯದೆ ಆನಂದದಲ್ಲಿ ತೇಲಿತು. ಕಾಮತರ ಭಾಷಣ ಒಂದು ಕವಿತೆಯಂತಿತ್ತು. ಕಾಮತರು ಅದನ್ನು ಮಾಡುವುದರಲ್ಲಿ ತಮ್ಮ ಕವಿಮನೋಧರ್ಮವನ್ನು ವ್ಯವಹರಿಸಿ ಸಭೆಯನ್ನು ಒಮ್ಮೆಗೇ ತಮ್ಮ ಅನುಭವದ ಎತ್ತರಕ್ಕೆ ಸೆಳೆದುಕೊಂಡರು"

"ಕಾಮತರು ಸ್ವಭಾವದಿಂದ ಕವಿಗಳಾದದ್ದರಿಂದ ಇದು ಸಾಧ್ಯವಾಯಿತು. ಸಾಮಾನ್ಯ ಮನುಷ್ಯರಿಗೆ ಲೋಕವು ವಸ್ತುಗಳ ಒಂದು ಕಟ್ಟಾಗಿ ಕಾಣುತ್ತದೆ. ವಿಚಾರವಂತರಿಗೆ ಅದು ತತ್ವಗಳ ಮೂಟೆಯೆಂದು ತೋರುತ್ತದೆ. ಕವಿಯಾದವನಿಗೆ ಈ ಎರಡು ಭಾವನೆಗಳ ಮಿಲನದ ಒಂದು ದೃಷ್ಟಿ ದೊರಕೊಂಡಿರುತ್ತದೆ. ಒಬ್ಬನಿಗೆ ಒಂದು ಕಣ್ಣಿನ ಕಣ್ಣೀರು ಆ ವ್ಯಕ್ತಿಯ ಕಣ್ಣೀರಾಗಿ ಕಾಣುತ್ತದೆ; ಉಳಿದ ಲೋಕನೊಂದಂತೆ ಅದರಿಂದ ಅವನಿಗೆ ತೋರುವುದಿಲ್ಲ. ಮತ್ತೊಬ್ಬನಿಗೆ ಒಬ್ಬ ವ್ಯಕ್ತಿಯ ಕಣ್ಣೀರು ಎಲ್ಲ ಲೋಕ ಅನುಭವಿಸುತ್ತಿರುವ ನೋವಿನ ಚಿಹ್ನೆಯಾಗುತ್ತದೆ. ಬದುಕೇ ಹೀಗೆ, ಇದಕ್ಕೆ ಪರಿವೇದನೆ ಏನು ? ಎಂದು ಅವನು ಶಾಂತಿಯನ್ನರಸುತ್ತಾನೆ. ಕವಿ ಯಾವ ಒಂದು ಜೀವದ ನೋವಿನಲ್ಲೂ ನೋಯುತ್ತಾನೆ; ಈ ಸಹಾನುಭೂತಿಯಿಂದ ಅದನ್ನು ಎಲ್ಲ ಬಾಳ ನೋವನ್ನು ಮಾಡಿಕೊಂಡು ಅನುಕಂಪಿಸುತ್ತಾನೆ. ಹತ್ತು ಜನ ಅಳುತ್ತ ಹತ್ತು ಜನ ನಗುತ್ತ, ಸಾವಿರ ಜನ ಗಾಣದ ಎತ್ತುಗಳಂತೆ ಎರಡೂ ಇಲ್ಲದ

ದಿನದ ಬದುಕಿನಲ್ಲಿ ಸುತ್ತುತ್ತಿರುವ ರೀತಿಯನ್ನು ನೋಡಿ ಇವನು ಏಕಕ್ಷಣದಲ್ಲಿ ನಗೆಯಿಂದ ನೋವಿಂದ ಕಣ್ಣಲ್ಲಿ ನೀರನ್ನು ತುಂಬಿಕೊಳ್ಳುತ್ತಾನೆ. ರಕ್ತ ಹೀಗೆ ನೀರಾದರೂ ಅವನು ಎದೆಕುಗ್ಗುವುದಿಲ್ಲ. ಆ ನೀರನ್ನು ರಸಮಾಡಿಕೊಂಡು ಮಾತಲ್ಲಿ ಬೆರೆಸುತ್ತಾನೆ. ಇಂಥವನು ಆಡುವ ಮಾತೆಲ್ಲ ಕವಿತೆಯೇ ಆಗುತ್ತದೆ. ಅನುಭವ ನಿಜವಾದಷ್ಟೂ ಈ ಮಾತು ನೆಲದ ಮೇಲೆ ನಿಂತಿರುತ್ತದೆ; ತೀವ್ರವಾದಷ್ಟೂ ಮುಗಿಲನ್ನು ಮುಟ್ಟುತ್ತದೆ. ಕಾಮತರ ಮಾತಿನಲ್ಲಿ ಈ ಎರಡು ಗುಣವೂ ಕಾಣುತ್ತಿತ್ತು. ಅವರು ನಮ್ಮ ಜನರ ವಿಷಯದಲ್ಲಿ, ಭಾಷೆಯ ವಿಷಯದಲ್ಲಿ, ತುಂಬ ತಿಳಿದ ಒಂದು ಕನಿಕರದಿಂದ ಮಾತನಾಡಿದರು. ನಮ್ಮ ಭವಿಷ್ಯವನ್ನು ಕುರಿತು ಆಸೆಯಿಂದ ತುಂಬಿದ ಧ್ಯೇಯ ಒಂದನ್ನು ಹುರಿದುಂಬಿ ಹೊಗಳಿದರು."

"ಜೊತೆಗೆ ಕಾಮತರು ಕತೆಗಾರರು. ಆ ಒಂದು ಭಾಷಣದಲ್ಲಿ ಅವರು ಎಲ್ಲಾದರೂ ಇಪ್ಪತ್ತು ಕಥೆ ಹೇಳಿರಬೇಕು. ಒಂದೊಂದು ಸಲವೂ ಸಭೆ ಇಲ್ಲ ನಗಬೇಕು, ಇಲ್ಲ ಅಯ್ಯೋ ಎನ್ನಬೇಕು, ಇಲ್ಲ ಹೀಗುಂಟೆ ಎನ್ನಬೇಕು, ಇಲ್ಲ ಚಮತ್ಕೃತವಾಗಬೇಕು.ಒಂದೊಂದು ಇಂಥ ಕಥೆಯನ್ನು ಹೇಳುವುದರಲ್ಲಿಯೂ ಕಾಮತರ ಜಾಣ್ಮೆ ಚೆನ್ನಾಗಿ ಕಾಣುತ್ತಿತ್ತು. ಮಾತು ಸಾಮಾನ್ಯವಾಗಿ ಆರಂಭವಾಗಿ ಒಂದರ್ಧ ನಿಮಿಷದಲ್ಲಿ ಒಂದು ಸನ್ನಿವೇಶದ ಚಿತ್ರ ಆಗಿ ಕೊನೆಗೆ ಇದು ನಡೆಯಿತೆಂದು ಅವರು ಹೇಳಿದಾಗ ಕೇಳಿದವರ ಮನಸ್ಸು ತಟ್ಟನೆ ಸೋಲುವುದು. ಇದಾಯಿತೆಂದು ಹೇಳುವುದಕ್ಕೆ ಮೊದಲು ಕಾಮತರು ಜನರ ಮನಸ್ಸನ್ನು ಹವಣಿಸಿಕೊಳ್ಳುತ್ತಿದ್ದುದೇ ಒಂದು ಕುಶಲ ಕರ್ಮ. ಸಹಜವಾದ ಕತೆಗಾರಿಕೆ ಅಭ್ಯಾಸದಿಂದ ಹದಗೊಳ್ಳದೆ ಈ ರೀತಿಯ ಜಾಣ್ಮೆ ಸಾಧ್ಯವಲ್ಲ.................................ಕಾಮತರು ಶ್ರೇಷ್ಠ ಸಾಹಿತಿಗಳೆನ್ನುವುದು ಇಲ್ಲಿ ಸೇರಿರುವಷ್ಟು ಲೇಖನಗಳಿಂದಲೇ ಕಾಣುತ್ತದೆ. ಈ ಒಂದು ಹಿಡಿಯ ಪುಟದ ಬರವಣಿಗೆಯಿಂದಲೇ ಅವರು ತಮ್ಮ ಪ್ರಾಂತದ ಒಂದು ಊರಿನ ಚಿತ್ರವನ್ನು ಎಷ್ಟೋ ಸುಂದರವಾಗಿ, ಎಷ್ಟೋ ಸ್ಪಷ್ಟವಾಗಿ ಕಲ್ಪಿಸಿದ್ದಾರೆ. ಈ ಬರಹ ಅತ್ಯುತ್ತಮ ವರ್ಗದ್ದು. ಇದರ ತಳಹದಿ ಲೋಕವನ್ನು ಕಣ್ತೆರೆದು ನೋಡುವ ನೋಟ, ಮನಪೂರ್ತಿ ಅಪ್ಪಿಕೊಳ್ಳುವ ಔದಾರ್ಯ; ಇದರ ಸಾಧನ ವಿವರವನ್ನು ಆಯ್ದು ಹೇಳುವ ಜಾಣ್ಮೆ, ಕೋದು ತೋರುವ ಚಳಕ. ಭೂಲೋಕದ ಮಗು ಸ್ವರ್ಗಲೋಕ ಎಂಬುದನ್ನು ಊಹಿಸತೊಡಗಿ ಭೂಮಿಯ ಚೆಲುವನ್ನು ಮರೆಯುವುದರಿಂದ ಒಂದು ರೀತಿಯ ಸಾಹಿತ್ಯ ಬರುತ್ತದೆ. ಆ ಸ್ವರ್ಗವನ್ನು ಕಟ್ಟುವುದಕ್ಕೂ ಭೂಮಿಯ ಮಗು ಭೂಮಿಯ ಚೆಲುವಿನ ಪರಿಕರವನ್ನೇ ಉಪಯೋಗಿಸುತ್ತದೆ. ಅವರ ಊಹೆಗೆ ಕಾರಣವಾಗುವ ಭಾವದ ಅಫೀಮು ಕೂಡ ಭೂಮಿಯದೇ ಎಂದು ತೋರುತ್ತದೆ. ಭೂಮಿಯ ಮಗು ಭೂಮಿಯದನ್ನಲ್ಲದೆ ಮತ್ತೇನನ್ನು ಬಲ್ಲದು? ಕಾಮತರದು ಇಂಥ ಸಾಹಿತ್ಯ ಅಲ್ಲ. ಕಂಡ ಸೃಷ್ಟಿಯನ್ನು ಅಪ್ಪಿಕೊಂಡು, ಹೊಡೆದರೂ ತಾಯನ್ನು ಬಿಡದೆ ಕಾಲಿಗೆ ಸುತ್ತುವ ಮಗುವಿನಂತೆ, ಕಠಿಣವಾದರೂ ಜೀವನದಲ್ಲಿ ಬೇಸರಪಡದೆ ಅವರು ಅದನ್ನು ಒಡಿಪರು.

ಚೇರಿ ಹಿಡಿದರೆ ಚುಚ್ಚುವ ಮುಳ್ಳು ಇವರ ಕೈಯ ಚಿತ್ರದಲ್ಲಿ ಅಡಗಿ ನಿಂತಿತು. ನಗೆ, ಕಣ್ಣೀರು, ಕನಿಕರ, ಅರಿವು ಇವುಗಳಿಂದ ಕೂಡಿರುವ ಈ ಚಿತ್ರಗಳನ್ನು ಅವರು ರಚಿಸಿ ತಮ್ಮ ಅನುಭವಕ್ಕೆ ರೂಪುಕೊಟ್ಟರು; ಜೊತೆಯ ಜನಕ್ಕೆ ಹರ್ಷವನ್ನೂ ತಿಳಿವನ್ನೂ ನೀಡಿದರು; ಸಾಹಿತ್ಯಕ್ಕೆ ರತ್ನಗಳನ್ನು ಸೇರಿಸಿದರು.. ನಮ್ಮ ಇತಿಹಾಸದ ದುರ್ದೈವದಿಂದ ನಿಜದಲ್ಲಿ ಒಂದಾದರೂ ತೋರಿಕೆಯಲ್ಲಿ ನಾಲ್ಕಾರಾಗಿರುವ ಕನ್ನಡದ ನಾಡು ತಾನು ಒಂದೆನ್ನುವುದನ್ನು ಅರಿಯುವುದಕ್ಕೆ ಕಾಮತರಿಂದ ಆಗಬೇಕಾಗಿದ್ದ ಕೆಲಸ ಇತ್ತು. ಅವರನ್ನು ಹಿರಿಯರೆಂದು ಗೆಳೆಯರೆಂದು ಪ್ರೀತಿಯಿಂದ ನೆನೆಯುವ ಜನರು ಅವರ ಆ ಧ್ಯೇಯವನ್ನು ಸಾಧಿಸುವುದರಲ್ಲಿ ತೊಡಗಬೇಕು.........................."

ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕಾಮತರ ಸಹಪಾಠಿಯಾಗಿದ್ದ, ಹಾಗೂ ಅವರ ಆಪ್ತಸ್ನೇಹಿತರಾಗಿದ್ದ ಎಂ. ಗೋವಿಂದ ಪೈ ಅವರು ಕಾಮತರ ಬದುಕು ಹೇಗೆ ಸಾಗಿತು? ಎಂಬುದನ್ನು ಸಂಕ್ಷಿಪ್ತವಾಗಿ ಈ ರೀತಿ ವಿವರಿಸಿದ್ದಾರೆ- "ಕಾಮತರು ಬಡತನದಲ್ಲಿಯೇ ಹುಟ್ಟಿ ಬಡತನದಲ್ಲಿಯೇ ಬೆಳೆದರು. ಬಡತನದಲ್ಲಿಯೇ ಬಾಳಿ ಬಡತನದಲ್ಲಿಯೇ ಕಂತಿದರು. ಕಾಲಿಗೆ ಎಳೆದರೆ ತಲೆಗೆ ಬಾರದ, ತಲೆಗೆ ಎಳೆದರೆ ಕಾಲಿಗೆ ಸಾಲದ ಕವುದಿಯನ್ನು ಹೊದ್ದುಕೊಂಡಾತನು ಅದನ್ನು ಅತ್ತ ಕಡೆಗೂ ಇತ್ತ ಕಡೆಗೂ ಎಳದಾಡುವುದರಲ್ಲಿಯೇ ಇರುಳೆಲ್ಲಾ ಕಳೆಯಬೇಕಾಗುವಂತೆ ಇವರ ಹಗಲಿರುಳು ಬಡತನದ ಸಂಗಡ ಹೋರಾಡುವುದರಲ್ಲಿಯೇ ಕಳೆಯಿತು. ಬಡವರಲ್ಲದಿದ್ದರೆ ಇವರ ಪ್ರತಿಭೆಗೆ ಇನ್ನೆಷ್ಟರ ವಿಕಾಸ ಒದಗುತ್ತಿದ್ದಿತೋ ಎಷ್ಟರ ಮನ್ನಣೆ ದೊರಕುತ್ತಿದ್ದಿತೋ ಅಷ್ಟು ಪ್ರಾಪ್ತಿಸದ ಬಗ್ಗೆ ಇವರ ಬಡತನವೂ ಹೀಗೊಂದು ಹಿರಿಯ ವಿದ್ರೂರವಾಯಿತಾದರೂ, ಬಿಸಿಲಿನ ಕಾವನ್ನೂ ನೀರಿನ ಅಭಾವವನ್ನೂ ತನಗಲ್ಲವೆಂದು ಈಡಾಡಿ ಈ ಬೆಟ್ಟಬೇಸಗೆಯ ಹೂವು ತೋರಿದ ಸೊಂಪೂ ಬೀರಿದ ಕಂಪೂ ವಿಸ್ಮಯನೀಯವೇ ಸೈ."

ಕಾಮತರ ಸಾಹಿತ್ಯದ ಬಗ್ಗೆ ಪೈ ಅವರು ಈ ರೀತಿ ಬರೆದಿದ್ದಾರೆ—"............ ಕಾಮತರೆಂದರೆ ಹಾಸ್ಯ, ಹಾಸ್ಯವೆಂದರೆ ಕಾಮತರೆಂಬ ಹೆಚ್ಚು ಮಂದಿಯ ನಂಬುಗೆ ಅಲ್ಲದುದಲ್ಲವಾದರೂ ಇವರ ಕಥೆಗಳಲ್ಲಿ ಹಾಸ್ಯವೇ ಅಲ್ಲ, ಮಿಕ್ಕ ರಸಗಳೂ ಬೇಕಾದಂತೆ ಇವೆ; ಸುಖದ ಸಿಹಿಯೂ ಇದೆ, ದುಃಖದ ಕಹಿಯೂ ಇದೆ; ಸಾಮಾನ್ಯನನ್ನು ಅಸಾಮಾನ್ಯವೆನಿಸುವ, ಅಸಾಮಾನ್ಯನನ್ನು ಸ್ವಜನೆನಿಸುವ ಅದೊಂದು ಕೌಶಲವೂ ಇದೆ. ಅವಲ್ಲದೆ ಗದಾಯುದ್ಧ, ಚಂಡಕೌಶಿಕ, ಭೀಷ್ಮನ ಕಥೆ, ಕರ್ಣನ ಕಥೆ, ಯಾದವ ಕೃಷ್ಣ, ಸೀತಾರಾಮ ಮೊದಲಾದ ಅನ್ಯ ಮಹಾಗ್ರಂಥಗಳ ಆಧಾರದಿಂದ ಇವರು ಬರೆದ ಪೌರಾಣಿಕ ಆಖ್ಯಾಯಿಕೆಗಳಲ್ಲಿಯೂ ಆಯಾ ಗ್ರಂಥಗಳಿಂದ ಆಯ್ದುಕೊಂಡ ಎಳೆಗಳನ್ನು ತನ್ನ ಮಗ್ಗದಲ್ಲಿ, ತನ್ನ ನುಡಿತದ, ತನ್ನ ಬಗೆತದ ಹಾಸುಹೊಕ್ಕುಗಳಲ್ಲಿ, ನೂತನವಾಗಿ ವಿಚಿತ್ರವಾಗಿ ನೇದಿರುವ ಚಳಕವಿದೆ. ಇವರ ಪರ್ಯಾಯ

ಸಿಂಹಾಸನ, ಪ್ರತಾಪಸಿಂಹ, ಚಂದ್ರರಾವ್ ಮೋರೇ ಮುಂತಾದ ಐತಿಹಾಸಿಕ ನಾಟಕಗಳಲ್ಲಿಯೂ ಪುನರ್ಜನ್ಮ, ಮರ್ಜಿ, ಪಂಚಕನ್ಯೆಯರು ಇತ್ಯಾದಿ ಸಾಮಾಜಿಕ ನಾಟಕಗಳಲ್ಲಿಯೂ ಪಾತ್ರರಚನೆಯೂ ಸಂಭಾಷಣೆಯೂ ಜೀವಂತವಾಗಿವೆ. ಇವರ ಕವಿತೆಗಳು ಒಟ್ಟಾರೆ ಎಷ್ಟಿವೆ, ಎಲ್ಲೆಲ್ಲಿ ಚದರಿವೆ ಎಂದು ನಾನರಿಯೆನಾದರೂ ನಾನು ಕಂಡಿರುವಷ್ಟರಲ್ಲಿ ನನ್ನ ನೆರಳು, ತೋಳನೂ ಕುರಿಯೂ, ಜೀವನ ಸಮಸ್ಯೆ, ಗೂಡಿನಲ್ಲಿಯ ಇಲಿ, ಬಾಲ ಕಳೆದ ನರಿಯ ಉಪದೇಶ, ಅನ್ಯ ಸಂಪದವೇಕೆ?, ಆನೆ ಆನೆಯೊ?, ಇರುವೆಯೂ ಮಿಡಿತೆಯೂ, ಸವಾರನ ಸಮಾಧಾನ, ನಮ್ಮ ಬೇಡಿಕೆ, ಗ್ರಾಮಸೇವಕರ ಹಾಡು, ಹೊಲೆಯನ ಹಂಬಲ, ಕರುಣಾಳುವಿಗೆ ಸ್ತೋತ್ರ, ದೀಪಗಳು ಹಾಗೂ ದಾಸರ ಪದಗಳ ಓಪಾದಿಯಲ್ಲಿ ದೇವರಿಗೆ ಮೊರೆಯಿಡುವ ಅವನ ಧರ್ಮ, ಬೆಂಬಲ, ತಾಯಿ, ಹೂವು ಹಂಬಲಿಸುವುದೇಕೆ?- ಮೊದಲಾದ ರಮಣೀಯವಾದ ವೈಣಿಕಗೀತಗಳು ಇಸಿದಾಗಿವೆ, ತನಿದಾಗಿವೆ, ದ್ರಾಕ್ಷೆಯ ಗೊಂಚಲಂತೆ ರಸಭರಿತವಾಗಿ ಬಳುಕುತ್ತವೆ. ಭಾವಗರ್ಭಿತವಾಗಿ ತುಳುಕುತ್ತವೆ."

"ಪ್ರಾಸವನ್ನು ಬಿಡುವುದೆಂದರೆ ಕಾಮತರಿಗೆ ಸೇರದು. ಅವರ ಪ್ರತ್ಯೇಕ ಪದ್ಯದಲ್ಲಿ ಪ್ರಾಸವಿದೆ, ಈಚೀಚೆಯ ಕೆಲವಲ್ಲಿ ಒಂದಲ್ಲವಾದರೆ ಎರಡಾದರೂ ಪ್ರಾಸಾಕ್ಷರಗಳಿವೆ. ಆದರೆ ಮಂಗಳೂರಿನ ತ್ರಿವೇಣಿಯ ದೀಪಾವಳಿಯ ಸಂಚಿಕೆಯಲ್ಲಿ (1937) ಪ್ರಕಟವಾದ ಅವರ 'ಏನು ಘಂಟಾನಾದವಿದು?' ಎಂಬ ಕವಿತೆ ಕವಿತೆಯೇ ಆದರೂ ಅದಕ್ಕೆ ನಿಯತವಾದ ಪ್ರಾಸವೂ ಇಲ್ಲ. ಛಂದಸ್ಸೆನಿಸತಕ್ಕ ಛಂದಸ್ಸೂ ಇಲ್ಲ. ವಾಲ್ಟ್ ವ್ಹಿಟ್ಮನ್ನನ ಕವಿತೆಗಳಂತೆ ಅದೊಂದು ಪದ್ಯದ ಸೋಗಿನ ಸ್ಫೂರ್ತಿಮಂತವಾದ ಗದ್ಯ ಕವಿತೆಯಷ್ಟೇ."

ಇನ್ನು, ಕಾಮತರ ವ್ಯಕ್ತಿತ್ವದ ಬಗ್ಗೆ ಪೈ ಅವರು ಏನು ಬರೆದಿದ್ದಾರೆಂಬುದನ್ನು ಗಮನಿಸೋಣ: "ಉದ್ದವಲ್ಲದ ನಿಲುವು, ತಲೆಯಲ್ಲಿ ನಸುಬಿಳಿಯ ಉಂಗುರಕೂದಲು, ಅಗಲವಾದ ಹಣೆ, ಕೊಂಚ ಉಬ್ಬಾದ ಕಳರೆಪ್ಪೆ, ಅವಲ್ಲಿ ತೇಲುವ ಮಿನುಗು ದೃಷ್ಟಿ, ಮುಗುಳು ನಗೆಯಿಂದ ಮಿಸುಕಾಡುವ ಮೋರೆ-ಇವರೇ ನಮ್ಮ ಕಾಮತರು. ಎಲ್ಲಿ ನೋಡಿದರೂ ಕರೆಯಬೇಕು, ಯಾರೊಂದಿಗೂ ಮಾತಾಡಬೇಕು; ಹೇಗೆ? ವಯಸ್ಸಿನ ಮೇಚಿಯಿಂದಲ್ಲ, ಸಾಹಿತಿ ಎಂಬ ಠೀವಿಯಿಂದಲೂ ಅಲ್ಲ, ಶಾಲೆಯ ಹುಡುಗರು ಒಬ್ಬರನ್ನೊಬ್ಬರು ಕಂಡು ಕರೆವಂತೆ, ಹೆಗಲಲ್ಲಿ ಕೈಯ್ಹಾಚಿ ಮಾತನಾಡುವಂತೆ. ತನ್ನ ಓರಗೆಯವರೊಂದಿಗೇ ಅಲ್ಲ, ತನ್ನಂತೆಯ ಸಾಹಿತಿಗಳೊಂದಿಗೇ ಅಲ್ಲ, ತಾನು ಕಲಿಸುತ್ತಿದ್ದ ವಿದ್ಯಾರ್ಥಿಗಳೊಂದಿಗೂ ನಾನು-ನೀನು ಎಂಬಷ್ಟರ ಬಳಕೆಯಿಂದಿದ್ದ ಕಾಮತರಿಗೆ ತಾನೊಬ್ಬ ಹಿರಿಯ ಸಾಹಿತಿ ಎಂಬ ಗೊಡವೆಯೂ ಇದ್ದಿಲ್ಲ, ತನ್ನನ್ನು ಹಿರಿಯ ಸಾಹಿತಿ ಎಂದು ಸಿಂಹಾಸನಿಸಬೇಕೆಂಬ ಆ ಮೆರೆತದ ಮರುಳೂ ಇದ್ದಿಲ್ಲ."

ಎಂ.ಎನ್. ಕಾಮತರು ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಭೂಗೋಳದ ಅಧ್ಯಾಪಕರಾಗಿದ್ದರು. ಅವರು ತಮ್ಮ ಬಿಡುವಿನ ಹೆಚ್ಚಿನ ಸಮಯವನ್ನು ಪಠ್ಯ ಪುಸ್ತಕಗಳನ್ನು ಬರೆಯುವುದಕ್ಕೂ, ಕನ್ನಡನಾಡಿನ ವಿವಿಧ ಪತ್ರಿಕೆಗಳಿಗಾಗಿ ಲೇಖನ ಗಳನ್ನು ಬರೆಯುವುದಕ್ಕೂ ವಿನಿಯೋಗಿಸುತ್ತಿದ್ದರು. ಆದುದರಿಂದ, ಅಸಾಮಾನ್ಯ ಪ್ರತಿಭೆಯಿದ್ದರೂ, ಗಂಭೀರ ಚಿಂತನೆಯ ಸಾಹಿತ್ಯವನ್ನು ಗಣನೀಯ ಪ್ರಮಾಣದಲ್ಲಿ ರಚಿಸಲು ಅವರಿಗೆ ಸಾಧ್ಯವಾಗಲಿಲ್ಲ. ಡಾ। ಶಿವರಾಮ ಕಾರಂತರು ಈ ವಿಚಾರವಾಗಿ ಹೀಗೆ ಬರೆದಿದ್ದಾರೆ- "ಮೊದಮೊದಲು ಅವರ ನಗು, ಹರಟೆಗಳು ನನಗೆ ಆನಂದ ವನ್ನುಂಟುಮಾಡಿದರೂ, ನನ್ನ ಪ್ರಕೃತಿಗೆ, ಕೊನೆಯ ತನಕ ಅದು ಸರಿಯಾದ ಬಗೆ ಎಂದು ಅನಿಸಲಿಲ್ಲ. ನಡುವೆ ಎಷ್ಟೋ ಸಮಯ ಕಾಮತರದು 'ಹರಟೆಮೇ' ಆಯಿತಲ್ಲ - ಅದನ್ನು ಮೀರಲಾರರೇ - ಅವರು? ಎಂದು ನಾನು ಟೀಕಿಸಿದ್ದುಂಟು, ನೊಂದುದುಂಟು. ಕಾರಣ - ನನಗೆ ಅವರ ಮನೋಧರ್ಮ ಬಳೆದು ಬಂದ ಆವರಣದ ಪರಿಚಯವಿಲ್ಲ. ನನ್ನೀ ನೋವಿನ ಕಾರಣವೆಂದರೆ- ನಮ್ಮ ಜಿಲ್ಲೆ, ಹೊರಗಿನ ಕರ್ನಾಟಕದಲ್ಲಿ ತಲೆಯೆತ್ತಿ ಚಲಿಸಬೇಕೆಂಬ ಲವಲವಿಕೆ. ಅಷ್ಟು ಮೊದಲಿಗರಾಗಿ ಕನ್ನಡದಲ್ಲಿ ದುಡಿದ ಕಾಮತರನ್ನು, ಈಗಿನವರು ತಮ್ಮಲ್ಲಿಗೆ ಬರಮಾಡಿಕೊಂಡು ಕರೆಯಬೇಕೆಂಬ ಆತುರ. ಅವರಿಂದಲೇ ಒಂದೆರಡು ಬಾರಿ 'ಏನಾದರೊಂದು ಉಳಿಯುವ ಕೆಲಸ ಮಾಡಬಾರದೇ' - ಎಂದು ಅವರೊಡನೆ ನಾನು ಹೇಳಿದ್ದುಂಟು. ಆ ಮಾತಿನ ಬಯಕೆ ಹಾಗಿತ್ತು! ಶಾಲೆ ಪುಸ್ತಕಗಳು, ಪತ್ರಿಕೆಯ ಬರಹಗಳು - ಬಹುಬೇಗ ಮಾಯ ವಾಗುವುವು. ಅದನ್ನು ಮೀರಿದ ನೆನಹು ನಮಗೆ ಕಾಮತರ ವಿಷಯವಾಗಿ ಉಳಿಯ ಬೇಕೆಂದು. ಇದಕ್ಕೆ ಎಷ್ಟೋ ಬಾರಿ ಕಾಮತರು 'ಮಾಡುವಾ, ಮಾಡುವಾ' ಅನ್ನುತ್ತಿದ್ದರು. ಈ ನನ್ನ ಕಾಂಕ್ಷೆಯಿಂದಲೇ ಒಮ್ಮೆ ನಾನವರನ್ನೇ ಬೆಂಗಳೂರಿನ ವಸಂತೋತ್ಸವಕ್ಕೆ ಬನ್ನಿರೆಂದು ಪ್ರೇರಿಸಿದ್ದೆ. ಅವರು ಕನ್ನಡ ಜಿಲ್ಲೆಯ ಗೂಡಿಂದ ಹೊರಗೆ ಬರಬೇಕು - ಎಂಬ ಆಸೆ ನನಗೆ."

"ಇತ್ತ 'ಏನಾದರೊಂದು ಉಳಿಯುವ ಸಾಹಿತ್ಯ' ಎಂಬುದರ ಬಗ್ಗೆ ಒಂದು ದಿನ ಮಾತಿನಲ್ಲಿ ನನಗೆ ಉತ್ತರ ಬಂದಿತು. 'ಕಾರಂತರೇ ನೀವೆನ್ನುವುದೆಲ್ಲ ಸಮ ನೋಡಿ- ಆದರೆ ಎಲ್ಲಕ್ಕಿಂತ ಅಡುಗೆ ಸಾಹಿತ್ಯ ಬಹಳ ದೊಡ್ಡದಲ್ಲವೆ?' ಎಂದರು. ಅಂದಿನ ತನಕ ನಾನು ಕಾಮತರ ಹಿನ್ನಲೆಯ ವಿಚಾರ ಗಮನವಿರಿಸಿದವನಲ್ಲ. ಈ ಮಾತು ನನ್ನನ್ನು ಅಲ್ಲಿಗೆ ಒಯ್ದಿತು. ಅವರ ಯಾವತ್ತು ದುಡಿಮೆ ಜನರ ಜಡತೆ, ತನ್ನ ಬಡತನ, ವಿಶೇಷ ಸಂಸಾರತಾಪತ್ರಯ, ಸಾಲದುದಕ್ಕೆ ಆಗಾಗ ಪೀಡಿಸುವ ಶರೀರದ ಬೇನೆ- ಇವುಗಳ ಎಡೆಯಲ್ಲಿ ನಡೆಯುತ್ತಿತ್ತು ಎಂಬುದನ್ನು ನಾನು ಮನಗಂಡೆ. ಅವರನ್ನು ಪ್ರತಿಭಟಿಸಿ ನಿಂತ ದಾರಿದ್ರ್ಯ, ಸಂಕಟಗಳ ಮುಂದೆ ಮನುಷ್ಯನಿಗೆ ಎರಡು ಮುಖ್ಯ ಹಾದಿಗಳಿವೆ. ಒಂದೊ ಕುಗ್ಗಿ, ನಿರುತ್ಸಾಹಿಯಾಗಿ ಮೆಲ್ಲಗೆ ಸಾಯಬೇಕು - ಇಲ್ಲವೆ ಹಣಗಳಿಸಿ, ಬಡತನ ತುಳಿದು ಹೇಗಾದರೂ ಬದುಕಬೇಕು. ಮೊದಲನೆಯದನ್ನು

ಅವರು ಸಾಯುವ ತನಕವೂ ಮಾಡಲಿಲ್ಲ. ಲೆಕ್ಕಣಿಕೆ ಗುಲಾಮನಿಗೆ ಎರಡನೆಯ ಅಂತಸ್ತು ಕನ್ನಡ ನಾಡಿನಲ್ಲಿ ಸಿಗುವುದು ದುರ್ಲಭ. ಅವರ ಮಾಸ್ತರಿ ಪದವಿಯು ಅವರನ್ನು ದಾರಿದ್ರ್ಯದಿಂದ ಪಾರಾಗಿಸುವಂಥದೇ ? ಆದರೆ ಜೀವನದಲ್ಲಿ ಸೋಲಲಾರದ ಅವರು ತಮ್ಮ ಜಯಕ್ಕೆ ಹಿಡಿದ ಹಾದಿಯೇ ಬೇರೆ. ಅದೇ 'ನಗು'. ಅವರು ತಮ್ಮೆಲ್ಲ ದುಃಖಗಳನ್ನು, ಕಷ್ಟಗಳನ್ನು ಕಂಡು ನಗಲು ಕಲಿತರು. ಕೊರಗು ಎಷ್ಟಿದ್ದರೂ ಆ ನಗು ಅದನ್ನು ಮಾಯಿಸುವಷ್ಟು ಪ್ರಬಲ ಶಕ್ತಿ ಆಗಿ ಬೆಳೆದಿರಬೇಕು. ಕೊನೆತನಕ ಅವರ ಜೀವನಕ್ಕೆ ನಗು - ಒಂದು ಮನೋಧರ್ಮವಾಗಿ ಪರಿಣಮಿಸಿರದಿದ್ದರೆ, ಕಾಮತರ ಬರವಣಿಗೆಯಂತು ಎಷ್ಟೋ ಹಿಂದೆಯೇ ಮುಗಿದಿರಬೇಕಿತ್ತು."

ಕಾಮತರು ತೀರ ಬಡವರಾಗಿದ್ದ ಕಾರಣದಿಂದಲೇ, ನ್ಯಾಯವಾಗಿ ಸಿಗಬೇಕಾದ ಮನ್ನಣೆ ಅವರಿಗೆ ಸಿಗಲಿಲ್ಲ. ಅವರ ನಿಧನಾನಂತರ ಕನ್ನಡ ಸಾಹಿತ್ಯ ಜಗತ್ತಿನಿಂದ ಅವರ ಹೆಸರೂ ಮರೆಗೆ ಸರಿಯಿತು. ಅದೊಂದು ಕಾಲದಲ್ಲಿ ಕಾಮತರ ಕತೆ, ಕವನ ಮತ್ತು ಹರಟೆಗಳು ಕನ್ನಡ ಪಠ್ಯಪುಸ್ತಕಗಳಲ್ಲಿದ್ದುವು. ಆದರೆ, ಇಂದು? ಬಡವನ ಬಾಳಿನ ಚೆಲುವನ್ನು ಮನ್ನಿಸಲು ಕನ್ನಡನಾಡು ಇನ್ನೂ ಕಲಿತಿಲ್ಲ ಎನ್ನುತ್ತಾರೆ ಕಾರಂತರು. ಅವರ ಈ ಅಭಿಪ್ರಾಯನನ್ನು ಅವರ ಮಾತುಗಳಲ್ಲೇ ತಿಳಿಯಬಹುದು - "ಕನ್ನಡನಾಡು - ಅವರನ್ನು ಪ್ರಥಮ ಕಥೆಗಾರರ ಸಮ್ಮೇಳನದ ನಾಯಕರನ್ನಾಗಿ ಮಾಡಿ, ತುಸುವಾದರೂ ಋಣಪರಿಹರಿಸಿಕೊಂಡಿತು. ಬಲು ನಿಧಾನವಾಗಿ ದೊರೆತ ಈ ಸನ್ಮಾನವು ಅಪಾತ್ರದಲ್ಲಿ ಅರ್ಪಿತವಾಗಿಲ್ಲ ಎಂದೆನ್ನಬಲ್ಲೆ. ಅವರಾದರೂ ಅದರಿಂದ ತುಷ್ಟರಾಗಿದ್ದರು. ನಾನು ಅವರನ್ನು ಕೊನೆಯಲ್ಲಿ ಕಂಡಾಗ - ಬೆಂಗಳೂರಲ್ಲಿ ತೆಗೆದ ಭಾವಚಿತ್ರವೊಂದು ಗೋಡೆಯ ಮೇಲೆ ತೂಗುತ್ತಿತ್ತು. ಅದನ್ನು ಬೆರಳಿಟ್ಟು ತೋರಿಸಿ - 'ಅದೊಂದು, ಇದೊಂದು' ಪಡೆದು ಬಂದೆ ಎಂದರು. ಒಂದು ಗೌರವದ ಭಾವಚಿತ್ರ, ಇನ್ನೊಂದು ನೆಲಹಿಡಿಸಿದ ಬೇನೆ ! ಎಷ್ಟು ಮಾರ್ಮಿಕ ಮಾತುಗಳು ! ಆ ಮಾತನ್ನಾಡುವಾಗ ಒಂದು ರೀತಿಯ ಮರುಕ ಕಾಣಿಸದಿರಲಿಲ್ಲ. ಈ ನೆನಪಿನ ಅರ್ಪಣೆ ಮಾಡುವಾಗ ನನ್ನ ಒಂದೇ ಕೊರಗೆಂದರೆ - ಅವರ ಬಾಳು ಬಡತನದ ಬಾಳಿಗೆ ಬಲಿಯಾಗಿರದಿರುತ್ತಿದ್ದರೆ, ಅವರು ಮಾಡಿದ ಕೆಲಸಕ್ಕೇನೆ, ಇನ್ನು ಹೆಚ್ಚಿನ ಆದರಕ್ಕೆ ನಮ್ಮ ನಾಡಿನಲ್ಲಿ ಪಾತ್ರರಾಗುತ್ತಿದ್ದರು. ಆದರೆ ನಮ್ಮ ನಾಡು ಇನ್ನೂ 'ಬಡವನ ಬಾಳಿನ' ಚೆಲುವನ್ನು ಮನ್ನಿಸಲು ಕಲಿತಿಲ್ಲ."

೨

ಬದುಕು

ಮುಂಡ್ಕೂರು ನರಸಿಂಗ ಕಾಮತ್ (ಎಂ.ಎನ್. ಕಾಮತ್) ಅವರು 1883ರ ಮಾರ್ಚ್ 17ರಂದು ಮುಂಡ್ಕೂರಿನಲ್ಲಿ ಜನಿಸಿದರು. ಅವರ ತಂದೆ ಶ್ರೀನಿವಾಸ ಕಾಮತರಿಗೆ ದಾಕು ಹಾಕುವ ಕೆಲಸ; ತಾಯಿ ಹೆಸರು ತುಂಗಭದ್ರಾ. ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದ ಬಡತನ ಅವರದು.

ಶ್ರೀನಿವಾಸ ಕಾಮತರು ತಮ್ಮ ಮಗನಿಗೆ ರಾಮಾಯಣ, ಮಹಾಭಾರತದ ಕತೆಗಳನ್ನು ದಿನಾಲೂ ಹೇಳುತ್ತಿದ್ದರು. ಮಗನಿಗೂ ಇಂಥ ಕತೆಗಳನ್ನು ಕೇಳುವುದೆಂದರೆ ಬಹಳ ಆಸಕ್ತಿ. ಹೀಗೆ, ಬಾಲಕ ಕಾಮತರಿಗೆ ಕತೆಗಳ ಮೂಲಕವಾಗಿ ರಾಮಾಯಣ, ಮಹಾಭಾರತಗಳ ಜ್ಞಾನವೊದಗಿತು. ಮುಂದೆ, ಅವರ ಸಾಹಿತ್ಯರಚನೆಗೆ ಬಾಲ್ಯದ ಈ ಶಿಕ್ಷಣವು ಬಹುಮಟ್ಟಿಗೆ ಪ್ರೇರಣೆ ನೀಡಿರಬೇಕು.

ಎಂ.ಎನ್. ಕಾಮತರು ಮುಂಡ್ಕೂರಿನ ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ಅವರ ತಾಯಿ ತೀರಿಕೊಂಡರು. ಎಳವೆಯಲ್ಲೇ ಬಾಲಕ ಕಾಮತರಿಗೆ ವಿಧಿ ನೀಡಿದ ಪ್ರಬಲ ಹೊಡೆತವಿದು!

ಪತ್ನಿಯನ್ನು ಕಳಕೊಂಡ ಮೇಲೆ ಶ್ರೀನಿವಾಸ ಕಾಮತರಿಗೆ ಮುಂಡ್ಕೂರಿನ ಜೀವನವು ಅಸಹನೀಯವಾಯಿತು. ಅದಲ್ಲದೆ, ಮುಂಡ್ಕೂರಿನಲ್ಲಿ ಹೈಸ್ಕೂಲು ಇಲ್ಲದ್ದರಿಂದ, ಮಗನ ಮುಂದಿನ ವಿದ್ಯಾಭ್ಯಾಸಕ್ಕಾಗಿಯೂ ಅವರು ಬೇರೆ ಯಾವುದಾದರೂ ದೊಡ್ಡ ಊರಿಗೆ ಹೋಗುವುದು ಅನಿವಾರ್ಯವಾಯಿತು.

ಆನದ್ದಾಗಲಿ ಎಂಬ ಹುಚ್ಚುಧೈರ್ಯದಿಂದ ಮಗನೊಂದಿಗೆ ಮಂಗಳೂರಿಗೆ ಹೋದರು. ಬಡವರಿಗೆ ಗೆಳೆಯರು, ಸಂಬಂಧಿಕರು ಯಾರಿರುತ್ತಾರೆ? ನಾಲ್ಕೈದು ದಿನಗಳನ್ನು ಬೀದಿ ಬದಿಯನ್ನೇ ಆಶ್ರಯಿಸಿದವರಂತೆ ಕಳೆದರು. ಕೊನೆಗೂ ಭವಂತಿ ರಸ್ತೆಯಲ್ಲಿ ಒಂದು ಬಾಡಿಗೆಮನೆ ದೊರಕಿತು. ಜೊತೆಗೆ, ಪೂರ್ವಪುಣ್ಯವೋ ಎಂಬಂತೆ, ಒಂದು ಸಣ್ಣ ನೌಕರಿಯೂ ಸಿಕ್ಕಿತು. ತಿಂಗಳ ಸಂಬಳ ಕೇವಲ ಆರು ರೂಪಾಯಿಗಳು. ಒಂದೇ ಹೊತ್ತು ಊಟ ಮಾಡಿದರೂ ಸರಿ, ಮಗನನ್ನು ಹೈಸ್ಕೂಲಿಗೆ ಸೇರಿಸುವಂತಾಯಿತಲ್ಲ ಎಂಬ ಸಮಾಧಾನ ಶ್ರೀನಿವಾಸ ಕಾಮತರಿಗೆ. ಅವರು ಮಗನನ್ನು, ವಿದ್ಯಾರ್ಜನೆಗಾಗಿ, ಕೆನರಾ ಹೈಸ್ಕೂಲಿಗೆ ಸೇರಿಸಿದರು.

ಹನ್ನೊಂದು ವರ್ಷದ ಬಾಲಕ ಎಂ.ಎನ್. ಕಾಮತರು ಅಲ್ಲಿನ ಸಿಪಾಯಿಗಳಿಗೆ, ಒಡನೆ, ಆಕರ್ಷಣೆಯ ಕೇಂದ್ರಬಿಂದುವಾದರು. ಕುಮಾರವ್ಯಾಸನ ಭಾರತ, ರಾಜಶೇಖರವಿಲಾಸ, ತೊರವೆಯ ರಾಮಾಯಣ, ಜೈಮಿನಿ ಭಾರತ - ಇವುಗಳ ಸಾಲುಗಳನ್ನು ರಾಗಯುಕ್ತವಾಗಿ ಹಾಡುತ್ತ, ಅವುಗಳ ಭಾವಾರ್ಥವನ್ನು ಸರಳ ಕನ್ನಡದಲ್ಲಿ ಪರಿಣಾಮಕಾರಿಯಾಗಿ ವಿವರಿಸುವ ಬಾಲಕ ಕಾಮತರು ನೂರಾರು ಜನರನ್ನು ತನ್ನೆಡೆಗೆ ಸೆಳೆಯತೊಡಗಿದರು. ಇವರ ಕತೆಗಳನ್ನು ಕೇಳಲು ವಿದ್ಯಾವಂತರೂ ಗುಂಪುಗೂಡಿ ಬರಲಾರಂಭಿಸಿದರು.

ಹೈಸ್ಕೂಲಿನಲ್ಲಿ ಎರಡು ವರ್ಷಗಳ ಕಾಲ (1897-'99) ಎಂ. ಗೋವಿಂದ ಪೈಯವರು ಇವರ ಸಹಪಾಠಿಗಳಾಗಿದ್ದರು. "ಕೆಯ್ಯಾಲುಗಳಿಗೆ ಬಳೆತೊಟ್ಟು ಶಾಲೆಗೆ ಬರುತ್ತಿದ್ದ ಆ ತೆಳುವಾದ ಗಿಡ್ಡ ಹುಡುಗನನ್ನು ಈಗಲೂ ಕಾಣಬಲ್ಲೆ, ಬಳೆಗಳನ್ನು ಕಳಚಿಬಿಟ್ಟೆ ನಾವು ಅವರಿಗೆ ಮಾಡುತ್ತಿದ್ದ ಗೇಲಿಯನ್ನು ಈಗಲೂ ನೆನೆಯಬಲ್ಲೆ." ಎಂದು ಪೈ ಅವರು 1940ರಲ್ಲಿ ಕಾಮತರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಬರೆದಿದ್ದಾರೆ. "ನೆನವಿನ ಕಾಣಿಕೆ" ಎಂಬ ಈ ಲೇಖನದಲ್ಲಿ ಮುಂದೆ ಅವರು ಹೀಗೆ ಹೇಳುತ್ತಾರೆ- "ಆಗಲೂ ಅವರು ಕನ್ನಡ ಪಾಠಗಳಲ್ಲಿ ಚುರುಕಾಗಿಯೂ ಇದ್ದರು, ಕನ್ನಡದಲ್ಲಿ ಕವನಿಸುತ್ತಲೂ ಇದ್ದರು. ಈವಾಗ ಕನ್ನಡಕ್ಕೆ ಇರುವಷ್ಟು ಒಲವು ಆವಾಗ ಇರಲಿಲ್ಲ. ಇಂಗ್ಲಿಷು ಭಾಷೆಯೇ ಭಾಷೆ, ಇಂಗ್ಲಿಷಿನಲ್ಲಿಯೇ ಲೇಸಾಗಿ ಬರೆಯಬೇಕು, ಜೊಕ್ಕವಾಗಿ ಮಾತನಾಡಬೇಕು, ಬಲ್ಲವರು ಇಂಗ್ಲಿಷಿನಲ್ಲಿಯೇ ಹಸನಾಗಿ ಕವನಿಸಲೂ ಬೇಕು ಎಂಬುದೇ ಆಗಣ ಆಕಾಂಕ್ಷೆ, ನಮ್ಮ ಅಭಿಲಾಷೆ. ಕನ್ನಡದಲ್ಲಿ ತೀರ ತಿರಸ್ಕಾರವೇ ಇದ್ದಿಲ್ಲವಾದರೂ ಅಭಿಮಾನವೂ ಇದ್ದಿಲ್ಲ. ಇಂಗ್ಲಿಷು ಹೊರಬಿಗರ ಭಾಷೆ. ಅದು ಬಂದಂತೆಯೇ ಹೋಗಬೇಕು, ಕನ್ನಡವಾದರೊ ನಮ್ಮ ನಾಡಿನ ಭಾಷೆ, ಇದು ನಮ್ಮ ನಾಡುಳ್ಳವರೆಗೂ ಬಾಳಬೇಕು ಎಂಬ ತಿಳುವಳಿಕೆಯಾದರೊ ಆಗ್ಗೆ ಇನ್ನೂ ಮೂಡಿರಲಿಲ್ಲ ಅಥವಾ ವಿದ್ಯಾರ್ಥಿಗಳಲ್ಲಿಯೂ ಕಾಮತರಂತೆ ಪದ್ಯ ಕಟ್ಟುವ ಕೆಲಮಂದಿ ಇದ್ದರಾದರೂ ಅವರಿಗೂ ಗದ್ಯರಚನೆ ಮನಸ್ಸಿಗೆ ಒಗ್ಗದು. ಗದುಗಿನ ಭಾರತ, ತೊರವೆಯ ರಾಮಾಯಣ, ಜೈಮಿನಿ ಭಾರತ ಇವಷ್ಟನ್ನೇ ಕಂಡವರಿಗೆ

ಅವುಗಳ ಕನ್ನಡವನ್ನು ಬಿಟ್ಟು ಬೇರೆ ಕನ್ನಡವೆಲ್ಲಿ? ಆತನವ ಕನ್ನಡವೆಂದರೆ ಪದ್ಯ ರಚನೆಗಷ್ಟೇ ವಿನಾ ಮೆಕಾಲೆಯ ಉದಾತ್ತವಾದ ಗದ್ಯಶೈಲಿಗೆ ಸಾಟಿದ ಕನ್ನಡವು ಗದ್ಯ ರಚನೆಗಲ್ಲ ಎಂದೇ ನಮ್ಮ ನಂಬುಗೆ.”

“1899ರಲ್ಲಿ ನಾವು ಕೆಲವರು ವಿದ್ಯಾರ್ಥಿಗಳೇ ಕೂಡಿ ಕೈಬ್ಬರಹದೊಂದು ಇಂಗ್ಲಿಷು ಪತ್ರಿಕೆಯನ್ನು ಹೊರಡಿಸಿದೆವು. ನಾನು ಬಲ್ಲಷ್ಟರ ಮಟ್ಟಿಗೆ ನಮ್ಮ ತುಳುನಾಡಲ್ಲಾದರೂ ಕೈಬ್ಬರಹದ ಪತ್ರಿಕೆ ಇದೇ ಮೊತ್ತಮೊದಲಿನೋ. ಅದರ ಹೆಸರು Angel, ಅಂದರೆ ದೂತ. ಇಷ್ಟೇ ಹೊತ್ತಿಗೊಮ್ಮೆ ಹೊರಡಬೇಕೆಂದು ಅದಕ್ಕೆ ಕಟ್ಟಳೆ ಇದ್ದಿಲ್ಲ. ಎಣ್ಣೆ ಸಿಕ್ಕಿದ್ದೇ ಶನಿವಾರದಂತೆ ತಕ್ಕಷ್ಟು ಲೇಖಗಳು ದೊರೆತಂತೆ ಹೊರಡಿಸುವುದೇ ನಮಗೆ ಗೊತ್ತು. ಲೇಖಕರು ಹೆಸರು ಮರೆಸಿ ಬರೆಯಬೇಕೆಂಬುದು ಅದರ ಮೂಲ ನಿಯಮ. ಅವರ ಮೊದಲಿನ ೨ ಸಂಚಿಕೆಗಳು ಈಗಲೂ ನನ್ನೊಂದಿಗಿವೆ. ಅಲ್ಲಿಂದ ಹೆಚ್ಚು ಮುಂದಕ್ಕೆ ಅದು ಸಾಗಲಿಲ್ಲ. ಬರೆಹಗಾರರ ಅಸಡ್ಡೆಯಿಂದ ಅದು ಬೇಗನೆ ಬಿದ್ದುಹೋಯಿತು. ಕಾಮತರು ಬಹಳ ಪೇಚಾಡಿದರೂ ಅದನ್ನು ಎದ್ದು ನಿಲ್ಲಿಸಲಾಗಲಿಲ್ಲ. ಕಾಮತರು ಅದಕ್ಕೆ Robin Redbreast ಎಂಬ ಮರೆಹೆಸರಿನಿಂದ ಬರೆಯುತ್ತಿದ್ದರು. ನನ್ನೊಂದಿಗಿರುವ ಸಂಚಿಕೆಗಳಲ್ಲಿ ಅವರ ೬ ಇಂಗ್ಲಿಷು ಕವಿತೆಗಳಿವೆ, ಗದ್ಯಲೇಖವಿಲ್ಲ. ಅವಲ್ಲಿ ೪ ಸ್ವತಂತ್ರ ಕವಿತೆಗಳು - God's Lighthouse, Creation's Baptism, The Kingdom of Heaven is like unto a net ಮತ್ತು Snail, ಮಿಕ್ಕವು ಸೋಮೇಶ್ವರ ಶತಕದಲ್ಲಿಯ ‘ಕ್ಷಿತಿಯಂ ಶೋಧಿಸಲಕ್ಕು’ ಮತ್ತು ‘ಧರೆಯೇ ಬೀಜವ ನುಂಗೆ’ ಎಂಬ ಅವೆರಡು ವೃತ್ತಗಳ ಇಂಗ್ಲಿಷು ಪದ್ಯಾನುವಾದಗಳು. ಕಾಮತರ ವಯಸ್ಸಾದರೊ ಆಗ್ಗೆ ಹದಿನಾರೇ ವರ್ಷ, ಈ ಯಾವತ್ತೂ ಕವಿತೆಗಳು ಆ ಚಿಕ್ಕಂದಿಗೆ ಮಿಂಚಿವೆ.”

ಕಾಲೇಜು ಶಿಕ್ಷಣಕ್ಕಾಗಿ ಕಾಮತರು ಸಂತ ಅಲೋಶಿಯಸ್ ಕಾಲೇಜನ್ನು ಸೇರಿದರು. ಗೋವಿಂದ ಪೈಯವರು ಸರಕಾರಿ ಕಾಲೇಜನ್ನು ಸೇರಿದರು. ಆದುದರಿಂದ ಕೆನರಾ ಹೈಸ್ಕೂಲಿನಲ್ಲಿ ಚಿಗುರಿದ ಈ ಇಬ್ಬರ ಗೆಳೆತನವು ಬೆಳೆಯಲು ಆ ಕೂಡಲೇ ಅವಕಾಶವಾಗಲಿಲ್ಲ. ಒಂದು ವೇಳೆ ಕಾಮತರು ಪೈಯವರಂತೆ ಸರಕಾರಿ ಕಾಲೇಜನ್ನು ಸೇರಿದ್ದಲ್ಲಿ ಪಂಜೆ ಮಂಗೇಶರಾಯರ ಶಿಷ್ಯರಾಗಲು ಅವಕಾಶವುಂಟಾಗುತ್ತಿತ್ತು.

ಕಾಮತರ ತಂದೆಯವರು ಮಗನಿಂದ ಅತಿಯೆಂಬಷ್ಟು ಶಿಸ್ತನ್ನು ನಿರೀಕ್ಷಿಸುತ್ತಿದ್ದರು. ಸಮಯಕ್ಕೆ ಸರಿಯಾಗಿ ಕಾಲೇಜಿಗೆ ಹೋಗಬೇಕು; ಕಾಲೇಜು ಬಿಟ್ಟ ಕೂಡಲೇ ನೇರವಾಗಿ ಮನೆಗೆ ಬರಬೇಕು. ಯಾವೊಂದು ಆಟವನ್ನೂ ಕಾಲೇಜಿನಲ್ಲಿ ಆಡಬಾರದು. ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಬಾರದು. ಕಾಮತರಿಗಾದರೊ ಕ್ರಿಕೆಟ್, ಫುಟ್‌ಬಾಲ್ ಆಟಗಳ ಮೇಲೆ ವಿಶೇಷ ಆಸಕ್ತಿ. ಆಸಕ್ತಿ ಇದ್ದೂ, ಆಡುವ ಅವಕಾಶವಿಲ್ಲ. ಇದರಿಂದಾಗಿ ಕಾಮತರು ಕಾಲೇಜು ದಿನಗಳಲ್ಲಿ ತೀರ ಸಪ್ಪೆಯಾದರು.

ಎಫ್.ಎ. ತರಗತಿಯ ಪರೀಕ್ಷೆಗಳು ಮುಗಿದುವು. ಕೊನೆಯ ಪರೀಕ್ಷೆ ಮುಗಿದ ದಿನ ಕಾಮತರು ತಮ್ಮ ಗೆಳೆಯರೊಬ್ಬರೊಡನೆ ಬಂದರಿನ ಕಡೆ ಹೋದರು. ಇಷ್ಟು ವರ್ಷಗಳ ಕಾಲ ಮಂಗಳೂರಿನಲ್ಲಿದ್ದೂ ಅವರು ಬಂದರನ್ನು ನೋಡಿರಲಿಲ್ಲ. ಬಂದರಿನಲ್ಲಿ ಕಾಮತರ ತಂದೆಯ ಗೆಳೆಯರೊಬ್ಬರು ಇವರನ್ನು ನೋಡಿದರು. ಈ ಗೆಳೆಯರಿಂದಾಗಿ ಸುದ್ದಿಯು ಕಾಮತರ ತಂದೆಯವರಿಗೆ ತಿಳಿಯಿತು. ಆ ರಾತ್ರಿ ಅವರು ಮನೆಗೆ ಬಂದಾಗ ಕೋಪದಿಂದ ಕೆಂಡವಾಗಿದ್ದರು. ಮನೆಗೆ ಬಂದವರೇ ಮಗನೊಡನೆ ಕೇಳಿದರು -"ಈ ಸಂಜೆ ಎಲ್ಲಿ ಹೋಗಿದ್ದೆ?" ಕಾಮತರು ಭೀತಿಯಿಂದ ನಡುಗಿದರು. "ಕಾಲೇಜಿನಿಂದ ನೇರವಾಗಿ ಮನೆಗೆ ಬಂದೆ. ಎಲ್ಲಿಗೂ ಹೋಗಿಲ್ಲ." ಎಂದು ಅಳುಕುತ್ತ ಹೇಳಿದರು. ಇಷ್ಟೇ ಸಾಕಾಯಿತು, ಬಾಂಬು ಸ್ಫೋಟವಾಗಲು! ಕೋಪದ ಆವೇಶದಲ್ಲಿ ಒಂದು ದೊಣ್ಣೆಯಿಂದ ಮಗನಿಗೆ ಸಿಕ್ಕಾಬಟ್ಟೆ ಹೊಡೆದರು. ಯಾವೊಂದು ಪ್ರತಿರೋಧವನ್ನೂ ಕಾಮತರು ತೋರಿಸಲಿಲ್ಲ; "ಅಯ್ಯೋ" ಎಂದೂ ಕೂಗಲಿಲ್ಲ. ಹೊಡೆದು ಸಾಕಾದಾಗ, ಶ್ರೀನಿವಾಸ ಕಾಮತರೇ ಹೊಡೆಯುವುದನ್ನು ನಿಲ್ಲಿಸಿದರು.

ಮರುದಿನ ಬೆಳಗ್ಗೆ ಶ್ರೀನಿವಾಸ ಕಾಮತರು ಎದ್ದಾಗ ಮಗನು ಮನೆಯಲ್ಲಿರಲಿಲ್ಲ. 'ಎಲ್ಲಿಗೆ ಹೋದಾನು? ಬಂದೇ ಬರುವನು' ಎಂದು ನಂಬಿದ ಅವರು ಎಂದಿನಂತೆ ತಮ್ಮ ಕೆಲಸಕ್ಕೆ ಹೋದರು. ಸಂಜೆ ಬಂದಾಗಲೂ ಮಗನು ಮನೆಗೆ ಬಂದಿರಲಿಲ್ಲ! ಕೋಪದಿಂದ ಕಿಡಿಕಿಡಿಯಾದರು. 'ಬರಲಿ, ಚೆನ್ನಾಗಿ ಬುದ್ಧಿ ಕಲಿಸುತ್ತೇನೆ' ಎಂದು ಮಗನ ಬರುವಿಕೆಗಾಗಿ ಕಾಯುತ್ತ ಕುಳಿತರು. ರಾತ್ರಿ ಕಳೆದು ಮತ್ತೆ ಬೆಳಗಾಯಿತು. ಮಗನ ಪತ್ತೆಯಿಲ್ಲ. ಈಗ ಅವರಿಗೆ ಕಸಿವಿಸಿಯಾಗಲಾರಂಭಿಸಿತು. ಆ ದಿನ ಅವರು ಕೆಲಸಕ್ಕೆ ರಜೆಹಾಕಿದರು. ಕಾಲೇಜಿಗೆ ಹೋಗಿ ಮಗನ ಬಗ್ಗೆ ವಿಚಾರಿಸಿದರು. ಮಗನ ಗೆಳೆಯರ ಮನೆಗಳಿಗೆ ಹೋಗಿ ವಿಚಾರಿಸಿದರು. ಅವರ ಈ ಓಡಾಟಗಳೆಲ್ಲ ವ್ಯರ್ಥವಾದುವು. ಮತ್ತೆರಡು ದಿನಗಳೂ ಕಳೆದುವು. ಮನೆಬಿಟ್ಟು ಓಡಿದ್ದ ಮಗನ ಸುಳಿವಿಲ್ಲ! ಈಗ ತಂದೆ ಕಾಮತರು ಪೂರ್ತಿ ಹತಾಶರಾದರು.

ಅಷ್ಟರಲ್ಲಿ, ಇದ್ದಕ್ಕಿದ್ದಂತೆ ಒಂದು ರೋಮಾಂಚಕ ಸುದ್ದಿ ಹಬ್ಬಿತು. ಎಂ.ಎನ್. ಕಾಮತರು ಕ್ರೈಸ್ತ ಮತಕ್ಕೆ ಸೇರಿದರು ಎಂಬುದೇ ಆ ವಾರ್ತೆಯಾಗಿತ್ತು! ಸುದ್ದಿಯನ್ನು ಕೇಳಿದ ಅನೇಕ ಹಿಂದುಗಳು ಇಗರ್ಜಿಗೆ ಓಡಿದರು. ಕಾಮತರು ಆ ಕಡೆ ಬರಲೇ ಇಲ್ಲ ಎಂದು ಪಾದ್ರಿಗಳು ಹೇಳಿದರೂ ಜನರಿಗೆ ಪೂರ್ತಿ ನಂಬಿಕೆಯಾಗಲಿಲ್ಲ.

ಮತ್ತೆ ಕೆಲವು ದಿನಗಳು ಕಳೆದುವು. ಶ್ರೀನಿವಾಸ ಕಾಮತರು ಅನ್ನ, ನೀರು ಬಿಟ್ಟರು. ಅದೊಂದು ದಿನ ಬೆಳಗ್ಗೆ ಕಾರ್ಕಳದ ಕೃಷ್ಣ ಕುಡ್ವ ಎಂಬವರಿಂದ ಶ್ರೀನಿವಾಸ ಕಾಮತರಿಗೆ ಒಂದು ಪತ್ರ ಬಂತು. ಆ ಪತ್ರವನ್ನು ಓದಿದ ಕಾಮತರಿಗೆ ಜೀವ ಬಂದಂತಾಯಿತು. ಪತ್ರವನ್ನು ಓದುತ್ತ ಹುಚ್ಚುಚ್ಚಾಗಿ ಕುಣಿದಾಡಿದರು, ಸಂಭ್ರಮ ಪಟ್ಟರು ಎಂದು ಆ ಹೊತ್ತಿನಲ್ಲಿ ಕಾಮತರ ಮನೆಯಲ್ಲಿದ್ದ ಅವರ ಸಂಬಂಧಿಕ ಹಾಗೂ

ಎಂ. ಎನ್. ಕಾಮತರ ಗೆಳೆಯರಾಗಿದ್ದ ಆರ್. ಕೆ. ಪ್ರಭು ಎಂಬವರು ಬೊಂಬಾಯಿಯ ಗೌಡಸಾರಸ್ವತ ಬ್ರಾಹ್ಮಣ ಸಂಘದವರು ತಮ್ಮ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ (1959) ಹೊರಡಿಸಿದ ವಿಶೇಷ ಸಂಚಿಕೆಯಲ್ಲಿ ಬರೆದಿದ್ದಾರೆ. ಪ್ರಭುಗಳು ಈ ಘಟನೆಯನ್ನು ವರ್ಣಿಸುತ್ತ, ಪತ್ರದಿಂದ ತಿಳಿದ ವಿಷಯವನ್ನು ಈ ರೀತಿ ವರ್ಣಿಸಿದ್ದಾರೆ - ಮನೆಯಿಂದ ಹೊರಟ ಎಂ. ಎನ್. ಕಾಮತರು ನೇರವಾಗಿ ಕಾರ್ಕಳದಲ್ಲಿರುವ ತಮ್ಮ ತಾಯಿಯ ಮನೆಗೆ ಹೋದರು. ಕಾರ್ಕಳದಲ್ಲಿ ಒಂದೆರಡು ದಿನಗಳಲ್ಲೇ ಕಾಮತರು ತಮ್ಮ ಭಾಷಣಗಳಿಂದ, ಕತೆಗಳಿಂದ, ಸಂಗೀತದಿಂದ ಜನರನ್ನು ತಮ್ಮ ಕಡೆ ಸೆಳೆಯಲಾರಂಭಿಸಿದರು. ಹುಟ್ಟುಮಾತುಗಾರರಾದ ಕಾಮತರ ಮಾತಿನ ಮೋಡಿಗೆ, ಜ್ಞಾನದ ಆಳಕ್ಕೆ ಮತ್ತು ಸಂಗೀತದ ಇಂಪಿಗೆ ಅಲ್ಲಿಯ ಬಹುಮಂದಿ ಜನರು ಕೂಡಲೇ ಮಾರು ಹೋದರು. ಅವರಲ್ಲೊಬ್ಬರು ಕೃಷ್ಣ ಕುಡ್ವರು. ಕುಡ್ವರಿಗೆ ಹುಡುಗನ ಮೇಲೆ ವಿಶೇಷ ಗೌರವವುಂಟಾಯಿತು. ತೀರಿಹೋದ ಅವನ ತಾಯಿಯು ಕಾರ್ಕಳದವಳೇ ಎಂದು ಗೊತ್ತಾದಾಗ ಹುಡುಗನನ್ನು ಮನೆಗೆ ಕರೆದರು. ಮನೆಯಲ್ಲಿ, ತಮ್ಮ ಮಗಳನ್ನು ಕಾಮತರಿಗೆ ಮದುವೆ ಮಾಡಿಕೊಡುವ ಹಂಬಲವನ್ನು ವ್ಯಕ್ತಪಡಿಸಿದರು; ಕಾಮತರ ಸಮ್ಮತಿ ಯಾಚಿಸಿದರು. ಕಾಮತರು ಆ ಕೂಡಲೇ ಒಪ್ಪಿದರು. ಇದಾದ ಬಳಿಕವೇ ಕುಡ್ವರು ಕಾಮತರ ತಂದೆಗೆ ಪತ್ರ ಬರೆದದ್ದು. ಪತ್ರದಲ್ಲಿ ಹಿರಿಯ ಕಾಮತರ ಕ್ಷಮೆ ಯಾಚಿಸಿ, ಮದುವೆಗೆ ಅವರು ಬರಲೇಬೇಕೆಂದು ವಿನಯದಿಂದ ಬೇಡಿಕೊಂಡಿದ್ದರು.

ಆ ಪತ್ರವನ್ನು ಓದಿದ ಶ್ರೀನಿವಾಸ ಕಾಮತರು ಕರಗಿದರು. ಮದುವೆಯಲ್ಲಿ ಸಂಭ್ರಮದಿಂದ ಪಾಲ್ಗೊಂಡ ಅವರು ತಮ್ಮ ಮಗ ಮತ್ತು ಸೊಸೆಯರೊಂದಿಗೆ ಮನೆಗೆ ಮರಳಿದರು.

ಕಾಮತರ ಮನೆಯ ಆರ್ಥಿಕ ಪರಿಸ್ಥಿತಿಯು ತೀರ ಶೋಚನೀಯವಾಗಿತ್ತು. ಆದುದರಿಂದ, ಒಡನೆಯೇ ಎಂ. ಎನ್. ಕಾಮತರು ಕೆಲಸಕ್ಕೆ ಸೇರುವುದು ಅನಿವಾರ್ಯವೆನಿಸಿ ಕೆಲಸವನ್ನು ಹುಡುಕುತ್ತ ಬೊಂಬಾಯಿಗೆ ಹೋದರು. ಅಲ್ಲಿ "ರೋಸ್ ಎಂಡ್ ಕಂಪೆನಿ" ಎಂಬ ವಾದ್ಯದ ಕಂಪೆನಿಯಲ್ಲಿ ಅವರಿಗೆ ಗುಮಾಸ್ತನ ಕೆಲಸ ಸಿಕ್ಕಿತು. ಎರಡು ವರ್ಷಗಳ ಬಳಿಕ ಅವರಿಗೆ ಆ ಕಂಪೆನಿಯ ಕಲ್ಕತ್ತದ ಶಾಖೆಗೆ ವರ್ಗವಾಯಿತು. ಕಲ್ಕತ್ತದ ವಾಸವು ಕಾಮತರ ಬದುಕಿಗೆ ಒಂದು ಪ್ರಮುಖ ತಿರುವನ್ನು ತಂದೊಡ್ಡಿತು.

ಕಾಮತರು ಕಲ್ಕತ್ತದಲ್ಲಿ ವಾಸವಾಗಿದ್ದ ಕಾಲ - ಈ ಶತಮಾನದ ಮೊದಲ ದಶಕ. ಬಂಗಾಳಿ ಸಾಹಿತ್ಯದ ಪುನರುಜ್ಜೀವನದ ಕಾಲ. ಆಗ ಅಲ್ಲಿಯ ಸಾಹಿತಿಗಳು ಇಂಗ್ಲಿಷ್ ಮೋಹವನ್ನು ಬಿಟ್ಟು, ಬಂಗಾಳಿಯಲ್ಲಿ ಹೊಸ ಸಾಹಿತ್ಯವನ್ನು ನಿರ್ಮಿಸತೊಡಗಿದ್ದರು. ಬಂಗಾಳಿ ಭಾಷೆಯನ್ನು ಕಲಿತ ಕಾಮತರು ಅಲ್ಲಿಯ ಸಾಹಿತ್ಯವನ್ನು ಆಸಕ್ತಿಯಿಂದ ಓದಲಾರಂಭಿಸಿದರು. ಅದು ಅವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು. ಆಗ ತಮ್ಮ ಇಂಗ್ಲಿಷ್ ಮೋಹದ ಬಗ್ಗೆ ಅವರಿಗೆ ನಾಚಿಕೆಯಾಯಿತು.

ಕನ್ನಡದಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಬೇಕೆಂಬ ಹಂಬಲ ಅವರಲ್ಲಿ ಬಲವಾಗಿ ಬೆಳೆಯ ತೊಡಗಿತು. ಈ ಬಯಕೆಯು ತೀಕ್ಷ್ಣವಾದಾಗ (1910) ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮಂಗಳೂರಿಗೆ ಮರಳಿದರು. ಒಬ್ಬ ಅಧ್ಯಾಪಕನಾದಲ್ಲಿ ಮಾತ್ರ ಸಾಹಿತ್ಯದ ಕಡೆಗೆ ಹೆಚ್ಚು ಗಮನ ಕೊಡಲು ಸಾಧ್ಯ ಎಂದು ನಂಬಿದ ಅವರು ಮದ್ರಾಸಿಗೆ ಹೋಗಿ ಶಿಕ್ಷಕ ತರಬೇತಿ ಪಡೆದುಬಂದರು. ಆ ಕೂಡಲೇ ಅವರಿಗೆ ಮೂಲ್ಕಿಯ ಬೋರ್ಡ್‌ಶಾಲೆಯಲ್ಲಿ ಕೆಲಸ ಸಿಕ್ಕಿತು.

ಆ ದಿನಗಳಲ್ಲಿ ಮೂಲ್ಕಿಯು ಕನ್ನಡ ಸಾಹಿತ್ಯದ ಒಂದು ಕೇಂದ್ರ ವಾಗಿತ್ತು. ಪ್ರಸಿದ್ಧ ಕವಿಗಳಾದ ಬಂಗ್ಲೇಕರ ನಾರಾಯಣ ಕಾಮತರು (ಗೋವಿಂದ ಪೈಯವರ ಭಾವ) ಆ ಕಡೆಯ ಸಾಹಿತಿಗಳಿಗೆ ನಾಯಕರು. ನಾರಾಯಣ ಕಾಮತರಿಗೆ ನಾಟಕಗಳೆಂದರೆ ಬಲು ಮೆಚ್ಚು. ನಾಟಕಗಳನ್ನು ಬರೆದು, ಊರಜನರಿಂದ ಆಡಿಸುವುದು ಅವರಿಗೊಂದು ಚಟವೇ ಆಗಿತ್ತು. ಸಾಕಷ್ಟು ಹಣವಂತರೂ ಆಗಿದ್ದ ಅವರು, 'ಮನೋರಮಾ ಮಂದಿರ' ಎಂಬ ಒಂದು ದೊಡ್ಡ ನಾಟಕಮಂದಿರವನ್ನು ನಿರ್ಮಿಸಿದರು. ಅದರಲ್ಲಿ ಆಗಾಗ ನಾಟಕಪ್ರದರ್ಶನಗಳು ಜರಗುತ್ತಿದ್ದುವು.

ಬಂಗ್ಲೇಕರ ನಾರಾಯಣ ಕಾಮತರಿಗೂ, ಎಂ.ಎನ್. ಕಾಮತರಿಗೂ ಸ್ನೇಹ ಬೆಳೆದದ್ದು ಸಹಜವೇ. ಇಬ್ಬರೂ ಸಾಹಿತಿಗಳು, ಇಬ್ಬರಿಗೂ ನಾಟಕದ ಹುಚ್ಚು. ಕಾಮತರಲ್ಲಿ ಹುದುಗಿದ್ದ ಅಸಾಮಾನ್ಯ ಕಾವ್ಯಶಕ್ತಿಯನ್ನು ಗುರುತಿಸಿದ ಬಂಗ್ಲೇಕರರು ಅವರು ಕವನಗಳನ್ನು ಬರೆಯಬೇಕೆಂದು ಹುರಿದುಂಬಿಸಿದರು.

ಮೂರು ವರ್ಷಗಳ ಕಾಲ ಮೂಲ್ಕಿಯಲ್ಲಿದ್ದ ಕಾಮತರು ಆ ಬಳಿಕ ಬಂಟ್ವಾಳದ ಎಸ್.ವಿ.ಎಸ್. ಶಾಲೆಯಲ್ಲಿ ಅಧ್ಯಾಪಕರಾದರು. ಅವರು ಬಂಟ್ವಾಳ ದಲ್ಲಿದ್ದಾಗ ಚಾರಿತ್ರಿಕವೆನ್ನಬಹುದಾದ ಘಟನೆಯೊಂದು ನಡೆಯಿತು. ಒಬ್ಬ ಹರಿಜನನೊಂದಿಗೆ ಊಟಮಾಡಿದರು ಎಂಬ ಕಾರಣಕ್ಕಾಗಿ ಕಾಮತರನ್ನು ಬಂಟ್ವಾಳದ ಸ್ವಜಾತಿಬಾಂಧವರು ಜಾತಿಯಿಂದ ಹೊರಹಾಕಿದರು. ಜಾತಿಭೇದದಲ್ಲಿ ನಂಬಿಕೆಯಿಲ್ಲದ ಕಾಮತರ ಮೇಲೆ ಈ ಘಟನೆಯು ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. ಹೊಲೆಯರೂ ಇತರರಂತೆ ಮನುಷ್ಯರು; ಅವರನ್ನು ಕೀಳಾಗಿ ಕಾಣುವುದು ಸರಿಯಲ್ಲ ಎಂದು ನಂಬಿದ ಕಾಮತರು ಅವರ ಉದ್ಧಾರಕ್ಕಾಗಿ ಪರಿಶ್ರಮಿಸಿದರು. ಕಾಮತರ ಈ ನಡವಳಿಕೆ ಅವರ ಜಾತಿಬಾಂಧವರನ್ನು ಇನ್ನಷ್ಟು ಕೆರಳಿಸಿತು. ಈ ವಿಷಯವನ್ನು ಯಾರೋ ಕಾಮತರಿಗೆ ತಿಳಿಸಿದಾಗ, "ನಾನೀಗ ಅವರ ಜಾತಿಯವನಲ್ಲನಲ್ಲ!" ಎಂದು ನಗಾಡಿದರಂತೆ. "ಹೊಲೆಯನ ಹಾಡು" ಕವನವನ್ನು ಅವರು ಬರೆದದ್ದು ಈ ಕಾಲದಲ್ಲಿ.

"ಪತಿತಪಾವನ ಬಿರುದು ನಿನಗೆ ಸಲಬೇಕೆಂದು
ಪತಿತರಾಗಿಯೆ ನಮ್ಮವರು ಬಾಳಬೇಕೇ?"

ಎಂಬ ಸಾಲುಗಳಲ್ಲಿನ ಭಾವತೀವ್ರತೆಯನ್ನು ಗಮನಿಸಿದಾಗ, ಕಾಮತರಿಗಿದ್ದ ಸಾಮಾಜಿಕ ಕಳಕಳಿಯ ಬಗ್ಗೆ ನಮಗೆ ಗೌರವ ಮೂಡುತ್ತದೆ.

1918ರ ಮಾರ್ಚ್ ತಿಂಗಳಲ್ಲಿ ಬಂಟ್ವಾಳದ ಶ್ರೀ ತಿರುಮಲ ದೇವಸ್ಥಾನದ ಜೀರ್ಣೋದ್ಧಾರ ಪ್ರತಿಷ್ಠೆಯು ನಡೆಯಿತು. ಆ ದೇವಸ್ಥಾನದ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಕಾಮತರು ಕಾಶಿ ಮಠದ ಸ್ವಾಮೀಜಿಯವರ ಸಮ್ಮುಖದಲ್ಲಿ "ಶ್ರೀ ವಟಪುರಾಧೀಶ್ವರ ಶತಕಂ" ಎಂಬ ಭಾಮಿನಿ ಷಟ್ಪದಿಯ ಕಾವ್ಯವನ್ನು ಓದಿದರು. ಆ ಕಾವ್ಯದಿಂದ ಈ ಕೆಳಗೆ ಉದ್ಧರಿಸಿದ ಸಾಲುಗಳನ್ನು ಗಮನಿಸಿದಾಗ, ಹೊಲೆಯರೆಂದು ಕಡೆಗಣಿಸಲ್ಪಟ್ಟಿದ್ದ ಜನಾಂಗದ ಬಗ್ಗೆ ಅವರಿಗಿದ್ದ ತೀವ್ರಕಾಳಜಿಯು ಮನವರಿಕೆಯಾಗುತ್ತದೆ.

ಬಲ್ಲವನು ನೀನಲ್ಲ, ನಿನ್ನನು ।
ಬಲ್ಲವರು - ದುಃಖಿತರು ಹೊಲೆಯರು ।
ಬಲ್ಲವರು ದಿಕ್ಕಿಲ್ಲ ದಾತರು ನಿಜವಮರೆದವರು ॥
ಎಲ್ಲಿ ದೈನ್ಯತೆ ದುರ್ಬಲತೆ ಮ ।
ತ್ತೆಲ್ಲಿ ಕೋಮಲ ಸರಳ ವಿನಯಗ ।
ಳಲ್ಲಿ ಸುಳಿವಾನಂದ ಗೋವಳ - ವಟಪುರಾಧೀಶಾ ॥

ಮೆಟ್ಟಿಬಲಿಯನು ನೀ ರಸಾತಲ ।
ಕಟ್ಟುತಾತನ ಮೆಟ್ಟಲಲಿ, ಕಣ್ ।
ಬಿಟ್ಟುಕಾವಲು ನಿಂದು ಬೋಧಿಪೆ ನಿಖಿಲ ಶ್ರೇಷ್ಠರಿಗೇ ॥
ಹುಟ್ಟುಸೋದರರೆಲ್ಲವೊಂದಿರ ।
ಲಟ್ಟಹಾಸದ ಮೇಲುಕೀಳೇ ।
ನುಟ್ಟಬಟ್ಟೆಯೊ, ಇಟ್ಟನಾಮವೊ? ವಟಪುರಾಧೀಶಾ ॥

ಹೊರುತ ಹೊಲೆತನ ಭಾರವನು ।
ಕರಮುಗಿದು ಶಿರಬಾಗುತ್ತ ದೈನ್ಯದಿ ।
ಸರಿದುಸಿಂದಿಹೆಯೇಕೆ? ಬಾರಾಲಿಂಗಿಸಲು ಭರದೇ ॥
ನರನು ನೀ ನಾರಾಯಣನು ನೀ ।
ನೆರಡುವಿಗ್ರಹದೊಂದೆ ಮೂರ್ತಿಯು ।
ಮೆರೆದಿಹುದು ಗೋಚರಿಸಲೆಮಗೆಲೆ ವಟಪುರಾಧೀಶಾ ॥

ವರ್ಣದ್ವೇಷವನ್ನು ಕಾಮತರು ಎಷ್ಟು ವಿರೋಧಿಸುತ್ತಿದ್ದರೆಂಬುದು ಅವರು ಬರೆದ 'ಕರ್ಣನ ಕಥೆ'(1923)ಯಲ್ಲಿಯೂ ಸ್ಪಷ್ಟವಾಗಿದೆ. "ಸೂಚನೆ" ಎಂಬ ಅಧ್ಯಾಯದಲ್ಲಿ ಒಂದುಕಡೆ ಅವರು ಈ ರೀತಿ ಬರೆದಿದ್ದಾರೆ - "ದ್ವಾಪರಯುಗದಲ್ಲಿ,- ಈ ಭೇದನೀತಿಯೇ, ಈ ವರ್ಣದ್ವೇಷವೆ, ಈ ದೇಶದ ಭಾಗ್ಯವಿನಾಶಕ್ಕೆ ಕಾರಣವಾಯಿತು. ಈ ನೀತಿಯ ದೋಷವೆ, ಭಾರತವರ್ಷದ ಸರ್ವನಾಶಕ್ಕೆ ಮೊದಲನೆ ಸೂಚನೆ." ಮುಂದೆ, ಕರ್ಣನ ಕಥೆಯನ್ನು ಮುಂದುವರಿಸುತ್ತ, ಅವರು ಹೇಳುತ್ತಾರೆ - "ವರ್ಣದ್ವೇಷದ ದುಸ್ಥಿತಿಯನ್ನೂ ಕೆಟ್ಟ ಪರಿಣಾಮಗಳನ್ನೂ ತಿಳಿದ ಕರ್ಣನು, ಇಂಥ ಅನ್ಯಾಯ ರೂಢಿಯು

ಮಾಯವಾಗಬೇಕೆಂದು ಸಾಧಿಸುವುದಕ್ಕೆ ಅಂದೇ ಶಪಥಮಾಡಿಕೊಂಡನು. ಹಸ್ತಿನಾಪುರದಲ್ಲಿ ತನ್ನಂಥ ವೀರರಿಲ್ಲ; ಆದರೂ ಜನರ ಅನಾದರಕ್ಕೆ ಪಾತ್ರರಾದವರೂ ತನಗಿಂತ ಇನ್ನಾರೂ ಇಲ್ಲ; ಪಾಂಡವರು ಕೆಲವರ್ಷಗಳಲ್ಲೆ ಭಾರತೇಶ್ವರರಾಗುವರಂತೆ; ಹೀಗಿರುವಾಗ ಕರ್ಣನಂಥ ತೇಜವುಳ್ಳ ಪುರುಷನು ವರ್ಣದ್ವೇಷದ ತಾರತಮ್ಯವನ್ನೆಷ್ಟು ಸಹಿಸಿಕೊಳ್ಳುವನು? ಸಿಂಹದ ಮರಿಯನ್ನು ಮೊಲದ ಮನೆಯಲ್ಲಿ ಸಾಕುವದಾದರೆ, ಅದು ಆ ಸ್ಥಿತಿಯನ್ನು ತಾಳುವುದೆಷ್ಟು ಕಾಲಕ್ಕೆ? ಅದೆಷ್ಟು ಹೀನವಾಗಿ, ದೀನವಾಗಿ ಇರಬಲ್ಲುದು? ಅದು ಕಾರಣವೆ, ಕರ್ಣನು ಬ್ರಹ್ಮಚಾರಿಯಾಗಿದ್ದುಕೊಂಡು, ಕಾಡುಗಳಲ್ಲಿ ಅಲೆದಾಡುತ್ತ, ದುರ್ಬಲರೂ ನಿರಾಶ್ರಿತರೂ ನೀಚವರ್ಣದವರೂ ಆದ ಜನಗಳಿಗೆ ಅನಾಥನಾಥನಾಗಿ ಸಹಾಯ ಮಾಡುತ್ತ, ಆಗಾಗ ಹಸ್ತಿನಾವತಿಯ ರಾಜಪುತ್ರರೊಡನೆಯೂ ಬೆರೆತುಕೊಳ್ಳುತ್ತಿದ್ದನು. ಮುಂದೆ ಇದೇ ಉದಾರ ಬುದ್ಧಿಯ ದೆಸೆಯಿಂದ 'ದಾತನಾದ ಕರ್ಣ'ನೆಂದು ಅವನು ಹೆಸರ್ಗೊಂಡನು. ಒಂದು ದಿನವಾದರೂ ಈ ಅಭಿಮಾನಿಗಳಾದ ಕ್ಷತ್ರಿಯರನ್ನು ತಾನು ಪರಾಜಯಗೊಳಿಸದೆ ಇದ್ದರೆ ತನ್ನ ಹೆಸರೇ ಕರ್ಣನಲ್ಲವೆಂದೂ ಅವನು ಆಣೆಯಿಟ್ಟುಕೊಂಡನು."

ಇದೇ ಪುಸ್ತಕದ "ಅರ್ಜುನನೂ ಕರ್ಣನೂ" ಎಂಬ ಅಧ್ಯಾಯದಲ್ಲಿ ಒಬ್ಬ ಸಾಮಾನ್ಯ ಪ್ರಜೆಯು ಆಡುವ ಮಾತು ಹೀಗಿದೆ - "ಒಂದು ದಿನ ಯಾವನೊಬ್ಬನು ರಾಜಪುತ್ರನೆನಿಸಿಕೊಂಡನೆಂದು ಇತರ ವರ್ಣದವರನ್ನು ಚಿರಕಾಲಕ್ಕೂ ಹೀನರೆನ್ನುವುದೆ? ಅವರಲ್ಲಿ ಗುಣವೇ ಇರಬಹುದೆ? ಕರ್ಣನಂಥ ವೀರನಾದರೂ ಇಂಥ ಹಾಳುರೂಢಿಯನ್ನು ಒಂದು ದಿನ ತಿದ್ದದೆ ಇರಲಾರನೆಂದು ನನ್ನ ನಂಬುಗೆ."

ಕಾಮತರು ಕನ್ನಡ ನವೋದಯ ಸಾಹಿತ್ಯದ ಓರ್ವ ಆದ್ಯರಾಗಿ, ಸಮಾಜ ಸುಧಾರಣೆಗಾಗಿ ಬಂಡಾಯವೆದ್ದ ಸಾಹಿತಿಯೆಂಬುದನ್ನು, ಅವರ ಬರೆಹಗಳಲ್ಲಿ ಪ್ರತಿಪಾದಿತವಾದ ವಿಚಾರಧಾರೆಯ ಆಧಾರದಿಂದ, ನಾವು ಗುರುತಿಸಬಹುದು.

ಕಾಮತರು ತಮ್ಮ "ಶ್ರೀ ವಟಪುರಾಧೀಶ್ವರ ಶತಕಂ" ಕಾವ್ಯವನ್ನು ಸ್ವಾಮೀಜಿಯವರ ಸಮ್ಮುಖದಲ್ಲಿ ವಾಚಿಸಿದ ಪ್ರಸಂಗವನ್ನು ಈಗಾಗಲೆ ಪ್ರಸ್ತಾವಿಸಿರುವೆನಷ್ಟೆ? ಕಾಮತರು ಕಾವ್ಯವನ್ನು ಓದಿಮುಗಿಸಿದಾಗ, ಸ್ವಾಮೀಜಿಯವರು, ಕುತೂಹಲದಿಂದ "ಯಾರಿವರು ಈ ಅದ್ಭುತ ಕವಿ?" ಎಂದು ತಮ್ಮ ಸುತ್ತಮುತ್ತ ಕುಳಿತವರೊಡನೆ ಕೇಳಿದರು. "ಅವನೊಬ್ಬ ದೊಡ್ಡ ತರಲೆ ಮನುಷ್ಯ. ಹೊಲೆಯರ ಉದ್ಧಾರ ಮಾಡುತ್ತಾನಂತೆ! ಇತ್ತೀಚೆಗೆ ಹೊಲೆಯನೊಬ್ಬನೊಡನೆ ಊಟ ಮಾಡಿದ. ಆ ಕಾರಣಕ್ಕಾಗಿ ನಾವು ಅವನನ್ನು ಜಾತಿಯಿಂದ ತೆಗೆದುಹಾಕಿದ್ದೇವೆ." ಎಂದು ಆಢ್ಯರೊಬ್ಬರು ಸ್ವಾಮೀಜಿಯವರಿಗೆ ಹೇಳಿದರು. ಕೂಡಲೇ ಸ್ವಾಮೀಜಿಯವರು "ಈ ವ್ಯಕ್ತಿಯನ್ನು ಜಾತಿಯಿಂದ ಹೊರಗೆ ಹಾಕಿ, ನೀವು ತಪ್ಪು ಮಾಡಿದಿರಿ. ಇದೀಗ ನಾವು ಈ ಬಹಿಷ್ಕಾರವನ್ನು ತೆಗೆದುಹಾಕಿದ್ದೇವೆ. ಇಂಥ ವ್ಯಕ್ತಿಯು ನಮ್ಮ ಸಮಾಜಕ್ಕೆ ಒಂದು ಆಭರಣ" ಎಂದು ಅಪ್ಪಣೆಕೊಡಿಸಿದರಂತೆ!

ಅದೇ ವರ್ಷ ಜೂನ್ ತಿಂಗಳಿನಲ್ಲಿ ಕಾಮತರಿಗೆ ತಾವು ಕಲಿತಿದ್ದ ಕೆನರಾ ಹೈಸ್ಕೂಲಿನಲ್ಲಿ ಉದ್ಯೋಗ ದೊರಕಿತು. ಹೀಗೆ, ವಿವಾದಾತ್ಮಕವಾಗಿದ್ದ ಅವರ ಬಂಟ್ವಾಳ ವಾಸ ಮುಕ್ತಾಯಗೊಂಡಿತು.

ಕಾಮತರು ಕೆನರಾ ಹೈಸ್ಕೂಲನ್ನು ಅಧ್ಯಾಪಕರಾಗಿ ಸೇರಿದ ವರ್ಷವೇ ನನ್ನ ತಂದೆ (ದಿವಂಗತ ಜಿ.ಎಸ್. ಲಕ್ಷ್ಮಣ ಪೈ)ಯವರು ಆ ಸಂಸ್ಥೆಯಲ್ಲಿ ವಿದ್ಯಾರ್ಜನೆಗೆ ತೊಡಗಿದ್ದು. ಕಾಮತರು ಭೂಗೋಳವನ್ನು ಕಲಿಸುತ್ತಿದ್ದರು. ಕಾಮತರು ಒಬ್ಬ ಅಸಾಮಾನ್ಯ ಅಧ್ಯಾಪಕರಾಗಿದ್ದರು ಎಂದು ತಂದೆಯವರು ಆಗಾಗ ನೆನಪುಮಾಡಿ ಕೊಳ್ಳುತ್ತಿದ್ದರು.

ಆ ವರೆಗೆ ಕೆನರಾ ಹೈಸ್ಕೂಲಿನಲ್ಲಿ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಕ್ಕಳಿಂದ ಇಂಗ್ಲಿಷ್ ನಾಟಕಗಳನ್ನು ಆಡಿಸುವ ಕ್ರಮವಿತ್ತು. ಕಾಮತರು 'ಕನ್ನಡ ನಾಟಕಗಳನ್ನು ಆಡಿಸುವುದು ಸೂಕ್ತ' ಎಂಬ ಅಭಿಪ್ರಾಯವನ್ನು ಸೂಚಿಸಿದರು. 'ಕನ್ನಡ ನಾಟಕಗಳನ್ನು ಆಡಿಸಲು ಅಡ್ಡಿಯಿಲ್ಲ; ಆದರೆ ಕನ್ನಡ ನಾಟಕಗಳೆಲ್ಲಿವೆ?' ಎಂಬ ಪ್ರಶ್ನೆಯನ್ನು ಮುಖ್ಯೋಪಾಧ್ಯಾಯರು ಮುಂದಿರಿಸಿದಾಗ ಕಾಮತರು ಕಾರ್ಯೋನ್ಮುಖರಾದರು. ಎರಡು ಏಕಾಂಕ ನಾಟಕಗಳನ್ನು ಆ ರಾತ್ರಿಯೇ ಬರೆದು ಮರುದಿನ ಮುಖ್ಯೋಪಾಧ್ಯಾಯರಿಗೆ ನೀಡಿದರು. ಈ ರೀತಿ, 1918ರಲ್ಲಿ ಪ್ರಥಮ ಬಾರಿಗೆ ದಕ್ಷಿಣಕನ್ನಡದ ಶಾಲೆಯೊಂದರಲ್ಲಿ ಕನ್ನಡ ನಾಟಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಅನಂತರ 1940ರ ವರೆಗೆ ಪ್ರತಿವರ್ಷವೂ ಕಾಮತರು ಬರೆದ ನಾಟಕಗಳೇ ಕೆನರಾ ಹೈಸ್ಕೂಲಿನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರದರ್ಶನ ಗೊಳ್ಳುತ್ತಿದ್ದುವು.

ಅದೇ ರೀತಿ ಆ ವರೆಗೆ ಶಾಲಾಪ್ರಾರ್ಥನೆಗಾಗಿ ಇಂಗ್ಲಿಷ್ ಪದ್ಯವನ್ನೇ ಮಕ್ಕಳಿಂದ ಹಾಡಿಸುತ್ತಿದ್ದರು. ಇದು ಹಾಸ್ಯಾಸ್ಪದ ಎಂದು ತಿಳಿದ ಕಾಮತರು ರವೀಂದ್ರನಾಥ ಠಾಗೋರರ ಕವನವೊಂದನ್ನು ಕನ್ನಡಕ್ಕೆ ಭಾಷಾಂತರಿಸಿ ಅದನ್ನು ಪ್ರಾರ್ಥನೆಯ ಗೀತವನ್ನಾಗಿ ಮಾಡಿದರು. "ಎಲ್ಲಿ ಮನಕಳುಕಿರದೊ, ಎಲ್ಲಿ ತಲೆಬಾಗಿರದೊ" ಎಂಬ ಕವನವೇ ಈ ಪ್ರಾರ್ಥನೆಯ ಗೀತ. ಈ ಕವನಕ್ಕೆ ಕಾಮತರೇ ರಾಗ ಸಂಯೋಜಿಸಿದರು. ಈ ಗೀತವು ಕ್ಷಿಪ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಪ್ರಿಯ ವಾಯಿತು. ದಕ್ಷಿಣ ಕನ್ನಡದ ಬಹುಪಾಲು ಶಾಲೆಗಳಲ್ಲಿ ಇದು ಪ್ರಾರ್ಥನೆಯ ಗೀತವಾಗಿ ಅಂಗೀಕೃತವಾಯಿತು.

ಒಮ್ಮೆ ಪಂಜೆ ಮಂಗೇಶರಾಯರು ಕೆನರಾ ಹೈಸ್ಕೂಲಿಗೆ ಅತಿಥಿಯಾಗಿ ಬಂದಾಗ ಕಾಮತರೇ ಈ ಗೀತವನ್ನು ಹಾಡಬೇಕೆಂದು ಪಂಜೆಯವರು ಒತ್ತಾಯಿಸಿ ದರಂತೆ. ಉನ್ನತ ಮಟ್ಟದ ಗಾಯಕರಾದ ಕಾಮತರು ಈ ಗೀತವನ್ನು ಹಾಡುತ್ತಿದ್ದಾಗ ಪಂಜೆಯವರ ಕಣ್ಣುಗಳು ತೇವಗೊಂಡುವು. ವೇದಿಕೆಯಲ್ಲಿಯೇ ಕಾಮತರನ್ನು ಅಪ್ಪಿ ಹಿಡಿದ ಪಂಜೆಯವರು, 'ಕಾಮತರು ಶ್ರೇಷ್ಠ ದರ್ಜೆಯ ಕವಿ, ಕನ್ನಡ ಕಾವ್ಯವನ್ನು

ಶ್ರೀಮಂತಗೊಳಿಸುವುದು ಅವರ ಕರ್ತವ್ಯವಾಗಿದೆ' ಎಂದು ಹೇಳಿದರು. ಇದರಿಂದ ಸ್ಫೂರ್ತಿಗೊಂಡ ಕಾಮತರು "ತೋಳನೂ ಕುರಿಮರಿಯೂ", "ಜೀವನ ಸಮಸ್ಯೆ", "ತುಳುನಾಡ ರಾಣಿ", "ಗೂಡಿನಲ್ಲಿಯ ಇಲಿ" ಮತ್ತು "ಬಾಲ ಕಳೆದ ನರಿಯ ಉಪದೇಶ" ಎಂಬ ಕವನಗಳನ್ನು ಬರೆದು ಪಂಜೆಯವರಿಗೆ ಕೊಟ್ಟರು. "ತುಳುನಾಡ ರಾಣಿ" ಮತ್ತು "ಬಾಲ ಕಳೆದ ನರಿಯ ಉಪದೇಶ" - ಈ ಎರಡು ಕವನಗಳು ಮೇಲ್ಪಂಕ್ತಿಯವುಗಳು ಎಂದು ಪಂಜೆಯವರು ಅಭಿಪ್ರಾಯಪಟ್ಟರು; ಕನ್ನಡನಾಡಿನ ಅತ್ಯುತ್ತಮ ಕವಿಗಳಲ್ಲೊಬ್ಬರು ಎಂದು ಕಾಮತರನ್ನು ಅವರು ಪ್ರಶಂಸಿಸಿದರು. ಈ ಎಲ್ಲ ಕವನಗಳು ಪಂಜೆಯವರು ಸಂಪಾದಿಸಿದ "ಕನ್ನಡ ಎರಡನೆಯ ಪದ್ಯಪುಸ್ತಕ"ದಲ್ಲಿ ಬೆಳಕುಕಂಡಿವೆ (1925).

ಕಾಮತರಿಗೆ ಎಂಟು ಮಕ್ಕಳು; ದೊಡ್ಡ ಸಂಸಾರ. ತಮ್ಮ ವೇತನದಿಂದ ದಿನದೂಡುವುದು ಅವರಿಗೆ ಕಷ್ಟವಾಗತೊಡಗಿದಾಗ ಅವರು ಮಂಗಳೂರಿನ ಸಿನೆಮಾ ಮಂದಿರಗಳಿಗೆ ಪ್ರಚಾರಪತ್ರಗಳನ್ನು ಬರೆಯಲಾರಂಭಿಸಿದರು. ಅದಲ್ಲದೆ, ಆ ಕಾಲದಲ್ಲಿ ಅವರು ಪಠ್ಯ ಪುಸ್ತಕಗಳನ್ನೂ ಬರೆಯಲಾರಂಭಿಸಿದರು.

ಕೆನರಾ ಹೈಸ್ಕೂಲನ್ನು ಸೇರಿದ ಮೇಲೆ, ಕಾಮತರು ಕನ್ನಡನಾಡಿನ ವಿವಿಧ ಪತ್ರಿಕೆಗಳಿಗೆ ಲೇಖನ, ಕವನ ಮತ್ತು ಏಕಾಂಕ ನಾಟಕಗಳನ್ನು ನೀಡಲಾರಂಭಿಸಿದರು. ಪತ್ರಿಕೋದ್ಯಮಿಯಾಗಿದ್ದ ಹುರುಳಿ ಭೀಮರಾಯರು ಕಾಮತರ ಬಗ್ಗೆ ಈ ರೀತಿ ಬರೆದಿದ್ದಾರೆ - "ವನವಾಸಕ್ಕೆ ಹೊರಟ ಪಾಂಡವರ ಗತಿಯೂ, ಲೋಕಸೇವೆಗಾಗಿ ಹೊರಟ ಕನ್ನಡ ಪತ್ರಿಕೆಗಳ ಪಾಡೂ ಸಾಮಾನ್ಯ ಒಂದೇ. ಪಾಂಡವರು, ಅಂದು ಆ ಅಕ್ಷಯಪಾತ್ರದಿಂದ ಬದುಕಿದ್ದರೆ, ಕನ್ನಡ ಪತ್ರಿಕೆಗಳು ಇಂದು 'ಕಾಮತರು' ಎಂಬ ಈ 'ಅಕ್ಷಯಪಾತ್ರ'ದಿಂದ ತಲೆ ಎತ್ತಿದುವೆನ್ನಬೇಕು. ವಿದ್ಯಾಪ್ರಚಾರವು ಸಾಕಷ್ಟಿರದ ಅದೊಂದು ಕಾಲದಲ್ಲಿ, ಕಾಮತರ ಆರಂಭದ ಲೇಖಗಳ ಪ್ರತಿಭೆಯು ಅಷ್ಟಾಗಿ ಒಡೆದು ತೋರಲಿಕ್ಕಿಲ್ಲ:ನಿಜ. ಆದರೆ ಕಾಮತರು ಅಷ್ಟರಿಂದಲೇ ಹತಾಶರಾಗಲಿಲ್ಲ; ತಾಳ್ಮೆಯಿಂದ, ಸಾಹಸದಿಂದ ಪತ್ರಿಕೋದ್ಯಮವನ್ನು ವೀರಸೇನಾನಿಯಂತೆ ಮುಂದೊತ್ತಿದರು. ಕನ್ನಡಿಗರಿಗೆ ರುಚಿಸುವ ವಿಷಯಗಳಾವುವು, ಆ ಲೇಖಗಳು ಹೇಗಿರಬೇಕು ಎಂದು ಮುಂತಾಗಿ ತಾನೇ ವಿಮರ್ಶಿಸಿಯೂ, ಇತರರಿಂದ ಅಭಿಪ್ರಾಯ ಸಂಗ್ರಹಿಸಿಯೂ ಆ ಉದ್ಯಮದ ಮರ್ಮ ಕಂಡುಹಿಡಿದರು. ಪಂಡಿತರಿಗೂ ಪಾಮರರಿಗೂ ರಂಜನೆಯಾಗುವಂತೆ, ಸ್ವಾರಸ್ಯವಾದ ಲೇಖಗಳನ್ನು ಬರೆಯತೊಡಗಿದರು. ಇವರಿಂದ ಅವರ ಪ್ರಯತ್ನವು ಫಲಿಸಿತು. ಪತ್ರಿಕಾಪ್ರಪಂಚದ ಈ ಅಕ್ಷಯ ಪಾತ್ರದ ಬೆಲೆ ಇಡೀ ಕನ್ನಡ ನಾಡಿಗೇ ತಿಳಿಯಿತು. ಅವರಿವರಿಗೆಂದಲ್ಲ; ಮುದುಕರಿಂದ ಹಿಡಿದು ಮಕ್ಕಳವರೆಗೂ ಅವರ ಹೆಸರು ಮನೆಯ ಮಾತಾಗಿ ಓಡಾಡುವಂತಾಯಿತು.

'ಶ್ರೀಕೃಷ್ಣಸೂಕ್ತಿ' 'ಪ್ರವಾಸಿ' 'ಸ್ವದೇಶಾಭಿಮಾನಿ' 'ಕಂಠೀರವ' 'ನವಯುಗ' 'ಪ್ರಭಾತ' ಮೊದಲಾದ ಈ ಜಿಲ್ಲೆಯ ಪತ್ರಿಕೆಗಳಿಗೂ ಬರೆಯುತ್ತಿದ್ದುದೇ ಅಲ್ಲದೆ

ಕಾಮತರು 'ಸುಧಾರವಾದಿ' ಎಂಬ ಮೈಸೂರಿನ ಉತ್ಕೃಷ್ಟ ಮಾಸಪತ್ರಿಕೆಯ ಪ್ರಕ್ತ ಲೇಖಕರೂ ಆಗಿದ್ದರು. ಜಿಲ್ಲೆಯ ಹೊರಗಡೆಯ ಇತರ ಹಲವು ಕನ್ನಡ ಪತ್ರಿಕೆಗಳಿಗೂ ಲೇಖನಗಳನ್ನು ಕಳುಹಿಸುತ್ತಿದ್ದರು. ಆ ಲೇಖನಗಳಿಗೆ ಅವರಿಗೆ ವಿಶೇಷವಾದ ಗೌರವವು ಅಲ್ಲಿಯೂ ದೊರಕಿತ್ತು. ಅಂತೂ ಪತ್ರಿಕೋದ್ಯಮದಲ್ಲಿ ಇವರು ತಮಗೊಂದು ಹಿರಿಯ ಸ್ಥಾನವನ್ನೇ, ಸ್ವಸಾಮರ್ಥ್ಯದಿಂದಲೇ ನಿಖಿಲ ಕರ್ನಾಟಕದಲ್ಲಿ ಸಂಪಾದಿಸಿದ್ದರೆಂಬುದು ನಿರ್ವಿವಾದ."

ಹುರುಳಿ ಭೀಮರಾವ್ ಅವರ ಈ ಮಾತುಗಳನ್ನು ಅವರು ಬರೆದ "ಕರ್ನಾಟಕ ಪತ್ರಿಕಾ ಪ್ರಪಂಚದ ಅಕ್ಷಯ ಪಾತ್ರ" ಲೇಖನದಲ್ಲಿ (ಅಂದಿನ ಅಪ್ಪೂರು) ನೋಡಬಹುದು. ಈ ಲೇಖನದ ಅಂತ್ಯದಲ್ಲಿ ಭೀಮರಾಯರು "ಕಂಠೀರವ" ಪತ್ರಿಕೆಯ 18-6-1929ರ ಸಂಚಿಕೆಯಲ್ಲಿ ಪ್ರಕಟವಾದ ಕಾಮತರ ಲೇಖನವೊಂದನ್ನು ಆಯ್ದು ಕೊಟ್ಟಿದ್ದಾರೆ. "ಕಾಲಮಹಿಮೆಯ ದೃಷ್ಟಾಂತ" ಎಂಬ ಆ ಲೇಖನವು ಈ ರೀತಿ ಇದೆ -

"ರಾಜಕೀಯ ಪಂಗಡಗಳು ಹೆಚ್ಚುವಂತಾಗಿ, ಹೊಸಪಾರ್ಟಿಗಳು ತಲೆ ದೋರುತ್ತಿವೆ. ನಮ್ಮ ಸಂಸ್ಥಾನದ ರಾಜಕೀಯ ಕಾರ್ಯಕ್ಷೇತ್ರದಲ್ಲಿ, ಹೊಸ ಹೊಸ ಆಳಿಂಬೆಗಳು ತಲೆ ಎತ್ತುತ್ತಲಿವೆ. ಇದ್ದ ಪಾರ್ಟಿಗಳಿಗೇ ಗತಿಯಿಲ್ಲ, ಇನ್ನೂ ಕೊಡೋ ಸದಾಶಿವ, - ಎಂದಾಗ ಡಾ| ವರದರಾಜುಲು ನಾಯುಡುರವರ ಆಲಾಪ. ಹೊಸ ಪಾರ್ಟಿಗಳನ್ನು ಹೊರಡಿಸುವುದೆಂದರೆ, ಹೊಸ ಕಾಫಿ ಹೊಟೇಲನ್ನು ತೆರೆದಂತಾಗಿದೆ. ಹೊಸ ಗಿರಾಕಿಗಳು ನಾಲ್ಕು ದಿನ ತುಂಬಾ ಬರುವರು; ಲೆಕ್ಕ ಕಡ; ವಸೂಲಿಗಾಗಿ ಕೇಳುತ್ತಲೆ ಗಿರಾಕಿಗಳು ಮಾಯವಾಗುವರು; ನಂತರ ಹೊಟೇಲು 'ಬಂದ್'. ಪಾರ್ಟಿಯಾಯಿತು; ನಮ್ಮ ಮುಖಂಡರೂ ಚೆನ್ನಾಗಿ ಲಂಗ್‌ಪವರ್ (ಶ್ವಾಸಕೋಶಗಳ ಬಲ) ಪ್ರದರ್ಶಿಸಿದರು; ಜನಕೂಡಿತು; ಗಲಭೆ; ಮೆರವಣಿಗೆ; ಸಭೆ; ಪತ್ರಿಕೆಗಳಲ್ಲಿ ನಾಲ್ಕು ಲೇಖನಗಳು. ಅಷ್ಟರಲ್ಲಿ ಗಾಳಿ ಬೇರೆ ಕಡೆಯಿಂದ ಬೀಸಿತು. ಸರಿ, ಪಾರ್ಟಿ ಅಲ್ಲೇ 'ಪಾರ್ಟ್ಸ್'ಯಿತು, ಹೊಸ ಪಾರ್ಟಿಗೆ ಪ್ರಾರಂಭವಾಗಲು ವೇಷಹಾಕಿಕೊಳ್ಳಲು ಮೊದಲಾಯಿತು. ದೇಶಹಿತಕ್ಕಾಗಿ ರಾಜಕೀಯ ಸ್ವಾತಂತ್ರ್ಯವನ್ನೂ ಸರ್ವ ಸಮಾಜಗಳಿಗೆ ನ್ಯಾಯವನ್ನೂ ಸಲ್ಲಿಸಲು ಹೋರಾಡುವ ಪಾರ್ಟಿಯೊಂದನ್ನು ನಾಯುಡುರವರು ಹೊರಡಿಸಿರುವರು. ದೇಶಹಿತಕ್ಕಾಗಿಯೇ ಎಲ್ಲರೂ ಹೊರಡಿಸುವರು; ರಾಷ್ಟ್ರಸಭೆಯಿದೆ, ಸ್ವತಂತ್ರಪಕ್ಷವೂ ಇದೆ. ಅದಲ್ಲದಿದ್ದರೆ ಇದೊಂದಾದರೂ ಇರಬಹುದಾಗಿತ್ತು. ಪರಂತು, ಮುಖಂಡರಾಗಬೇಕೆನ್ನುವವರು ಹೊಸ ಪಾರ್ಟಿ ಸ್ಥಾಪಿಸದೆ ಏನು ಮಾಡಬಹುದು? ಆದಕಾರಣ, ಇದೂ ಒಂದು ದೇಶಹಿತಕ್ಕಾಗಿ! ನಾವು ಹೇಳಬಹುದಾದರೆ, - ದೇಶಹಿತಕ್ಕಾಗಿ ಇದ್ದ ಪಾರ್ಟಿಗಳೇ ಸಾಕು, ಇನ್ನು ಹೊಸ ಪಾರ್ಟಿಗಳನ್ನು ಸಾಕುಮಾಡಿರಿ!"

ಕಾಮತರ ವ್ಯಕ್ತಿತ್ವದ ಹಿರಿಮೆ ಡಾ| ಶಿವರಾಮ ಕಾರಂತರ ಈ ಮಾತುಗಳಿಂದ ವ್ಯಕ್ತವಾಗುತ್ತದೆ - "ಅವರ ನಗುವಿನ ಸತ್ಯ ನಾನು ಚೆನ್ನಾಗಿ ಮನಗಂಡುದು— ಅವರ ಮೃತ್ಯುಶಯ್ಯೆಯಲ್ಲೇ. ಅವರು ಕೊನೆಗಾಣುವ ಒಂದು ವಾರದ ಮೊದಲು

ಸಾಸವತ ಮನೆಗೆ ನೋಡಲು ಆತುರನಾಗಿ ಹೋಗಿದ್ದೆ. ಅವರನ್ನು ಕಾಡುತ್ತಿದ್ದ ಜಲೋದರ, ಅವರ ಶಕ್ತಿ ಕುಗ್ಗಿಸಿ ಕಷ್ಟ ಕೊಡುತ್ತಿದ್ದರೂ, ಶರೀರವನ್ನು ಎಳೆದು ಕುಳ್ಳಿರಿಸಿಕೊಂಡು, ನನ್ನೊಡನೆ ಕ್ಷೇಮಸಮಾಚಾರ ತೊಡಗಿದರು. 'ನೀವು, ನಿಮ್ಮ ಮನೆಯವರು, ನಿಮ್ಮ ಮನೆ ನಾಯಿಗಳು' - ಎಲ್ಲವನ್ನೂ ವಿಚಾರಿಸಿದರು. ಜೊನೆಯವುಗಳನ್ನು ಅವರು ನಾಲ್ಕು ತಿಂಗಳ ಮೊದಲು ಕಂಡಿದ್ದರು. ಅವರೇನು ಶುನಕಪ್ರಿಯರಲ್ಲ. ಆದರೂ ಆ ಲಘುಬಗೆಯಲ್ಲಿ ನಾಯಿಗಳ ಕ್ಷೇಮ ಕೇಳುವ ಆತುರ ಉಳಿಯಿತು. ಎರಡು ದಿನದ ಬಳಿಕ ನನ್ನ ಹೆಂಡತಿ ಅವರನ್ನು ಕಾಣಲು ಹೋದಾಗ - ಒಂದು ತಾಸಿನ ನಗುವಿನ ಔತಣವನ್ನೇ ಉಣಿಸಿದರಂತೆ. ತಮ್ಮ ಮನೆಯ ನೆರೆಕರೆಯ ಒಬ್ಬರು ಎಷ್ಟು ಗಪ್ಪಲಪ್ರಿಯರೆಂಬುವದನ್ನು ಕುರಿತು ಬಣ್ಣಿಸಿ ಬಣ್ಣಿಸಿ–ನಗಿಸಿದರು. ಆ ಅಶಾಂತಿ ಅವರ ಶರೀರದ ಬೇನೆಗೆ ಶೂಲವಾಗಿದ್ದರೂ, ಅದನ್ನು ನಗುವಿನಲ್ಲಿ ಮರೆಯಿಸಿದರು. ಇದಾದ ಒಂದೆರಡು ದಿನಗಳಲ್ಲೆ ಕಾಮತರು ಇಲ್ಲವಾದರು ಎಂಬುದನ್ನು ತಿಳಿದರೆ ಆಗ ಅವರ 'ನಗು'ವಿನ ಆಳತೆ ನಮಗೆ ತಿಳಿದೀತು. ಅವರ ಕೊನೆಗಾಲ ಬೇನೆಯಿಂದ ಎಷ್ಟೋ, ವ್ಯಥೆಯಿಂದಲೂ ಅಷ್ಟೇ ತುಂಬಿತ್ತು. ಆ ಗಳಿಗೆಯಲ್ಲೆಲ್ಲ 'ನಗುವು' ಉಕ್ಕೇರಲು - ಎಷ್ಟು ಎದೆಗಾರಿಕೆ ಬೇಡ? ನಗು, ಲಘುಹಾಸ್ಯ ಅವರಲ್ಲಿ ರಕ್ತಗತವಾಗಿ ಬಂದ ಸಂಪತ್ತುಗಳು. ತಮ್ಮ ದುಃಖವನ್ನು ಮರೆಯಲು ಉಕ್ಕಿ ಬರುತ್ತಿರುವ ಅವರ ಹಾಸ್ಯವು, ಪರರಿಗೆ ಸಂತೋಷಕೊಟ್ಟುದರಲ್ಲಿ ಆಶ್ಚರ್ಯವೇನು?"

1940ರ ಮೇ ತಿಂಗಳ ಸಂಚಿಕೆಯಲ್ಲಿ ಧಾರವಾಡದ "ಜಯಕರ್ನಾಟಕ" ಪತ್ರಿಕೆಯು ಕಾಮತರಿಗೆ ಈ ರೀತಿ ಶ್ರದ್ಧಾಂಜಲಿ ಅರ್ಪಿಸಿತು.

"ಪ್ರಸಿದ್ಧ ಕನ್ನಡ ಸಾಹಿತಿಗಳಾದ ಮಂಗಳೂರಿನ ಶ್ರೀ ಎಂ. ಎನ್. ಕಾಮತರವರು ಕಳೆದ 24ನೆಯ ತಾರೀಖಿನ ಸಂಜೆಗೆ ಪರಲೋಕವಾಸಿಗಳಾದುದು ತಿಳಿಸಲು ಅತಿ ದುಃಖಕರವಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಇವರು ವಿಪುಲವಾಗಿ ಕೆಲಸಮಾಡಿದ್ದಾರೆ. ಇವರ ಕವನಗಳು, ಸಣ್ಣಕತೆಗಳು, ನಾಟಕಗಳು, ಪ್ರಬಂಧಗಳು ಮೊದಲಾದ ಎಲ್ಲ ಸಾಹಿತ್ಯ ವಿಶೇಷಗಳನ್ನು ಓದಿ ಕನ್ನಡಿಗರು ನಲಿದಿದ್ದಾರೆ. ಇವರು ಸಾಹಿತ್ಯವಿಷಯಕವಾದ ತಮ್ಮ ಸುಂದರ ವಿಚಾರಗಳನ್ನು ಕುರಿತು ಚೆನ್ನಾಗಿ ಮಾತಾಡಬಲ್ಲವರಾಗಿದ್ದರು. ಮೊನ್ನೆ ಮೊನ್ನೆ ಬೆಂಗಳೂರಿನಲ್ಲಿ ಕೂಡಿದ್ದ ಕರ್ನಾಟಕದ ಕತೆಗಾರ ಸಮ್ಮೇಲನಕ್ಕೆ ಅಧ್ಯಕ್ಷರಾಗಿದ್ದರು. ಪತ್ರಿಕಾ ವ್ಯವಸಾಯದಲ್ಲಿಯೂ ಇವರಿಗೆ ಗತಿ ಇದ್ದಿತು. ಹಲವು ವರ್ಷಗಳಿಂದ ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು. ಇವರಲ್ಲಿ ಪಾಂಡಿತ್ಯದೊಡನೆ ಶಿಕ್ಷಣಕಲಾ ವಿಚಕ್ಷಣತೆಯೂ ಸಹೃದಯತೆಯೂ ಇದ್ದುದರಿಂದ, ಇವರ ಮೆಚ್ಚಿನ ಶಿಷ್ಯವೃಂದವೂ ದೊಡ್ಡದು. ಇವರು ಉತ್ಸಾಹಿಗಳು; ಮಂಗಳೂರು ಮಿತ್ರಮಂಡಲಿಯ ಹಿರಿಯ ಘಟಕರೇ ಆಗಿ ತರುಣರೊಡನೆ ತರುಣರಂತೆ ಕಾರ್ಯ ಮಾಡಿದರು. ಕೆಲ ದಿನಗಳಿಂದ ಉದರರೋಗಕ್ಕೆ ಪಕ್ಕಾಗಿ 57ನೆಯ ವಯಸ್ಸಿನ ಅಕಾಲದಲ್ಲಿ ತೀರಿಕೊಂಡರು. ಕನ್ನಡ ತಾಯಿಯ ಸುಪುತ್ರನೊಬ್ಬನು ಇಲ್ಲವಾದನು. ಇವರ ಆತ್ಮಕ್ಕೆ ಸದ್ಗತಿ ದೊರೆಯಲಿ."

೩

ಸಾಹಿತ್ಯ

ಕಾಮತರು ಸಣ್ಣ ಕತೆ, ಕಾದಂಬರಿ, ನಾಟಕ, ಕವನ, ಹರಟೆ, ಲಲಿತ ಪ್ರಬಂಧ ಈ ಎಲ್ಲ ಕ್ಷೇತ್ರಗಳಲ್ಲಿಯೂ ಕೈಯಾಡಿಸಿದ್ದಾರೆ. ಅವರ ಬರೆಹಗಳಲ್ಲಿ ಹೆಚ್ಚಿನವು ಈಗ ಸಿಗುತ್ತಿಲ್ಲ. ದೊರೆಯುವ ಕೃತಿಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಹಿಂದುಳಿದ ಜಾತಿಯವರ ಮೇಲೆ ಅವರಿಗಿರುವ ಅನುಕಂಪ ಮತ್ತು ನಂಬಿಕೆ. ಅದೇ ರೀತಿ ಸಮತಾವಾದದ ಬಗೆಗೆ ಅವರು ತಾಳಿದ್ದ ಸ್ಪಷ್ಟ ನಿಲುವು ಅವರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಈ ವಿಷಯಗಳು ನಮಗೆ ಪ್ರಸ್ತುತ ಮುಖ್ಯವಾಗಿವೆ. ಆದುದರಿಂದ ಮೊತ್ತಮೊದಲು ಈ ಕಡೆಗೆ ಗಮನ ಹರಿಸೋಣ.

ಅವರ 'ಮೌರ್ಯ ಸಿಂಹಾಸನ' (1919) ನಾಟಕದಲ್ಲಿ ಬರುವ ಒಂದು ಸಂಭಾಷಣೆ ಹೀಗಿದೆ:

ನಂದ:- ಆ ಶೂದ್ರ ಸ್ತ್ರೀಯ ಮಗನು! ಅವನೂ ಅರಸನಾಗುವುದುಂಟೆ? ಪ್ರಮಾಣವೆಲ್ಲಿದೆ?

ಚಾಣಕ್ಯ:- ಆತನು ಶೂದ್ರನಾದ ಮಾತ್ರಕ್ಕೆ ಅರಸನಾಗಲೆಬಾರದೆ? ಬಹುಕಾಲವೂ ಕ್ಷತ್ರಿಯರ ಸಹವಾಸದಲ್ಲಿದ್ದ ಶೂದ್ರನಲ್ಲವೆ ಅಪ್ರತಿಮವೀರನಾದ ಕರ್ಣನು? ಅವನು ಅಂಗದೇಶಕ್ಕೆ ಅಧಿಪತಿಯಾಗಿದ್ದನಷ್ಟೆ? ಯೋಗ್ಯತೆಯನ್ನು ಸಂಪಾದಿಸಿಕೊಂಡವರಲ್ಲಿ ವರ್ಣಭೇದವನ್ನು ನೋಡಲಾಗದು. ವರ್ಣಕ್ಕಿಂತ ಗುಣ; ಕುಲಕ್ಕಿಂತ ಶೀಲ. ಕ್ಷತ್ರಿಯರಲ್ಲಿ ಹುಟ್ಟಿ ಕುಲಾಧಮನೆನಿಸಿಕೊಳ್ಳುವುದಕ್ಕಿಂತಲೂ, ಶೂದ್ರರಲ್ಲಿ ಜನ್ಮಿಸಿ,

ರಾಜತ್ವವನ್ನು ಗಳಿಸಿಕೊಳ್ಳುವುದು ಎಷ್ಟೋ ಮೇಲು. ರಾಜ್ಯದಲ್ಲಿಯ ಚೇತನವನ್ನು ಅಂಕೆಯಲ್ಲಿಟ್ಟು, ಪ್ರಜೆಗಳ ಪುರೋಭಿವೃದ್ಧಿಗಾಗಿ ಅದನ್ನು ನಡೆಸುವಾತನೆ ಅರಸು. ಶೂದ್ರನಾದರೆ ವಿಾರಿತೆ?

ನಂದ:- ಆ ಶೂದ್ರನೆ ಅರಸನಾಗಲೆನ್ನುವುದೆ?

ಚಾಣಕ್ಯ: ಕ್ಷತ್ರಿಯನು ಅರಸನಾಗಬಹುದಲ್ಲದೆ. ಶೂದ್ರನು ಅರಸನಾಗಬಾರದೆಂದಿಲ್ಲ. ಯಾರ ತಲೆಗೂ ಕಿರೀಟವು ಒಪ್ಪುತ್ತಿದೆ. ಕೈಗಳಿರುವವರು ರಾಜದಂಡವನ್ನು ಹಿಡಿಯಬಹುದು. ಆದರೆ ರಾಜ್ಯವನ್ನಾಳುವ ತೇಜಸ್ಸು ಯಾರ ಹೃದಯದಲ್ಲಿರುವುದೊ ರಾಜ್ಯದ ಚೇತನವು ಯಾರ ಪ್ರಾಣದಲ್ಲಿ ತೇಜೋರೂಪದಿಂದಿರುವುದೊ, ಅವನೀಗ ಅರಸು. ದೇಶಕ್ಕೂ, ಪ್ರಜೆಗೂ, ಧರ್ಮಕ್ಕೂ ಹಿತವಾಗಿರಬಲ್ಲವನು ಶೂದ್ರನಲ್ಲ. ಚಂದ್ರಗುಪ್ತನು ಅಂತಹನು. ಅರಸರ ಸಿಂಹಾಸನದ ಮೇಲೆ ಕುಳಿತಿರಲಿ, ಇಲ್ಲದಿರಲಿ, - ಅವನೀಗ ಅರಸೆಂದರೆ, - ಏನು ತೇಜ! ಏನು ಯೋಗ್ಯತೆ! ಏನು ಠೀವಿ! ಅವನ ಪಲ್ಲಕಿಯನ್ನಾದರೂ ಹೊರುವ ಯೋಗ್ಯತೆಯುಳ್ಳ ಅರಸರನ್ನು ಈಗ ನಾನು ಕಾಣೆ!"

ಮೇಲುಜಾತಿಯವರ ಕ್ರೂರತನದಿಂದ ಮಾದಿಗರು ಏನೇನು ಆಗಬಹುದು ಎಂಬುದನ್ನು ಕಾಮತರು 'ಉದ್ಧಾರಾನಂದ' ನಾಟಕ (1933)ದಲ್ಲಿ ತೋರಿಸಿದ್ದಾರೆ. ಈ ನಾಟಕದಲ್ಲಿ ಬರುವ ಡಕಾಯಿತನ ಈ ಮಾತುಗಳನ್ನು ಕೇಳಿರಿ– "ಹಾಗೊಂದು ಬಾರಿ ದೇವಿಯ ಬಲಿ ಪೂಜೆ ಮುಗ್ಸಿ, ಊರವ್ರ ವಿಪತ್ತು ಸಿವಾರ್ಸಿ ಕಾಡು ಮನೆಗೆ ಹೋದ್ದೆ, ಅಲ್ಲಿ ಹಸುಗೂಸನ್ನು ಹಿಂದೆ ಬಿಟ್ಟು ದೇವಿರೋಗ ಹಿಡ್ದು ಸತ್ತ ನನ್ನ ಹೆಂಡ್ತೀ ಹೆಣಾನ ನೋಡಿದೆ. ಸಂಸಾರ ಮುಗೀತೆಂದು ಮಗುವನ್ನಾದ್ರು ಉಳ್ಸೆಂದು ದೇವೀಲೀ ಕೂಗೋದ್ಕೆ ಗುಡಿಗ್ಬಂದು ಅತ್ತುಕೊಂಡು ಅಲ್ಲೀ ತಲೆತಪ್ಪಿ ಬಿದ್ಕೊಂಡೆ. ಬೆಳಗಾಗೋದೇ ಮೊಕ್ತೇಸರ್ರೆಲ್ಲ ಆಳುಗಳನ್ನು ಕರ್ದು ಗುಡೀ ಭ್ರಷ್ಟವಾಯ್ತೆಂದು ನನ್ನನ್ನು ದೊಣ್ಣೆಗಳಿಂದ ಬಡ್ದು ಒಂದು ಪೆಟ್ಟಿಗೇ ಕೂಸ್ನೊಳ್ಯೇತು; ನಾನು ಸತ್ತೆಂತಾದೆ. ನನ್ನನ್ನೆಳೆಸಿ ಕಸದ ಗುಂಡೀಲೇ ತಳ್ಳಿಹಾಕಿದರು".

ಇಂಥ ಕ್ರೌರ್ಯವನ್ನು ಅನುಭವಿಸಿದ ಅವನು ಡಕಾಯಿತನಾಗದೆ ಮತ್ತೇನಾದಾನು? ಇನ್ನೊಂದು ಸಂದರ್ಭದಲ್ಲಿ ಅವನು "ದೇವರ ಗುಡಿಗೆ ಹೋದ್ದಕ್ಕೆ ನನಗೆ ಗಡೀಪಾರಾಯ್ತು. ಈಗ ದೊಣ್ಣೆ ಕತ್ತಿ ಕೈಲಿದೆಯೋ? ದೇವ್ರ ಸಾವಿರಾನು ಮಣೀತಾನೆ. ನಿನ್ನ ದೇವ್ರಿಗಿಂತ ಈ ದೊಣ್ಣೆ ಪಟ್ಟದ ದೇವ್ರು; ಈ ಕತ್ತಿ ಯಾವ ದೇವಿಗಿಂತ್ಲೂ ದೊಡ್ಡದು ಬಲ್ಲೆಯಾ?" ಎಂದು ಹೇಳುವಾಗ, ಓದುಗನಿಗೆ ಅವನ ಮೇಲೆ ಕ್ರೋಧ ಉಂಟಾಗುವುದಿಲ್ಲ: ಬದಲಾಗಿ ಅವನನ್ನು ಆ ಹೀನಾವಸ್ಥೆಗೆ ತಳ್ಳಿದ ಉನ್ನತ ವರ್ಗದವರ ಮೇಲೆ, ಅವರದೇ ಪ್ರಾಧಾನ್ಯವುಳ್ಳ ಸಮಾಜದ ಮೇಲೆ ಕ್ರೋಧ ಉಂಟಾಗುತ್ತದೆ. ನಮ್ಮ ಸಮಾಜದಲ್ಲಿ ನಡೆಯುತ್ತಿದ್ದ, ಈಗಲೂ ನಡೆಯುತ್ತಿರುವ ಅನ್ಯಾಯವನ್ನು ಕಾಮತರು ಅದೆಷ್ಟು ಸೊಗಸಾಗಿ ಚಿತ್ರಿಸಿದ್ದಾರೆಂಬುದನ್ನು ನಾವು ಗಮನಿಸಬೇಕು.

ಕವನಗಳು :

ಅವರ ಸಮತಾವಾದದ ಸಿಲುಪು "ನಮ್ಮ ಬೇಡಿಕೆ" ಕವನದಲ್ಲಿ ಸ್ಫುಟವಾಗಿ ಕಾಣಿಸಿಕೊಂಡಿದೆ. ಈ ಕವನದ ಈ ಕೆಳಗಿನ ಸಾಲುಗಳನ್ನು ಗಮನಿಸಬೇಕು.

"ಬಾನಿನಾಚೆಗೆ ನೋಟ, ಯುಗದ ಕೊನೆಗೂ ಓಟ,
ತಾನೆಂಬುದೆಲ್ಲವೆಂಬಾ ನಂಬುಗೆಯ ಶಾಂತಿ.
ಉಸಿರಾಗೆ, ಚಿತ್ತವೇ ಸೊತ್ತಾಗೆ, ಗೈಮೆಯೇ
ಹೆಸರಾಗೆ, ನರನಾಗಿ ಪುಟ್ಟಿದುದೆ ಸಿರಿಯಾಗೆ,
ಬೆವರಮಳೆ ಸುರಿಯುವಧಿಕಾರವೇ ಅರಸಾಗೆ,
ತವರೂರಿಗೈದುವಂತೊಂದು ದಿನ ಪೋಪಂತೆ,
ಅಳಿದರೂ ಉಳಿದವರ ನಾಡಿಯಲಿ ನಲಿವಂತೆ,
ಕಡಿದಂತೆ ಚಿಗುರುವಶ್ವತ್ಥಗಳ ಜೀವನವ
ಬೇಡುವೆವು. ಇದೆ ನಮ್ಮ ಬೇಡಿಕೆಯೊ ಬಯಕೆಯೋ?
....
....
ನಮ್ಮ ಬೇಡಿಕೆಯೇನು ಬೇಡಿಕೆಯೊ? ಬಯಕೆಯೊ?
ನಿಮ್ಮ ಕರುಣೆಯ ಕಾಸಿನೆಮ್ಮ ಕಿಸೆಗುಬ್ಬರವ
ಸುಮ್ಮನೇ ಬೇಡೆವೈ - ನಮಗೊಂದು ನೆಲೆಬೇಕು
ಹೇಡಿ ಬಯಸುವ ಸ್ವರ್ಗ, ಗೂಢ ಸೂಕ್ತಿಯ ಅರ್ಥ
ಬೇಡೆವೈ - ಪುರುಷತೆಯ ಸಾಧನೆಗೆ ಬೆಲೆ ಬೇಕು.
....
ನೆತ್ತರಿನ ಮೂಳೆಗಳ ಕೈಕಾಲುಕಣ್ಣುಗಳ
ಶಕ್ತಿಯಿಂದೆಲ್ಲರೆತ್ತುವ ಸಂಪದವೆ ನಮಗೆ;
ಎಲ್ಲರುತ್ಪನ್ನಗಳು ಎಲ್ಲರೊಳು ಸಾಲಾಗಿ,
ಚಿತ್ತವೇ ಸೊತ್ತಾಗಿ, ಸೊತ್ತೆಲ್ಲ ತೊತ್ತಾಗಿ
ಮೈತ್ರಿಯೇ ಶಾಂತಿಶಾಸನವಾಗಿ ಸಿಗಬೇಕು."

ಅದೆಷ್ಟು ಅರ್ಥಪೂರ್ಣವಾಗಿವೆ ಈ ಸಾಲುಗಳು! ಇಲ್ಲಿಯ ಭಾವತೀವ್ರತೆಯನ್ನು ಯಾವ ಸಹೃದಯನೂ ಅಲಕ್ಷಿಸಲಾರ. ಕಾಮತರು ಕ್ರಾಂತಿಕಾರರು ಎಂಬುದರ ಪ್ರತಿಪಾದನೆಗೆ ಈ ಒಂದು ಕವನವೇ ಸಾಕಾದೀತು. ಅವರ ವ್ಯಕ್ತಿತ್ವವನ್ನು ಈ ಕವನವು ಚೆನ್ನಾಗಿ ಪ್ರತಿಬಿಂಬಿಸುತ್ತದೆ; ಅವರ ಕವಿತಾಶಕ್ತಿ ಉನ್ನತವಾದುದೆಂದು ರುಜುವಾತುಗೊಳಿಸುತ್ತದೆ.

ಕಾಮತರು, ಬದುಕು ಅವರಿಗೆ ಕೊಟ್ಟ ಕಹಿಯನ್ನು ನಗುನಗುತ್ತಲೇ ಸ್ವೀಕರಿಸಿದವರು. ಯಾಂತ್ರಿಕವಾದ ಆ ಕಹಿ-ಬದುಕಿನಲ್ಲಿಯೇ ತೃಪ್ತಿಯನ್ನು ಕಂಡವರು. "ಬಂಡಿ ಎತ್ತು" ಎಂಬ ಕವನವು ಅವರ ಬದುಕಿನ ಹಿನ್ನೆಲೆಯಲ್ಲಿ ತುಂಬ ಅರ್ಥವತ್ತಾಗಿ ಕಾಣಿಸುತ್ತದೆ.

....

....

ಮೂಗುದಾಣದ ಗೊತ್ತು, ಬಾರುಕೋಲಿನ ಒತ್ತು,
ರಾಗದಿಂದೋಯೆಂಬ ಧನಿಯ ಕೊರಲದನಿ;
ತೂಗಿಡುವ ಕಾಲ್ಪಜ್ಜೆ ಕೊರಲಗೆಜ್ಜೆಗಳ ಜತೆ –
ಸಾಗೆ, ಸಾಗುವ ದಾರಿ ಎಷ್ಟಿದ್ದರೇನು?

ಮಳೆ - ಬಿಸಿಲು - ಚಳಿ - ಗಾಳಿ - ಮುಗಿಲು ಸಿಡಿಲೆಂದಿಲ್ಲ
ಹೊಳೆ - ಸಂಕ - ದಿನ್ನೆ - ಬಯಲೆಂಬುದಿಲ್ಲ;
ಬೆಳಗು - ನಡುವಗಲು - ಬೈಗುಗಳಿಲ್ಲ, ಇರುಳಿಲ್ಲ,
ಬೆಳದಿಂಗಳೆಂದಿಲ್ಲ; - ಬೇರೆ ಮಾತಿಲ್ಲ.

ಬತ್ತವೊ, ಬೆತ್ತವೊ, ಹತ್ತಿಯೊ, ಕತ್ತಿಯೊ,
ಸತ್ತ ಮತ್ತೊಂದೆತ್ತೊ, ಕಲ್ಲೊ - ಹುಲ್ಲೋ?
ಹತ್ತಿದಾ ಧನಿ ಮೂಗುದಾಣ ಹಿಡಿದಾಯೆನಲು,–
ಹೊತ್ತು ಸಾಗಲು, - ನಮ್ಮ ಹೊತ್ತು ಸಾಗುವುದು.

ಏಕೆ, ಈಗೇಕೆ, ಮುಂದೆಲ್ಲಿಗೆಂಬುದನರಿಯೆ;
ಜೋಕೆ ನೋಡುವ ಧನಿಯು ಬಯಕೆಯದೆ ಸಾಕು;
ಆ ಕೈಯ ಚಾಟಿಯನು ಕಣ್ಗೊನೆಯು ನೋಡುತಿರೆ,
ಆ ಕೊರಲದನಿಗೆ ಕಿವಿಯೊಡ್ಡಿದರೆ ಸಾಕು.

ಯಾರ ಸರಕನು ಯಾರು ಕೊಡುವರೊ, ಕೊಳ್ಳುವರ –
ದಾರೊ? ಮೇಣಾರಿಗಿದರುಪಯೋಗವೋ ?
ಊರ ಜನರ ಸುಖವಿಹಿತ ವಿತರಣೆಯು ಊಳಿಗದಿ,
ದಾರಿ ಸವೆದಂತೆ ಜೀವನವ ಸವೆಯುವೆವು.

ನೊಗವ ತಪ್ಪಿಸಿ ಧಸಿಯ ಕೈಬಿಟ್ಟು ಸ್ವೇಚ್ಛೆಯಲಿ
ಬಗೆದಂತೆ ತಿರುಗಿ ತಿರುಗೂಳಿಯಾಗಿ,
ಹಗುರವಾದೊಂದು ಹುಲ್ಲಿಗೆ ಹಗುರ ತಾನಾಗಿ
ನಗೆಗೀಡು ದೊಡ್ಡಿಯಲಿ ಸಾಯಬಹುದು.
....
....

* * * *

"ಬಾಲ ಕಳೆದ ನರಿಯು ಉಪದೇಶ"ದಲ್ಲಿ ಬಾಲಕಳೆದ ನರಿಯೊಂದು ಗೋಳಾಡುತ್ತದೆ -

ಬಂಧುಗಳ ಮಾತಿರಲಿ! ಹಂದಿ ಕೋಳಿಗಳು ಬಳಿ ।
ಸಂದು ಕಿಲಕಿಲನೆ ನಗರೇ - ಮೊಂಡನೆಂದು? ॥
ಒಂದೇಟಿಗೆನ್ನನವ ಕೊಲದೆ, ಮೃತಜೀವನವ - ।
ನಿಂದಿತ್ತು ಕೊಂದನಯ್ - ಎಂತುಳಿವೆ ಮುಂದು ? ॥

ಕಂಡವರು ನಗರೆ? ಹಾ! ಹೆಂಡತಿಯು ಮೆಚ್ಚುವಳೆ? ।
ಚಂಡ ಚಾಂಡಾಲರೆಲ್ಲರು ಬಾಲ ಬಿಡಿಸಿ– ॥
ಗೊಂಡೆ ಮುರಿದುದನು ಬ್ರಹ್ಮಾಂಡಕುಸುರದೆ, ಕೂಗಿ ।
ತಂಡದಿಂದೋಡಿಸುವರಲ್ತೆ, - ಕುಲಗೆಡಿಸಿ.

ಈ ರೀತಿ ಗೋಳಿಡುತ್ತಿರುವ ನರಿಯು, 'ಬಾಲ ಹೋದರೆ ಶನಿ ತೊಲಗಿತು, ಒಳ್ಳೆಯದೇ ಆಯಿತು' ಎಂದು ಕೊನೆಗೆ ಸಮರ್ಥಿಸುವ ರೀತಿಯನ್ನು ಗಮನಿಸಿರಿ -

ಕಾಲಿನಿಂ ತೋಡದಿದು; ಹಲ್ಗಳೊಲು ಕಡಿಯದಿದು; ।
ನಾಲಿಗೆಯ ತೆರ ಬಾಡ ಸವಿ ತಿಳಿಯದು; ॥
ಮೇಲು ಕಬ್ಬಿನ ತಾವ ಮೂಸಲರಿಯದು; ಮುರಿದು ।
ಕೊಲ್ಲದಿದು ಕೈಯಂತೆ; ದನಿಗೇಳದು

ಬೂದಿಗುಂಬಳ ಬಳ್ಳಿಗಾಧಾರವೆಂದು, ಮೊನೆ ।
ಯಾದ ಮುಳ್ಗಳ ನೀಡಿ, ಬೆಳೆವ ಪೊದೆಯಂತೆ - ॥
ಆದರಿಪ ನಮಗೆ ಕೆಡು ಬಾಧೆ ಇದು, - । ಶನಿ ತಾನೆ! ॥
ಸಾಧುವಿದು - ಹಸುಮೊಗದ ಹಸಿದ ಹುಲಿಯಂತೆ. ॥

ಬಾಲವಿಲ್ಲದ ನರರು ಸೃಷ್ಟಿಯನ್ನಾಳುವರು; ।
ಬಾಲಕಿರಿದಿಹ ಕರಡಿ ಮಧುಪಾನಲೋಲಂ. ॥
ಬಾಲದುದಿ ಸುಟ್ಟೆಕಪಿ ಹನುಮ ಗುಡಿದೇವನೈ! ।
ಬಾಲವೇ ದುಶ್ಶೀಲ! - ನರಿಕುಲಕೆ ಕಾಲ! ॥

'ದೀಪಗಳು' ಕಾಮತರ ಉತ್ತಮ ಕವನಗಳಲ್ಲೊಂದಾಗಿದೆ. ತೋರಿಕೆಗೆ ದೀಪಗಳ ವರ್ಣನೆಯಿದ್ದರೂ ಈ ಕವನದ ಧ್ವನಿಶಕ್ತಿಯನ್ನು ಗಮನಿಸಬೇಕಾಗಿದೆ–

ಚಿನ್ನದ, ಕಲ್ಲಿನ, ಕಂಚಿನ, ಗಾಜಿನ,
ಮಣ್ಣಿನ ದೀವಿಗೆ ಅಲ್ಲಲ್ಲಿ;
ಉನ್ನತ ಕಂಬಗಳಂತಿವೆ ಹಲವು;
ಸಣ್ಣ ಹಣತೆಗಳು ಎಲ್ಲೆಲ್ಲಿ.

ಸಿಡಿಲ ಮರಿಗಳಿವೆ, ಮಿಂಚು ಹುಳುಗಳಿವೆ,
ಕಿಡಿಮಿಣುಕುಗಳಿವೆ, ತಾರೆಗಳು;
ಬೆಡಕಿನ ತುಳುಕಿದೆ, ಪ್ರತಿಭೆಯ ಹೊಳಪಿದೆ,
ಮಿಡಿ–ಹೂ–ಹಣ್ಗಳ ರೂಪುಗಳು.

ತೊಟ್ಟಿಲಬಳಿ, ಸುಡುಗಾಡಿನ ಬಳಿ, ಮು–
ಮ್ಮಟ್ಟಿಲ ಬಳಿ, ಮೇಲ್ಗಟ್ಟಿನಲೀ;
ಕಟ್ಟೆಯ ಮೇಲರಮನೆಯಟ್ಟದಲೀ
ಬೆಟ್ಟದ ದೇವೀ ಮಂದಿರದಿ.

ಹೊಗೆಯುವು ಹಲವು; ಧಗೆಯುವು ಕೆಲವು;
ಹೊಗುವುವು ಗುಡ್ಡದೊಳಗು ಕೆಲವು;
ನಗುತಿವೆ ಸಿಡಿಯುತೆ, ಅಳುತಿವೆ ನಡುಗುತೆ,–
ಬಗೆ ಬಗೆಯಾಗಿದೆ,–ಈ ಚೆಲುವು!

ಕತ್ತಲೆ ತೋರುವ, ಕತ್ತಲೆ ನುಂಗುವ
ಮೃತ್ಯುವ ಗೆಲ್ಲುವ ಜ್ಯೋತಿಗಳು;
ಸುತ್ತಲು ಬೆಳಗುವ, ನೆತ್ತಿಯಲುರಿಯುವ,
ಆತ್ಮಪ್ರಕಾಶನ ಜ್ಯೋತಿಗಳು.

ಒಂದುಸಿರಲಿ ಮುಗಿವುವು ಕೆಲವಿರುವುವು
ಒಂದುನೂರು ಯುಗಗಳ ವರೆಗೂ;
ಇಂದಾರಿದರೂ ಮುಂದೆ ತೋರಲಿವೆ,
ನೊಂದಂತಿದ್ದರು ನೊಂದವವು.

ಎಣ್ಣೆ ಮುಗಿದರೂ ಕಿಡಿಯಾಗುರಿವುವು,
ನುಣ್ಣನೆ ಬೂದಿಯು,–ಕಿಡಿಯಾರೆ;
ತಣ್ಣನೆ ಬೂದಿಯು ವಾಸನೆಕೊಡುವುದು,
ಪುಣ್ಯಕರ್ಮ ಸ್ಮಾರಕವಾಗೆ.

"ಸಂತೆಯ ಕುರುಡನ ಹಾಡು" ಕವನದಲ್ಲಿ ಬೆಳಕೆಂದರೇನೆಂದು ತಿಳಿಯದ ಕುರುಡನ ಚಿಂತಾಜನಕ ಪರಿಸ್ಥಿತಿಯನ್ನು ಕಾಮತರು ಅದ್ಭುತವಾಗಿ ಸೆರೆಹಿಡಿದಿದ್ದಾರೆ. ಇದರಲ್ಲಿ ಕುರುಡನು ಕೇಳುವ ಪ್ರಶ್ನೆಗಳು ಓದುಗನ ಅಂತರಾಳವನ್ನು ತಟ್ಟುತ್ತವೆ.

ಬೆಳಕೆಂದರೇನಯ್ಯ? ತಿಳಿಯ ಹೇಳಿರಿ ನನಗೆ!
ಬೆಳಕು ಹಾಲಂತೆ ಹರಿಯುವುದೆ? ಸವಿಯಹುದೇ?
ಬೆಳಕು ಸುಳಿವಾಗ ಗಾಳಿಯ ತೆರದಿ ಸುಳಿಯುವುದೆ?
ಬೆಳಕೆನ್ನ ಊರುಗೋಲಿಗೆ ತಟ್ಟದಿಹುದೇ?

ಹಾಲು ಕುಡಿಯಲು ಬಲ್ಲೆ ಸವಿಯರಿವೆ! ನೀರಂತೆ
ನಾಲಗೆಯು ಹಾಲು ತೆಳ್ಳನೆ ಎಂದರಿಯದೇ?
ಹಾಲು ಬೆಳ್ಳಗೆ ತೋರುತಿದೆ ಎಂದರೇನಯ್ಯ?
ಹಾಲಿನಂತೆಯೆ ನೀರು ಬೆಳ್ಳಗಿರದೇ?

ಗೂಡಿನಲ್ಲಿ ಸೆರೆಸಿಕ್ಕಿಬಿದ್ದ ಹೆಣ್ಣು ಇಲಿಯೊಂದು ತನ್ನನ್ನು ಬಿಡಬೇಕೆಂದು ಮನೆಯೊಡತಿಯೊಡನೆ ದೈನ್ಯದಿಂದ ಬೇಡುವ ಚಿತ್ರವನ್ನು "ಗೂಡಿನಲ್ಲಿಯ ಇಲಿ" ಕವನದಲ್ಲಿ ಪರಿಣಾಮಕಾರಿಯಾಗಿ ಮೂಡಿಸಿದ್ದಾರೆ–

ಗೋಡೆ ಸಂದಿನ ಬಿಲದಿ ಜೋಡು ಮಕ್ಕಳು ಹಡೆದು,
ಕೂಡಿ ಸಂಸಾರವನು ಕಟ್ಟಿರುವೆನಮ್ಮಾ!।
ಕಾಡುತಿಹ ಹಸಿವಿಂದ ಬೇಡುತಿದೆ ಕಿರುಕಂದ;
ಹೂಡಿದ್ದ ಚಕ್ಕುಲಿಗೆ ಸೆರೆಯಾದೆನಮ್ಮಾ!

ದಮ್ಮಯ್ಯ! ಅಮ್ಮ! ನೀ ಕರೆಯ ಬೇಡೌ ನಾಯ!
ಒಮ್ಮೆಗೆನ್ನಂ ಪೋಗೊಳಿಸು ಮರಳಿನಮ್ಮಾ!।
ಸುಮ್ಮನೇತಕೆ ಮುನಿಸು? ನಿಮ್ಮನಾನೊಂದಿಸಿಸು
ಅಮ್ಮಮ್ಮ! ಕೆಣಕುವವಳಲ್ಲ. ಕ್ಷಮಿಸಮ್ಮಾ!

....

....

ಸೀರೆ ಕುಪ್ಪಸ ಬೇಡ. ಹಾರ ಓಲೆಯು ಬೇಡ.
ಭೂರಿ ಭೋಜನ ಬೇಡ. ನಾವು ದೀನರಮ್ಮಾ।
ಚೂರು ತಿಂಡಿಗೆ ಗತಿಯ ತೋರದಾದೆವು. ದುಡಿಯ
ಬಾರದೀ ದುಃಸ್ಥಿತಿಗಿದಾರು ಹೊಣೆಯಮ್ಮಾ?

ಇಲಿಯಾದರೇನು? ಹೆಬ್ಬುಲಿಯಾದರೇಂ? ನಮಗೆ
ಬೆಳಕು ಗಾಳಿಯು ನೀರು ನಿತ್ಯ ಪ್ರಿಯವಮ್ಮಾ ! ।
ಬಲವುಳ್ಳರಬಲರನು ಕೊಲುವರಿದೊ ಅವರೇನು
ಅಳಿದರನು ಉಳಿಸಲಾಪರೆ? ಹೇಳು ಅಮ್ಮಾ!

ಕೊಲಿಸಿದರೆ, ಕುಲವೈರಿ ಮಾರ್ಜಾಲನಪಕೀರ್ತಿ
ಸಲದೆ ನಿನ್ನಂಥ ನರಕುಲರಾಣಿಗಮ್ಮಾ? ।
ಇಲಿಯೆ ನೀ ಕೊಲುವಾಕೆ ನಾನೆಂದು ಪ್ರತಿ ಎಣಿಸು;
ಗಳಗಳನೆ ಕಣ್ಣನೀರಿಳಿಯದೇನಮ್ಮಾ?

ಕೊಲುವೆಯಾದರು ಒಮ್ಮೆ ಕಳುಹಿಕೊಡು; ಮರಳುವೆನು
ಮೊಲೆಯುಣಿಸಿ, ಕಿರುಬಾಲನಾಣೆ, ದಿಟವಮ್ಮಾ!।
ಎಳವಕ್ಕಿಯನು ಸಲಹೆ ಕೊಳುಗುಳವ ನಿಲಿಸಿದಾ
ಕೊಳಲಿನಾ ಕರುಣಾಳು ಕಾಯುವನು ನಿಮ್ಮ !

....

....

* * * *

'ತುಳುನಾಡ ರಾಣಿ' ಕವನವನ್ನು ನಮ್ಮ ತುಳುನಾಡಿನ 'ನಾಡಗೀತೆ' ಎಂದು ಪರಿಗಣಿಸಬಹುದು. ಇದರಲ್ಲಿ ನಮ್ಮ ನಾಡಿನ ವರ್ಣನೆಯು ಸೊಗಸಾಗಿ ಮೂಡಿಬಂದಿದೆ.

ಕೊಡಲಿ ರಾಮನ ಸಿಡಿಲಿಗಳುಕಿ ಹಿಂದೋಡಿ ।
ಕಡಲಾರೆ, - ನೀನಲೆಗಳನ್ನೊಡೆದು ಮೂಡಿ, - ॥
ಪಡೆದ ಶಾಸನವಾದೆ ತುಳುನಾಡ ರಾಣಿ! ।
ಬೆಡಗಿಂದ ಧರೆಗಾದೆ ಕೊರಳಕಟ್ಟಾಣಿ!

ಗಟ್ಟಗಳ ಮೆಟ್ಟಲಿನ ಅಟ್ಟಳಿಗೆ ಏರಿ, ।
ಪಾಟ ಇರದೊಡ್ಡೋಲಗದ ಸೊಬಗು ಮೀರಿ, ॥
ಅಟ್ಟಹಾಸದ ಕಡಲು ಕಾಲ್ ತೊಳೆಯುತಿರಲು, ।
ಒಟ್ಟೈರಿಸಿದಾ ಪುಣ್ಯರಜ ಎನಿಸೆ ಮಳಲು– ॥

ಮಳೆಮುಗಿಲ ವೇಣಿಯಲಿ, ಮುಳಿಬಿಲ್ಲ ಹಾರಂ, ।
ತಿಳಿಯ ಬೆಳದಿಂಗಳಿನ ಕವಚ ಸಿಂಗಾರಂ, ॥
ಹೊಲದ ಹಸುರುಡಿಗೆ, ನೇತ್ರಾವತಿಯ ಮಾಲೆ– ।
ಮಲೆಗಾಳಿ ಸಾರುತಿಹುದಿಂತು ತವ ಲೀಲೆ.

....

....

ತಲೆದೂಗೆ ತೆಂಗು, ನೇಗಿಲು ನಗಲು, ಹೊಳೆಯಲು ।
ಸುಳಿದೋಡೆ, ತಲೆ ಎತ್ತಿ ಕಂಗೊಳಿಸೆ ಜೋಳಯು, ॥
ಮಳಿಗೆ ತಕ್ಕಡಿ ಕುಣಿಯೆ, ಶಂಖ ದೇಗುಲದಿ ।
ಮೊಳಗೆ, ಮನೆ ಮಕ್ಕಳಿಂದುಲಿಯೆ ಗದ್ದಲದಿ -

....

ಎಂಬ ಈ ನಿರೂಪಣೆಯಲ್ಲಿ ತುಳುನಾಡ ರಾಣಿ ಸಾಕಾರಳಾಗಿ ಕಣ್ಮುಂದೆ ಸುಳಿಯುವಂತಿದೆ!

'ಜೀವನ ಸಮಸ್ಯೆ' ಕವನದಲ್ಲಿ ಕಾಮತರು ಹಲವು ಜೀವಿಗಳನ್ನು ಹಲವು ಹೊಳೆಗಳಿಗೆ ಹೋಲಿಸಿದ್ದಾರೆ. ಹಲವರ ಜೀವನವು 'ತಿಳಿನೀರಂತೆ' - 'ಸುಳಿಗಳಲಿ ಕಲೆತಂತೆ' - 'ಬೊಬ್ಬುಳಿ ಅಲೆಗಳಿಂದ' - 'ಕೊಳೆಗೂಡಿದಂತೆ' - 'ಅಲಸಗತಿಯಿಂದ' - 'ಸಮತಲದೆ' - 'ಪ್ರಪಾತದಲೆ' - 'ನೆಲಕೊರೆದು' - 'ಮಲಿನವನು ಲಲಿತವನು ತೋರಿ' ಹರಿಯುವುದಾಗಿದೆ ಎಂದು ವರ್ಣಿಸಿದ್ದಾರೆ.

ಕೆಲವು ಕಲಕಲ ನಿನಾದದಿ ಮಳಲಿನಲಿ ಹರಿದು,
ತಿಳಿ ಸಲಿಲವಾಂತು, ಸುಳಿವುತಿವೆ ಜಲನಿಧಿಗೆ. !
ಕೆಲವು ಬಲಬಲಿತ ಘುಳು ಘುಳು ರವದೆ ಮುಂಬರಿದು.
ಸುಳಿಗಳಲಿ ಕಲೆತಿಹವು ಮಲೆನಾಡ ಬದಿಗೆ.

ಕೆಲವು ಬೊಬ್ಬುಳಿಯಿಂದ ಅಲೆಗಳತುಲತೆಯಿಂದ
ಕೊಳೆಗೂಡಿ, ಜಲಧಿಯೊಳು ತುಳುಕಿ ಮುಳಿದು ; ।
ಕೆಲವು ಅಲಸದ ಗತಿಯುಲಿಳಿದು ಗುಹೆಯೊಸರಿಂದ
ಬಳಿಸಾರ್ವವಮಲ ರತ್ನಾಕರವ ಬಳೆದು

ಹಲವು ಸಮತಲದೆ ವಹಿಸುತಲೆ, ಪ್ರಪಾತದಲೆ
ಇಳಿದು ನೆಲ ಮೆಟ್ಟಿ ಭೈರವನ ತೆರ ಮೊರೆದು; ।
ಕೆಲವು ಗಂಭೀರ ಗಿರಿ ಕಂಧರದ ಪ್ರಾಂತದಲೆ
ತಲೆಯೆತ್ತಿ ನಲವಿನಿಂದಿಹವು ನೆಲ ತೊರೆದು

ಹಲವು ಕೆರೆಯಂತೆ, ತೊರೆಯಂತೆ, ನೆರೆ ಹೊಳೆಯಂತೆ,
ಮಲಿನವನು ಲಲಿತವನು ತೋರಿ ಮೆರೆದು; !
ಹಲಕಾಲದೊಳಗಿಂಗಿ ತಳವ ತೋರ್ವವು ಮುಂತೆ -
ಇಳೆಯೊಳೀ ನರಜೀವನವ ಬಗೆಯನೊರೆದು.

ಇಂಥ ಬರವಣಿಗೆಯಲ್ಲಿ ಕಾಮತರು ಬಳಸುವ ಅನುಪ್ರಾಸದ ಸೊಗಸು, ಪದಲಾಲಿತ್ಯಗಳು ಶೋಭಾಯಮಾನವಾಗಿ ಕಂಗೊಳಿಸುತ್ತವೆ. 'ನನ್ನ ನೆರಳು' - ಕಾಮತರ ಮತ್ತೊಂದು ಗಮನಾರ್ಹವಾದ ಕವನ; ಇದರಲ್ಲಿನ ಈ ಸಾಲುಗಳನ್ನು ಗಮನಿಸಬೇಕಾಗಿದೆ.

....

....

ನನ್ನಡಿಗೆ ತನ್ನ ಕಾಲಿಂದೆರಗಿ, ಬೇಡಿ, ।
ನನ್ನಂತೆ ನಟಿಸುತ್ತ ಸನ್ನೆಯಿಂದಾಡಿ, ॥
ಉನ್ನತಕೆ ಚೆಂಡಿನಂದದಿ ನೆಗೆವನೀಗ, - ।
ಸಣ್ಣ ಹುಳದಂತೆ ಹರಿಯುತ ಇದ್ದನಾಗ.

ಪುಕ್ಕ ಇವ– ನನ್ನ ಸೆರಗಿನ ಬೆನ್ನ ಬಿಡನು, ।
ರಕ್ಕಸನ ಮಾಯಾಟದಲ್ಲಿ ಅಡಗುವನು; ॥
ಬೆಕ್ಕಿನಂದದ ಸದ್ದಿರದ ಹೆಜ್ಜೆಯವನು, ।
ಚಿಕ್ಕವರ ಗುಮ್ಮ ಎಂಬುವ ಬಿರಿದಿನವನು.

ಕತ್ತಲೆಯೊಳಡಗುವನು; ಹುಡುಕಲಿವ ದೊರೆಯಂ ।
ಎತ್ತಲಿಂದಲೊ ತಾನೆ ಮತ್ತೆ ತಲೆದೋರ್ವಂ ॥
ಅತ್ತುಕೊಳುವನು ನಾನು ಮರುಗಲೆನ್ನಂತೆ; ।
ಹಿತ್ತಿಲಲಿ ಮರ ಹಾರುವನು ಅಳಿಲಿನಂತೆ.

....

....

ನೀರೊಳೀತನ ತಮ್ಮನಿಣಿಕಿ ನೋಡುವನು, ।
ಸಾರೆ, ಬಾ ಎಂದು ತನ್ನೆಡೆಗೆ ಕರೆಯುವನು. ॥
ಸಾರಿದರೆ– ನೂರಾಗಿ ಹರಿದೋಡುತಿಹನು ।
ಸೇರಿದರೆ– ಸೆರೆವಿಡಿದು ಮರಳಿ ಪೋಗೊಡನು.

ನೆರಳಂತೆ ಹೆಗ್ಗತ್ತಿನಲಿ ಮರಣವಿಹುದೈ ! ॥
ನೆರಳಂತೆ ಜಗದೀಶನೊಲುಮೆ ನಮಗಿಹುದೈ ॥
ನೆರಳಿನಂತಿದೆ ಜನುಮ ನಮಗೆ ಧರೆಯೊಳಗೆ ।
ನೆರಳ ನೆಚ್ಚಲು ಬೇಡ– ತಾನಿರಲದಿಹುದೈ.

*　　*　　*　　*

‘ತೋಳನೂ ಕುರಿಮರಿಯೂ’ ಕವನದಲ್ಲಿ ಒಂದು ಹೊಸ ಕಲ್ಪನೆಯನ್ನು ಸೇರಿಸಿದ್ದಾರೆ. ಇದೇ ವಸ್ತುವನ್ನು ಕುರಿತು ಬಿ. ಎಸ್. ಲಕ್ಷ್ಮಣ ಪೈಯವರೂ ಒಂದು ಕವನವನ್ನು ಬರೆದಿದ್ದಾರೆ. ಅದರಲ್ಲಿ ತೋಳವು ಕುರಿಮರಿಯನ್ನು ಹಿಡಿದು ತಿನ್ನುವುದಕ್ಕಾಗಿ ನೆವ ಹುಡುಕುತ್ತ ಆಪಾದನೆಗಳನ್ನು ಹೊರಿಸುತ್ತದೆ. ಆರಂಭದ ಒಂದು ದೊಡ್ಡ ವ್ಯತ್ಯಾಸವನ್ನು ಬಿಟ್ಟರೆ, ಕಾಮತರ ಕವನದಲ್ಲೂ ಹೆಚ್ಚು ಕಡಿಮೆ ಕಥೆಯು ಅದೇ ರೀತಿ ಇದೆ. ಇಲ್ಲಿ, ಕುರಿಮರಿಯನ್ನು ನೋಡಿದ ತೋಳವು ಮೊದಲು ವಾತ್ಸಲ್ಯದ ನಾಟಕವನ್ನು ಆಡುತ್ತದೆ. ಆ ನಾಟಕವು ವಿಫಲವಾದಾಗ ಮಾತ್ರ ನೆವಗಳನ್ನು ಹುಡುಕುತ್ತ ಹೋಗುತ್ತದೆ. ಈ ಒಂದು ಹೊಸ ಕಲ್ಪನೆಯಿಂದಾಗಿ ಕಾಮತರ ಕವನಕ್ಕೆ ಬಿಗು ಬಂದಿದೆ.

ತೋಳವು ವಾತ್ಸಲ್ಯದ ನಾಟಕವನ್ನು ಹೇಗೆ ಆಡುತ್ತದೆಂಬುದನ್ನು ಕಾಮತರ ನಿರೂಪಣೆಯಲ್ಲಿ ನೋಡೋಣ—

....

“ಕುರಿಗೂಸೆ! ಕಿರಿ ಉಣ್ಣೆಮರಿಯೆ ! ಬಾ ! ಇಂದು ॥
ಕರತಲಿಕೆನ್ನೊಳೊರೆದಳು ನಿನ್ನ ಮಾತೆ—।
ಬೆರಗಾಗಿ ನೆರೆಗೆ ಬಲು ಕೊರಗಿ ಭಯ ಭೀತೆ.”

“ದಿಗಿಲು ಬೇಡೆಲೆ ಕಂದ! ಹೆಗಲೊಳೇರಿಸುವೆ।
ಬಗೆಯದಿರು ಮರುಳಾಗಿ ಹಗೆಯಲ್ಲ ಶಿಶುವೆ! ॥
ಬಗೆಬಗೆಯ ದುಃಖದಿಂದಳಲುವಳು ನೋಡಿ।
ಜಗವೆಲ್ಲ ಮರುಗುವುದು ನಾನೇನು ಖೋಡಿ!”

* * * *

‘ನೇಗಿಲು’ ಕವನದಲ್ಲಿ ಕವಿಯು ನೇಗಿಲನ್ನು ಈ ರೀತಿ ಸಂಬೋಧಿಸುತ್ತಾರೆ—

“ನೇಗಿಲೇ! ಸೌಖ್ಯ ಸಂಪದದ ಹೆಬ್ಬಾಗಿಲೇ!
ಬಾಗಿ ನಮಿಸುವೆ ನಿನಗೆ, ನೀ ನನ್ನ ಪ್ರಾಣ।
ಬಾಗಿದೀ ದುರ್ದಶೆಯ ನೀಗಿ ನೀ ಕೊಡು ಯಶವ.
ಕೂಗಿ ಬೇಡುವೆನಯ್ಯ ಕೊರಗಿ, ದಮ್ಮಯ್ಯ!”

“ಆನೆ ಆನೇಬೋ” ಕಥನ ಕವನವು ‘Six men of Hindustan’ ಕವನದ ಅನುವಾದ. ಕುರುಡರು ಆನೆಯನ್ನು ನೋಡಿ, ಕೊನೆಗೆ ಊರಿನ ಜನರೇ ಕುರುಡರೆಂದು ಊರವರನ್ನು ಹಳಿಯುತ್ತಾರೆಂಬುದು ಈ ಕವನದ ವಸ್ತು.

ಆನೆಯ ಬಳಿ ಹೋದ ಕುರುಡರ ಪ್ರತಿಕ್ರಿಯೆಗಳನ್ನು ಕಾಮತರ ಮಾತು ಗಳಲ್ಲೇ ಆಸ್ವಾದಿಸಬೇಕು.

ಮುಟ್ಟಿ ಸವರಿದ ನೆರಿಗೆ ಬಿಟ್ಟ ಮೈಯನ್ನೊಬ್ಬ;
ಅಟ್ಟಹಾಸದಿ ನುಡಿದ, - "ಸುಟ್ಟ ಮನೆಯಲ್ಲಿ ।
ಬಿಟ್ಟ ಬಿರುಕಿನ ಗಾರೆಗೆಟ್ಟ ಗೋಡೆ ಇದಬ್ಬ!
ಕಟ್ಟಾನೆ ಎನುವವರ ಗಟ್ಟಿಗರೆ ಇಲ್ಲಿ?"

ತೂಗುಬಾಲವ ಹಿಡಿದನಿನ್ನೊಬ್ಬ ಜಾಣನವ;
"ಹೋಗಯ್ಯ! ತೇರನೆಳೆವಾಗ ಕಟ್ಟೊಡೆದಾ ।
ಹಾಗಿಹುದು, ಹಗ್ಗವಿದು; ಮುಟ್ಟಿ ಕಾಣೆನೆ ಮುರಿದು
ಬಾಗಿದ ತಿರುಪುನಾರಿನೆಳೆ?" ಎಂದು ನುಡಿದಾ.

"ತೇರಿನುತ್ಸವದ ಸಂತೆಗೆ ಬಂದ ಬತ್ತವನು
ಕೇರಲೆಂದೊಡನೆ ತಂದೀ ಮೊರವ ತೂಗಿ, ।
ಐರಾವತವ ಕಾಣಿರೆಂದ ಬೊಬ್ಬಾಳಿಯನು
ದೂರವಿಡಿ." ಎಂದ ಕಿವಿ ಹಿಡಿದವನು ರೇಗಿ.

"ಅವಲಕ್ಕಿ ಕುಟ್ಟುವವ ಅವನೆ ಮಾತಲಿಯಾಗೆ,
ಅವಲಕ್ಷಣದ ಒನಕೆ ಆನೆ ಎನಿಸಿರದೆ? ।
ಅವನಿಯಲಿ ಕಷ್ಟವಿದು!" ಎಂದು ಸುಂಡಿಲ ಹಿಡಿದು
ಸವರಿದಾ ಮುದಿಗುರುಡ ಬೆರಗಾದ ಬರಿದೆ.

ತೋರದಾಡೆಯು ಸೋಕಿದಾತ ಸಿಡಿಮಿಡಿಗೊಂಡ -
"ಊರೆಲ್ಲ ಕುರುಡೆ? ಮೃಗಬೇಟೆಯುತ್ಸವದಿ ।
ವೀರತನದಾಟದ ಟಕಾರಿಯ ಕಠಾರಿ ಇದು;
ಹೇರಾನೆ ಆಯ್ತು ಕಟ ಸುಳ್ಳರನುಭವದಿ."

"ಜಾತ್ರೆಯ ಮರುಳಾಟದಿಂದ ಜನ ಮರುಳಾಯ್ತು;
ಎತ್ತರದ ಕಂಬವಾಯ್ತು ಹಹ ಕಾಡಾನೆ! ।
ಸತ್ಯಕ್ಕೆ ಉಳಿಗಾಲವಿಲ್ಲ, ಇದು ಕಲಿಕಾಲ!
ಮಿಥ್ಯವೇ ದೃಢ" ಎಂದ ಕಾಲ್ಮುಟ್ಟಿದವನೆ.

*   *   *   *

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತಿಗಳು ವಹಿಸಿದ ಪಾತ್ರ ಸಣ್ಣದಲ್ಲ. ಗುಲಾಮರಾಗಿ ಬಾಳುವುದೆಂದರೆ, ಬದುಕಿಯೂ ಸತ್ತಂತೆ. ದೇಶವು ಮೊದಲು ಸ್ವತಂತ್ರವಾಗಬೇಕು. ಪ್ರಜೆಗೆ ಯಾವತ್ತು ವಿಷಯದಲ್ಲೂ ತನ್ನ ಅಭಿಪ್ರಾಯವನ್ನು ನಿರ್ಭೀತಿಯಿಂದ ಹೇಳುವ ಸ್ವಾತಂತ್ರ್ಯ ಸಿಗಬೇಕು. ಈ ಒಂದು ಮುಕ್ತ ವಾತಾವರಣದಲ್ಲಿ ಮಾತ್ರ ದೇಶದ ಪ್ರಗತಿ ಸಾಧ್ಯ. ಆದುದರಿಂದ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡಬೇಕು. ಇದಕ್ಕಾಗಿ ಯಾವ ಬೆಲೆಯನ್ನೂ ಕೊಡಲು ನಾವು ಸಿದ್ಧರಾಗಬೇಕು - ಈ ಸಂದೇಶವನ್ನು ಕಾಮತರು ತಮ್ಮ ಜೀವನದುದ್ದಕ್ಕೂ ಸಾರಿದರು. ಅವರ ಈ ಕವನದಲ್ಲಿ ಅಂಥ ಆಶಯ ಅಡಗಿದೆ.

ದಿವ್ಯಪಥದಿ ರಥವನೇರಿ, ದೇವ ಬರುವನಿದಕೊ! ಸಾರಿ
ಸಾವಿಗಂಜದಧಟ ವೀರರೆದ್ದು ಬನ್ನಿರಿ,–
ದಾರಿಗೆದ್ದು ಬನ್ನಿರಿ !

ಪ್ರಾಣವನ್ನು ತ್ರಾಣವನ್ನು ಕಾಣಿಕೆಯೆಂದೊಪ್ಪಿಸಿನ್ನು
ತನ್ನದೆಲ್ಲ ಕೊಟ್ಟು ಕೈ 'ಬೀಸಿ ನಡೆಯಿರಿ,
ಮೈಸೂಸಿ' ನಡೆಯಿರಿ !

ಮುತ್ತಿಗಾಗಿ ಕಡಲಲಿಳಿದು, ಎತ್ತಿತರುವ ಧೈರ್ಯಕಳೆದು
ಮೃತ್ಯು ಮುಖದಿ ಒಳಗೆ ಸುಳಿದು, ಬನ್ನಿ ಧೀರರೇ,
ಬೆಳೆದು ಬನ್ನಿ ಧೀರರೇ.

ಪ್ರಾಣವೆಂಬುದೊಂದು ತೃಣ. ಪ್ರೇಮವದೇ ನಿಜಜೀವನ
ಮೌನವಾಗಿ ತನುಮನಗಳ ದುಃಖ ಕಡಿಯಿರಿ,
ಸ್ವಾರ್ಥ ಜಗ್ಗಿ ಬಡಿಯಿರಿ!

ತೀರದಲ್ಲಿ ನಿಂದು ನೀರ ಸಾರಲಂಜುವವನು ಹಾರ–
ಲಾರದೆಂತು ಮುತ್ತಹಾರ ಧರಿಸಬಲ್ಲನು?
ಮುತ್ತ ವರಿಸಬಲ್ಲನು?"

ಕಾಮತರ ಬಗೆಗೆ ಯೋಚಿಸುವಾಗಲೆಲ್ಲ ಬಡತನದಿಂದ ಕುಂಗೆಡದ ಧೈರ್ಯಕುಂದದ ಅವರ ವ್ಯಕ್ತಿತ್ವ ನನ್ನ ಮನಸ್ಸನ್ನು ತುಂಬುತ್ತದೆ. ವ್ಯವಸ್ಥೆಯ ವಿರುದ್ಧ ಏಕಾಕಿಯಾಗಿ ಹೋರಾಡುವ ಹುಮ್ಮಸ್ಸನ್ನು ಅವರು ಕೊನೆವರೆಗೂ ಉಳಿಸಿಕೊಂಡರು. ಅವರ ಈ ನಿಲುವೆಯನ್ನು ನಾವು ಅವರ ಅನೇಕ ಸಾಹಿತ್ಯಕೃತಿಗಳಲ್ಲಿ ಕಾಣಬಹುದು. ಈ ಒಂದು ಕಾರಣಕ್ಕಾಗಿಯೇ ಅವರ ಸಾಹಿತ್ಯಕ್ಕೆ ಒಂದು ವಿಶೇಷ ಸ್ಥಾನ ಸಲ್ಲುತ್ತದೆಂಬುದು ನನ್ನ ಅನಿಸಿಕೆ.

ಒಂದು ದೇವಸ್ಥಾನದ ಜೀರ್ಣೋದ್ಧಾರದ ಸಂದರ್ಭದಲ್ಲಿ ಸ್ವಜಾತಿಯ ಸಾವಿರಾರು ಮಂದಿ ಜನರೆದುರು "ವಟಪುರಾಧೀಶ್ವರ ಶತಕ"ದಂಥ ಬಂಡಾಯ ಧ್ವನಿಯುಳ್ಳ ಕಾವ್ಯವನ್ನು ಓದಲು ಅದೆಷ್ಟು ಎದೆಗಾರಿಕೆ ಬೇಕು?

ಕತ್ತಲಿನ ಗುಡಿಯೊಳಗೆ ಸುತ್ತಲು
ಬಿತ್ತರಿಸಿ ನೈವೇದ್ಯ, ಕಣ್ಗಳ
ನೊತ್ತಿ ಪೂಜಿಪೆನೆಂದು ಮನದಲಿ ಎಣಿಸಿ ರುಚಿಗಳನು ।
ವ್ಯರ್ಥದಲಿ ಮಂತ್ರಗಳ ಗೊಣಗುವ
ರೆತ್ತಬಲ್ಲರು ಬೀದಿಯಲಿ ಬೆಮ-
ರುತ್ತ ಸತ್ಪಥಗೈವ ನಿನ್ನನು ವಟಪುರಾಧೀಶಾ ॥

ಈ ಕಾವ್ಯಕರ್ತೃವಿನ ಸಾಮಾಜಿಕ ಕಾಳಜಿ ಕಡೆಗಣಿಸುವಂಥದೆ?

ಭಾರತಮಾತೆಯ ಕುರಿತಾಗಿ ಕಾಮತರು ಬರೆದ 'ಆರತಿ' ಎಂಬ ಕವನದಲ್ಲಿ ಕವಿಯ ದೇಶಪ್ರೇಮ ಹೀಗೆ ಉಕ್ಕಿದೆ:

ಆರತಿಯು ಭಾರತಿಯ ದಿವ್ಯಮೂರುತಿಗೆ
ಕೊಟ್ಟು ಬೇಸರದಮ್ಮ, ದಿಟ್ಟಸಿ ದಣಿಯದಮ್ಮ
ಸಿಟ್ಟಿರದ ಸೈರಣೆಯ ಮಮತೆಯಮ್ಮ ।
ನಿಷ್ಠುರತೆಯಿರದೆಮ್ಮ ದುಷ್ಟಚಾಳಿಗೆ ಬೆನ್ನ
ತಟ್ಟಿಮುದ್ದಿಸಿ ತಿದ್ದಿ ಬೆಳೆಸುತಿರುವಳಮ್ಮ ॥

ಮಂದಾಕಿನಿಯು ಪುಣ್ಯ ಜಲದಿಮಿಾಯಿಸುತೆಮ್ಮ
ವಿಂಧ್ಯಾಚಲದ ಚಂದನವ ಮೈಗೆ ಪೂಸಿ ।
ಕೆಂದಳಿರ ಹಾಸಿ, ಸುಮಗಂಧ ಗಾಳಿಯು ಬೀಸಿ,
ಅಂದದಾ ಸಾಮಗಾನದಿ ಜೋಗುಳಿಡುವಮ್ಮ! ।

ಹಾಲಮೃತವ ಕಾಮಧೇನುವಿಂದುಣಿಸಿ ಹೂ
ಮಾಲೆಯನು ಪಾರಿಜಾತದಿ ಮಾಡಿ ಮುಡಿಸಿ ।
ಏಳು ಸುಂಡಿಲಿನಾನೆ ಮೇಲಣಂಬಾರಿಯಲಿ
ತೋಳೆತ್ತಿ ಕುಣಿಸಿ ನಂದನದಿ ಮೆರೆಯಿಸಿದಮ್ಮ.

ವ್ಯಾಸವಾಲ್ಮೀಕಿಗಳಿನಿತಿಹಾಸ ಕಾವ್ಯಗಳ
ನಾ ಸೂತನಿಂ ಪುರಾಣದ ಕಥೆಯನೊರೆಸೀ ।
ಲೇಸಿನಾಟವ ಕಾಳಿದಾಸನಿಂದಾಡಿಸುತೆ
ಸೂಸುವುಲ್ಲಾಸದಿಂದೆಮ್ಮೊಡನೆ ನಲಿವಮ್ಮ!

ಧನಲಕ್ಷ್ಮಿ, ಧಾನ್ಯಲಕ್ಷ್ಮಿಯು, ವನಸಿರಿಯು ಸಂಕ
ಘನತೆ, ಚಿರನೂತನತೆ, ಆತ್ಮವಿದ್ಯೆ!
ಅನಘ ಚರಿತೆಯು ನಿನ್ನುದರವಾಸಪವಿತ್ರ್ಯದಕೆ
ಅನುಗಾಲ ನಿನ್ನಡಿಯೆ ಪೂಜಾರ್ಹವೆಮಗೆ.

ಎಂಬ ನಿತ್ಯಸತ್ಯವನ್ನು, ಭಾವಪೂರ್ಣವಾಗಿ, ಕವಿ ಇಲ್ಲಿ ನಿರೂಪಿಸಿದ್ದಾರೆ.

ಒಂದು ಹೂವು ಅಮಿತ ಯುಗಗಳ ಯತ್ನಪಾದಂತೆ, ಮನುಷ್ಯನ ಜೀವನವೂ ಹಾಗಾಗ ಬೇಕು ಎಂಬುದನ್ನು ಕಾಮತರು "ಹೂವು ಹಂಬಲಿಸಲೇಕೆ" ಎಂಬ ಕವನದಲ್ಲಿ ಆಶಿಸುತ್ತಾರೆ.

ನಿನಗಾಗಿ ಬರಿದೆ ನಾ ಹಂಬಲಿಸಲಾರೆನೈ
ನನಗಾಗಿ ನಿನ್ನ ಹಂಬಲವನರಿತೆ, ದೇವಾ

ಅಮಿತಯುಗಗಳ ಯತ್ನದಿಂದೆನ್ನ ಅರಳಿಸುವೆ;
ಅಮಿತಾಣಿ ಅನುಭವಗಳನು ಕೂಡಿಸಿ
ಕಮನೀಯನಾಗೊಮ್ಮೆ ನೀನೆಣಿಸಿದಂತೆ, ಕರ
ಕಮಲಸಂಜಾತ ನಾನಾಗಬೇಕೆಂದಿರುವೆ ॥೧॥

ನೆರೆಯಾಗಿ ಮರೆಯಾಗಿ, ಕರಗಿಸುತ ಮಿರುಗಿಸುತ,
ಮರುಗಿಸುವೆ ಮೆರೆಯಿಸುವೆ– ಹಂಬಲೆನಿತೋ!
ಹರಸಿ ಹಾಡುವೆ, ಕೆರಳಿ ನೋಡುತ್ತ ಬೆದರಿಸುವೆ,
ಚಿರದಿನಕೆ ಬಾಡದಂದದ ಧೃತಿಯ ಬೆಳೆಯಿಸುವೆ ॥೨॥

ಕರುಣೆಯಿದ್ದನಿತುಗ್ರನಾಗಿರುವೆ ತಂದೆ ನೀ,
ಕರುಳಿಂದರಿತು ಹಿಸುಕಿಕೊಳುವ ತಾಯೇ!
ಸುರಗಿಧಾರೆಯ ನಿಯಮವಿಟ್ಟು, ಅಪರಾಧಿಯನು
ಒರೆಯ ಬೀಸುತ ಅರಿವ ತಿದ್ದುತಿಹ ಧನಿಯೇ ॥೩॥

ಕೈನೀಡಿ ಎನ್ನೆಡೆಗೆ ನಸುನಗುತ ಬಹ ನಿನ್ನ
ಕಣ್ಣಿನಲಿ ವಾತ್ಸಲ್ಯ ತೊಳಗಿಹುದನರಿತು
ಎನ್ನ ದೀನತೆಯುಲಂಕಾರ ಮೆಚ್ಚಿದ ಕಲಾ
ಪೂರ್ಣ ನಿನ್ನಭಯಕರವೊಪ್ಪಿಸಿ ಕೊಳುವೆನು ॥೪॥

ಸಣ್ಣ ಕತೆಗಳು

1933ರಲ್ಲಿ ಪ್ರಕಟವಾದ "ಕಾಮನಬಿಲ್ಲು" ಎಂಬ ಸಣ್ಣ ಕತೆಗಳ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ, ಆ ಕೃತಿಯ ಸಂಪಾದಕರಾದ ಅ.ನ. ಕೃಷ್ಣರಾಯರು 'ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡದಲ್ಲಿ ಸಣ್ಣ ಕತೆಗಳ ಜನಕ' ಎಂದು ಬರೆದರು. ಅವರ ಈ ಹೇಳಿಕೆಯು ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೊಡ್ಡ ಕೋಲಾಹಲವನ್ನೇ ಉಂಟು ಮಾಡಿತು. ಇತಿಹಾಸಕ್ಕೆ ಅಪಚಾರವೆಸಗಿದ ಈ ಹೇಳಿಕೆಯಿಂದ ಕ್ರುದ್ಧರಾದ ಗೋವಿಂದ ಪೈಯವರು ಬರೆದರು–"ಸ್ವಾರ್ಥದ ಒಂದು ದೃಷ್ಟಿಯಿಂದ ಹೊರತು ಬೇರೆ ಯಾವ ದೃಷ್ಟಿಯಿಂದ ನೋಡಿದರೂ ಕನ್ನಡ ಕತೆಗಳಿಗೆ ಮೊತ್ತಮೊದಲಿಗರೆಂದರೆ ಕೈ. ವಾ. ಶ್ರೀ ಪಂಜೆ ಮಂಗೇಶರಾಯರಲ್ಲದೆ ಅನ್ಯರಾರೂ ಅಲ್ಲ. ಅವರ ಬೆನ್ನ ಹಿಂದೆಯೇ ಬಂದವರು, ನಾನು ಬಲ್ಲಷ್ಟರ ಮಟ್ಟಿಗೆ, ಪ್ರಾಯಶಃ ಕಾಮತರೇ. ಇವರ ಕಥೆಗಳನ್ನು 1912ರಲ್ಲೇನೋ ಅಥವಾ ಆದರ ಆಚೀಚೆಯೋ ಮೈಸೂರಿನ "ಮಧುರವಾಣಿ" ಯಲ್ಲೇನೋ ಓದಿದ ನೆನಪಿದೆ." ಈ ವಿವಾದದ ಬಗೆಗೆ ಮಾತಾಡುತ್ತಾ, ತಂದೆಯವರೊಮ್ಮೆ ನನ್ನಲ್ಲಿ ಹೇಳಿದ್ದರು - "ಕನ್ನಡದಲ್ಲಿ ಶ್ರೇಷ್ಠ ಸಣ್ಣಕತೆಗಾರರಾರು ಎಂಬ ಪ್ರಶ್ನೆಗೆ "ಮಾಸ್ತಿಯವರು" ಎಂಬುದು ಖಚಿತವಾದ ಉತ್ತರ ಎಂದು ಗೋವಿಂದ ಪೈಯವರೇ ಹೇಳಿದ್ದುಂಟು. ಸಣ್ಣಕತೆಯನ್ನು ಒಂದು ಮಾಧ್ಯಮವಾಗಿ ಮೊತ್ತಮೊದಲು ಯಶಸ್ವಿಯಾಗಿ ಬಳಸಿದವರು ಮಾಸ್ತಿಯವರೆಂದೇ ಪೈಯವರ ಖಚಿತ ಅಭಿಪ್ರಾಯ. ಆದರೆ ಈ ಕಾರಣಕ್ಕಾಗಿ ಇತಿಹಾಸಕ್ಕೆ ಅಪಚಾರವೆಸಗುವುದು ಸಲ್ಲದ ಮಾತು. ಪಂಜೆಯವರು ಮತ್ತು ಪ್ರಾಯಶಃ ಕಾಮತರು ಮಾಸ್ತಿಯವರಿಗಿಂತ ಮೊದಲೇ ಕನ್ನಡದಲ್ಲಿ ಸಣ್ಣಕತೆಗಳನ್ನು ಬರೆದಿದ್ದರು ಎಂಬುದು ದಾಖಲಾಗಬೇಕೆಂದು ಪೈಯವರ ನಿಲುವಾಗಿತ್ತು." ಆ ಬಳಿಕ 1941ರಲ್ಲಿ "ಕಂಡೂ ಕಾಣದ ನೋಟಗಳು" ಎಂಬ ಕಥಾಸಂಕಲನವೊಂದು ಉಡುಪಿಯಲ್ಲಿ ಪ್ರಕಟವಾಯಿತು. ಈ ಪುಸ್ತಕಕ್ಕೂ ಅ. ನ. ಕೃ. ಅವರೇ ಮುನ್ನುಡಿ ಬರೆದರು. ಈ ಬಾರಿ ಅವರ ಅಭಿಪ್ರಾಯ ಹೀಗೆ ವ್ಯಕ್ತವಾಗಿತ್ತು - "ಕನ್ನಡದಲ್ಲಿ ಸಣ್ಣ ಕತೆಗಳು ಒಂದು ಮಟ್ಟವನ್ನು ಮುಟ್ಟಿ ಜಗತ್ತಿನ ಕಥಾಸಾಹಿತ್ಯದ ಮಾನದಂಡದಿಂದ ಅಳೆಸಿಕೊಳ್ಳಲು ಸಿದ್ಧವಾಗಿವೆ. ಈಗ ನಲವತ್ತೊಂದು ವರ್ಷಗಳ ಕೆಳಗೆ (1900) ಪಂಜೆ ಮಂಗೇಶರಾಯರು ಇದನ್ನು ಆರಂಭಿಸಿದರು. ಇಪ್ಪತ್ತೊಂಭತ್ತು ವರ್ಷಗಳ ಕೆಳಗೆ (1912) ಕಾಮತ್ ಮತ್ತು ಶ್ರೀನಿವಾಸರು ಬೆಳೆಸಿದರು."

"ಹತ್ತರೊಡನೆ ಹನ್ನೊಂದು" (1935) ಮತ್ತು "ಅಂದಿನ ಅವೂರು" (1941) ಇವೆರಡು ಕಾಮತರ ಸಣ್ಣ ಕತೆಗಳ ಸಂಕಲನಗಳು. ಮಾಸ್ತಿಯವರ ಕತೆಗಳಲ್ಲಿರುವಂತೆ ಕಾಮತರ ಕತೆಗಳಲ್ಲಿಯೂ ಕತೆ ಗಟ್ಟಿಯಾಗಿಯೇ ಇದೆ. ಮಾಸ್ತಿಯವರು ಕತೆಯನ್ನು ನೇರವಾಗಿ ಹೇಳುತ್ತಾರೆ; ಕಾಮತರು ಕೆಲವೊಮ್ಮೆ ಬಳಸಿ ಹೇಳುತ್ತಾರೆ - ಇದಿಷ್ಟು ಅವರ ನಡುವಿನ ವ್ಯತ್ಯಾಸ. ಈ ವ್ಯತ್ಯಾಸವಾದರೂ ಅದೆಷ್ಟು ಮಹತ್ವಪೂರ್ಣವಾಗಿದೆ! ಈ ಒಂದು ಪ್ರಬಲ ಕಾರಣದಿಂದಾಗಿಯೇ, ಮಾಸ್ತಿಯವರ

ಕತೆಗಳು ಸರಳವಾಗಿ ಓದಿಸಿಕೊಂಡು ಹೋಗುತ್ತವೆ. ಓದುಗನ ಮೇಲೆ ಆಳವಾದ ಪರಿಣಾಮವನ್ನು ಉಂಟುಮಾಡುತ್ತವೆ. ಹೇಳಬೇಕಾಗಿರುವ ಕತೆಯನ್ನು ನಿರಾಡಂಬರವಾಗಿ ಹೇಳುವುದರಲ್ಲಿ ಅವರು ಪೂರ್ತಿ ಸಫಲರಾಗುತ್ತಾರೆ. ಕಾಮತರು ಬಳಸಿದ ತಂತ್ರವೇ ಅವರ ಕೆಲವು ಕತೆಗಳ ವಿಫಲತೆಗೆ ಕಾರಣವಾದುವೇನೊ! ಅವರು ಕತೆಗೆ ನೇರವಾಗಿ ಸಂಬಂಧವಿಲ್ಲದ ಘಟನೆಗಳನ್ನು ಮಿತಿಮೀರಿ ವಿವರಿಸುತ್ತಾರೆ. ಇದರಿಂದಾಗಿ ಓದುಗನಿಗೆ ಕತೆಯ ಮೇಲಿನ ಆಸಕ್ತಿ ಕಮ್ಮಿಯಾಗುತ್ತದೆ. ಕತೆಯ ಯಶಸ್ಸು ಬಹುಮಟ್ಟಿಗೆ ತೆಳುವಾಗುತ್ತದೆ.

ಕಾಮತರ "ಕದ್ದವರು ಯಾರು?" ನನಗೆ ತುಂಬ ಮೆಚ್ಚುಗೆಯಾದ ಕತೆ. ಕನ್ನಡದ ಉತ್ತಮ ಸಣ್ಣ ಕತೆಗಳಲ್ಲಿ ಇದೊಂದಾಗಿದೆ.

ಆವೂರಿನ ಪಟೇಲರ ಹೆಂಡತಿ ಕೆರೆಯಿಂದ ಮಿಂದು ಬರುವಾಗ ತನ್ನ ಗೆಜ್ಜೆಟೀಕನ್ನು ಕಳೆದುಕೊಳ್ಳುತ್ತಾರೆ. ಮನೆಗೆ ಬಂದವರೇ ಪಟೇಲರೊಡನೆ ಹೇಳುತ್ತಾರೆ - "ನನ್ನ ಗೆಜ್ಜೆಟೀಕು ಕಳವಾಗಿದೆ. ಕೆರೆಗೆ ಮಿಂದು ಹೋದಾಗ ಅಲ್ಲಿ ನಾಗಮ್ಮನವರೊಡನೆ ಮಾತುಕತೆಯಾಯಿತು. ಮಿಂದುತ್ತಿದ್ದೆವು. ನಾನು ಬಂದೆ. ನಾಗಮ್ಮ ಅಲ್ಲೇ ಇನ್ನೂ ಮಿಂದುತ್ತಿದ್ದರು. ಅರ್ಧದಾರಿ ಬರುತ್ತಲೇ ಕೊರಳು ಹಗುರವಾಗಿ ತೋರಿತು. ತಲೆಯ ಮೇಲಕ್ಕೆ ಒಂದು ಕಾಗೆ ಕರ್ರೆಂದು ಕೂಗಿತು. ಕೊರಳು ಮುಟ್ಟಿದಾಗ ಎದೆಯಿಂದೇನೊ ಜೀವ ಹಾರಿತು! ಗೆಜ್ಜೆಟೀಕು ಇರಲಿಲ್ಲ. ಅದಕ್ಕಾಗಿ ಪುನಃ ಕೆರೆಗೆ ಓಡಿದೆ. ನಾಗಮ್ಮ ಮನೆಗೆ ಹಿಂತಿರುಗುತ್ತಿದ್ದರು. ಅವರ ಬೆನ್ನು ಹಿಡಿದು ನಡೆದೆ. 'ನಿಮ್ಮಾಣೆ ನಾನರಿಯೆ', ಎಂದರು. ಅಂತೂ ಇನ್ನಾರೂ ಅಲ್ಲಿಗೆ ಮಿಂದು ಬಂದವರಿಲ್ಲ. ದನ ಕಾಯುವ ಹುಡುಗರು ಸಹ ಇದ್ದಿಲ್ಲ. ಭೂತಕ್ಕೊಂದು ತೆಂಗಿನ ಕಾಯಿ ಒಪ್ಪಿಸಬೇಕು. ಗೆಜ್ಜೆಟೀಕು ಬೇಗನೇ ಪತ್ತೆಯಾಗಬೇಕು." ಈ ರೀತಿ ನೇರವಾಗಿ ನಾಗಮ್ಮನವರ ಮೇಲೆ ಆರೋಪ! ಅಲ್ಲೇ ಇದ್ದ ಶಾನುಭಾಗ ನಾರಾಯಣರಾಯರಿಗೆ ಸಿಡಿಲು ಬಡೆದಂತಾಗಿತ್ತು.

ಈ ನಾಗಮ್ಮ ಯಾರು? ನಾಗಮ್ಮ ಶಾನುಭಾಗರ ಮೂರನೆಯ ಹೆಂಡತಿ. "ತಂದೆ-ತಾಯಿ ಇಲ್ಲದ ಆ ಅನಾಥ ಕನ್ಯೆಯನ್ನು ನಾರಾಯಣರಾಯರು ವಿವಾಹವಾಗಿ ಎರಡು ವರ್ಷ ಮಾತ್ರ ದಾಟಿದ್ದಿತು. ನಾಗಮ್ಮ ತೀರ ಹಳ್ಳಿಯ ಹುಡುಗಿ-ಹದಿನೈದೇ ವರ್ಷ ವಯಸ್ಸಿನ ಹುಡುಗಿ. ನಾರಾಯಣರಾಯರಿಗೆ ಪುತ್ರಸಂತತಿಯಿದ್ದಿದ್ದರೆ ಇವಳನ್ನು ಅವರು ವಿವಾಹವಾಗುತಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ನಾರಾಯಣರಾಯರ ಪ್ರಥಮ ಪತ್ನಿಯು ಪುತ್ರರತ್ನವನ್ನು ಹಿಂದೆ ಬಿಟ್ಟಿದ್ದರೆ ನಾಗಮ್ಮನು ರಾಯರ ಸೊಸೆಯಾಗಬಹುದೆಂದು ನಾವೂ ನೀವೂ ತಪ್ಪಾಗಿ ಎಣಿಸುವಂತಾಗುತಿದ್ದಿತು. ಅನಾಥೆ, ಗತಿಹೀನೆ, ಮೂಢೆ, ಅದು ಕಾರಣವೇ ಅವಳಲ್ಲಿ ಠಕ್ಕಿಲ್ಲ, ವಂಚನೆಯಿಲ್ಲ, ಸರಳ ಸ್ವಭಾವ."

ಬಡವರ ಮನೆಯ ಈ ಹುಡುಗಿಯನ್ನು ಪಟೇಲರ ಹೆಂಡತಿಯು ಕಳ್ಳಿಯೆಂದು ಭಾವಿಸಿದ್ದು ಸರಿಯಲ್ಲದಿದ್ದರೂ, ಹುಡುಗಿಯ ಗಂಡನೇ ಆ ರೀತಿ ಭಾವಿಸಿದ ಎಂದಾಗ ಬಡವರ ಮೇಲೆ ಎಲ್ಲರಿಗೂ ಅದೆಷ್ಟು ತಾತ್ಸಾರ ಎಂಬುದರ ಅರಿವಾಗುತ್ತದೆ. ಮನೆಗೆ ಬಂದ ಶಾನುಭಾಗರು ಹೆಂಡತಿಯನ್ನು ಸಿಕ್ಕಾಬಟ್ಟೆ ಬೈಯುತ್ತಾರೆ. ಕೊನೆಗೆ ಹೇಳುತ್ತಾರೆ - "'ಇತ್ತ ಬಂದೆ' ಎನ್ನಬೇಡ, 'ಇತ್ತ ತಂದೆ' ಎನ್ನು. ಎಲ್ಲಿಟ್ಟಿದ್ದಿ ಅದನ್ನು? ಈಗಲೇ ಕೊಡು. ನಾನು ಬಡವನು. ಈ ಮನೆ, ಹಿತ್ತಿಲು ಎಲ್ಲವೂ ಪಟೇಲರದು. ಅವರ ಪಟೇಲಿಕೆಯೂ, ನನ್ನ ಶಾನುಭೋಗಿಕೆಯೂ ನನ್ನವಾದರೂ, ನಮ್ಮಿಬ್ಬರ ಜೀವನವು ನಡೆಯುತ್ತಿರುವುದು ಅವರ ಅನುಗ್ರಹದಿಂದ. ಬಡತನವಿದ್ದರೆ ಚಿಂತಿಲ್ಲ. ಮೂಗುತಿಯಿದ್ದರೆ ಸಾಕು. ಮಂಗಲಸೂತ್ರ ಸಾಕು; ಗೆಜ್ಜೆಟೀಕಿನ ಆಸೆಮಾಡಬೇಡ. ಇದಾರಿಗೂ ಗೊತ್ತಿಲ್ಲ. ನಿನ್ನಲ್ಲಿ ಯಾರೂ ತಪ್ಪೆಣಿಸಿಲ್ಲ. ಭೂತಕ್ಕೆ ಹೇಳಿಕೊಂಡಿದ್ದಾರೆ. ಮಾರೀಗುಡಿಗೆ ಬಲಿಯಾಗುವೆ. ಅದನ್ನು ಇತ್ತ ಕೊಡು. ಅಥವಾ ಎಲ್ಲಿದೆಯೆಂದು ಹೇಳು. ನಾನು ಅದು ಕೆರೆಯ ಬಳಿಯಲ್ಲೇ ಸಿಕ್ಕಿತೆಂದು ಪಟೇಲರಿಗೆ ನಂಬಿಸಿ ಬರುತ್ತೇನೆ. ಇತ್ತ ಕೊಡು."

ಈ ಮಾತನ್ನು ಕೇಳುತ್ತಲೇ ಬಡಹುಡುಗಿ ನೆಲದ ಮೇಲೆ ಕುಸಿಯುತ್ತಾಳೆ. ಆಗ ಅಲ್ಲೇ ಇದ್ದ ಉಗ್ರಾಣಿ ಪೂವನು ಹೇಳುತ್ತಾನೆ - "ಶಾನುಭಾಗರೆ! ಒಂದು ಕೊಡಪಾನ ನೀರು ತಂದು ಅಮ್ಮನ ಮುಖದ ಮೇಲೆ ಚೆಲ್ಲಬಾರದೆ? ನೀವು ತಡ ಮಾಡಿದರೆ ಅವರು ಸತ್ತಾರು. ಇಲ್ಲವೇ ನಾನೇ ತಂದು ಚೆಲ್ಲುತ್ತೇನೆ." ಉಗ್ರಾಣಿಯು ಇಷ್ಟು ಹೇಳಿದ್ದೇ, ಶಾನುಭಾಗರ 'ಬ್ರಾಹ್ಮಣ ಪ್ರಜ್ಞೆ' ಜಾಗ್ರತವಾಗುತ್ತದೆ. ಇಲ್ಲಿ ಕಾಮತರು ವ್ಯಂಗ್ಯವಾಗಿ "ಪೂವನೇನು ಬ್ರಾಹ್ಮಣನೆ? ಅವನು ಚೆಲ್ಲುವ ನೀರಿನ ಒಂದು ತಟಕಾದರೂ ಅವಳ ತುಟಿಗೆ ಅಂಟಿದರೆ ಅವಳ ಜಾತಿ ಕೆಡುವುದಲ್ಲ!" ಎಂದು ಬರೆಯುತ್ತಾರೆ. ಹಗಲು, ರಾತ್ರಿ ನಾಗಮ್ಮನಿಗೆ ಒಂದು ತುತ್ತು ಅನ್ನವಿಲ್ಲ. ಅದು ಅವಳಿಗೆ ಮುಖ್ಯವೂ ಅಲ್ಲ. ಮಾನಸಿಕ ಯಾತನೆಯಿಂದಾಗಿ ಜೀವವಿದ್ದೂ ಸತ್ತವಳಂತಾಗುತ್ತಾಳೆ. ಮರುದಿನ ಬೆಳಗ್ಗೆ ಸತ್ಯವನ್ನು ಹೊರತರುವುದಕ್ಕಾಗಿ ಶಾನುಭಾಗರು ಊರಿನ ಮಂತ್ರವಾದಿಯನ್ನು ಕರೆಸುತ್ತಾರೆ.

"ಶಾನುಭಾಗರು ಮಂತ್ರವಾದಿಯನ್ನು ಕೂಡಿಸುತ್ತಲೇ ಅವನು ತಾನು ಕಲ್ಲುಕುಟ್ಟಿಗನಾಗಿದ್ದು ಕಟ್ಟಿದ ಯಾವುದೋ ಒಂದು ಮನೆಯ ಕೋಣೆಗಳ ನಕಾಶವನ್ನು ಜೇಡಿಮಣ್ಣಿನ ತುಂಡಿನಿಂದ ಬರೆದು, ಆಯಾ ಕೋಣೆಯಲ್ಲಿ ಇಷ್ಟಿಷ್ಟು ಕವಡಿಗಳನ್ನಿಟ್ಟು, ನಾಲ್ಕಾರು ದೇವರ ಹೆಸರುಗಳನ್ನು ಉಚ್ಚರಿಸಿ ಪ್ರಶ್ನೆ ಹೇಳತೊಡಗಿದನು. ನಮ್ಮ ಮಾತಿನಲ್ಲಿ ಅದರ ಅಭಿಪ್ರಾಯ ಚಮತ್ಕಾರವು ಹೀಗಾಗಿದೆ:-

ಬಹು ಬೆಲೆಯದೊಂದು ವಸ್ತು ಕಾಣೆಯಾಗಿದೆ. ಅದನ್ನು ಯಾರೋ ಒಬ್ಬರು ಕದ್ದಿರಬಹುದಾಗಿ ಅನುಮಾನ ಇದೆ. ಕದ್ದಿರಬಹುದಾದ ವ್ಯಕ್ತಿ ಕದ್ದುದಲ್ಲ. ಅವರೆ ಜಲದುರ್ಗೆಯ ಪ್ರೇರಣೆಯಿಂದ ಆ ವಸ್ತುವನ್ನು ಅಡಗಿಸಿಟ್ಟ ಮಾಹಿಯಾಗಿದೆ.

ಆ ವ್ಯಕ್ತಿಯನ್ನು ಹಿಡಿದ ಜಲದುರ್ಗೆಯನ್ನು ಉಚ್ಚಾಟನೆಗೊಳಿಸಬೇಕು. ಆಗ ದುರ್ಗೆ ಬಿಟ್ಟುಹೋಗುವಾಗ ಆ ವಸ್ತುವನ್ನು ವ್ಯಕ್ತಿಯ ಕೈಯಿಂದ ತಂದೊಪ್ಪಿಸುವಳು. ಜಲದುರ್ಗೆಯನ್ನು ಓಡಿಸಲು ಅಗ್ನಿದರ್ಶನವಾಗಬೇಕು. ಅಗ್ನಿಕುಂಡವನ್ನು ಮಾಡಿ ವ್ಯಕ್ತಿಯನ್ನು ಅದರ ಬಳಿ ನಿಲ್ಲಿಸಿ, ಕುಳ್ಳಿರಿಸಿ, ಬೆಂಕಿಯನ್ನು ಮುಟ್ಟಿಸಿ, ಕೆಂಡದಿಂದ ಮೀಯಿಸಿ ವ್ಯಕ್ತಿಯ ಮೈಯಲ್ಲಿ ತುಂಬಿರುವ ಜಲದುರ್ಗೆಯನ್ನು ಓಡಿಸುವ ಪ್ರಯತ್ನ ಮಾಡಿದಲ್ಲಿ ಕಾರ್ಯವು ಕೈಗೂಡುವುದು."

"ಮಂತ್ರವಾದಿಯೂ ಗಂಡನೂ ಕೇಳುತ್ತಲೇ ಇದ್ದ ಪ್ರಶ್ನೆಗಳಿಗೆ ನಾಗಮ್ಮ 'ನಾನೊಂದೂ ಅರಿಯೆ' ಎಂದೇ ಉತ್ತರ ಕೊಡುತ್ತಿದ್ದಂತೆ, - ಕುಂಡದ ಬಳಿ ಅವಳು ಕೂತಿರಬೇಕೆಂದಾಯಿತು. ಮಿಂದುಟ್ಟ ಒದ್ದೆ ಸೀರೆಯು ಮೈಮೇಲೆಯೇ ಒಣಗಹತ್ತಿತು. ಕೂದಲು ಕಟ್ಟಿಕೊಂಡಿರಲಿಲ್ಲ, ಒಣಗಲೆಂದು; ಅದೆಲ್ಲ ಬೆಂಕಿಯ ಧಗೆಗೆ ಒಣಗುತ್ತ, ಗಾಳಿಗೆ ತೂಗುತ್ತ, ಬೆಂಕಿಯ ನಾಲಗೆಗಳನ್ನು ಸೋಕುತ್ತ, ಅಷ್ಟಷ್ಟೆ ತುದಿಗಳು ಸುಡುತ್ತ ಕರಿಯಾದುವು. ನಿರಾಹಾರ, ದುಃಖ, ಜಾಗರಣ ಇವುಗಳಿಂದಾಗಿ ಕೆಂಪಗೆ ಉರಿಯುತ್ತಿದ್ದ ಕಣ್ಣುಗಳಲ್ಲಿ ಈ ಕುಂಡದಿಂದೇಳುವ ಹೊಗೆಯು ಇನ್ನಷ್ಟು ಉರಿಯನ್ನೂ ಚುರುಕನ್ನೂ ಹಬ್ಬಿಸಿತು. ಬಾಡಿದ ಮುಖ ಒಣಗಿತು. ಬಳಲಿದ ದೇಹ ದಣಿಯಿತು. ಜ್ವರವೇರಿತು.

ಕುಂಡದಲ್ಲಿ ಇನ್ನೂ ಮುಳಿಹುಲ್ಲು, ಕಡ್ಡಿಗಳು ಮತ್ತು ಸೌದೆಯ ಚೂರು ಸುರಿಯಲು, ಪ್ರಶ್ನೆಗಳು ಮಳೆಗರೆಯಲು, ಉತ್ತರವು ಹೊರಡದಿರಲು, ನಾಗಮ್ಮನು ಧೊಪ್ಪನೆ ಕುಂಡದೊಳಗೆ ಬಾಗಿ ಬಿದ್ದಳು. ನಾರಾಯಣರಾಯರು ಅವಳನ್ನು ಎತ್ತಲು ಧಾವಿಸಿದರು. ಮಂತ್ರವಾದಿಯು ತಾನೇ ಅವಳನ್ನು ಎತ್ತಿದನು. ತಲೆ, ಮುಖ, ಎದೆಯ ಬಟ್ಟೆ,- ಇಷ್ಟೇ ಸ್ವಲ್ಪ ಮಾತ್ರ ಸುಟ್ಟಿದ್ದುವು. ಮಂತ್ರವಾದಿಯು 'ಜಲದುರ್ಗೆಯಿನ್ನು ಕೂಡಲೇ ಹೊರಡುವಳು' ಎಂದನು. ನಾರಾಯಣರಾಯರು, 'ಸುಟ್ಟಲ್ಲಿಗೆ ಏನು ಮುಟ್ಟಿಸಬೇಕು?' ಎಂದರು. ಬೆಣ್ಣೆಯೆಂದಾಯಿತು ; ಅದಿಲ್ಲ. ಸೆಗಣಿಯೆಂದಾಯಿತು, ಈ ವೇಳೆಗೆ ತಕ್ಕ ಬೆಣ್ಣೆ !

ನಾಗಮ್ಮನ ಮಾತಿಲ್ಲ! ಉಸಿರೇಳುತ್ತಿದೆ! ಬೆದರಿದರು! ಆದರೂ ಮಂತ್ರವಾದಕ್ಕೆ ಆತಂಕವೇ?"

ಅಷ್ಟರಲ್ಲಿ ಕಲೆಕ್ಟರರು ಅಲ್ಲಿಗೆ ಬಂದು, ಕದ್ದವರು ಯಾರು ಎಂಬ ಸಮಸ್ಯೆಯನ್ನು ಬಿಡಿಸುತ್ತಾರೆ. ಅವರು ಹೇಳುತ್ತಾರೆ, "ನಿನ್ನೆ ಬೆಳಿಗ್ಗೆ ಕೆರೆಯಲ್ಲಿ ಮೀನು ಶಿಕಾರಿಮಾಡಲು ನಾನು ಹೋಗಿದ್ದೆ. ಹಿಂದಿರುಗುವಾಗ ಒಂದು ಕಡೆ ವೀಳೆಯ ಕಟ್ಟಿಪ್ಪ ಚಿಕ್ಕ ವಸ್ತ್ರವೊಂದೂ, ಅದರ ಅಡಿಯಲ್ಲಿ ಈ ಆಭರಣವೂ ಅಲ್ಲಿದ್ದುದನ್ನು ಕಂಡೆ."

ಇಪ್ಪತ್ತಾರು ಪುಟಗಳ ಈ ಕತೆಯಲ್ಲಿ ಉದ್ವೇಗಕ್ಕೂ ವೇಗದಲ್ಲಿ, ಚುರುಕುತನವಿದೆ. ಬ್ರಾಹ್ಮಣಪ್ರಜ್ಞೆಯ ಬಗೆಗೆ ವ್ಯಂಗ್ಯವಿದೆ. ಎಲ್ಲಿಯೂ ಕಾಮತರು ಕಥಾವಸ್ತುವನ್ನು ಬಿಟ್ಟು ಆಚೀಚೆ ಸುಳಿಯುವುದಿಲ್ಲ. ಬಡವರ ಮನೆಯ ಹುಡುಗಿಯೆಂದರೆ ಗಂಡನಿಂದ

ಹಿಡಿದು ಇಡೀ ಊರಿಗೆ ತಾತ್ಸಾರ ಎಂಬುದನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಮಂತ್ರತಂತ್ರಗಳ ಮೇಲೆ ನಂಬಿಕೆಯಿರುವವರು ಯಾವ ಅನ್ಯಾಯವನ್ನು ಮಾಡಲೂ ತಯಾರಿರುತ್ತಾರೆ ಎಂಬುದನ್ನು ಚಿತ್ರಿಸುವುದರಲ್ಲಿ ಸಫಲರಾಗಿದ್ದಾರೆ. ಈ ಎಲ್ಲ ಕಾರಣಗಳಿಂದಾಗಿ ಇದೊಂದು ಒಳ್ಳೆಯ ಕತೆಯಾಗಿದೆ.

"ಕರಿನಾಯಿ" ಇನ್ನೊಂದು ಉತ್ತಮ ಕತೆ. ಇದರ ವಸ್ತು ಈ ರೀತಿ ಇದೆ- ಲೇಖಕರು ಮತ್ತು ಅವರ ಗೆಳೆಯ ಹಣದ ತಾಪತ್ರಯದಲ್ಲಿದ್ದಾರೆ. ಆಗ ಒಬ್ಬ ಕಾಫಿ ಪ್ಲಾಂಟರಳು ಪತ್ರಿಕೆಯಲ್ಲಿ ಪ್ರಕಟಿಸಿದ ಒಂದು ಜಾಹಿರಾತು ಅವರ ಗಮನಕ್ಕೆ ಬರುತ್ತದೆ- 'ಕಾಣೆಯಾಗಿರುವ ನಮ್ಮ ಕರಿನಾಯಿಯನ್ನು ಹುಡುಕಿಕೊಟ್ಟವರಿಗೆ ನೂರು ರೂಪಾಯಿ ಬಹುಮಾನ!' ಜಾಹಿರಾತನ್ನು ನೋಡಿದ ಈ ಗೆಳೆಯರಿಬ್ಬರಿಗೆ ಒಂದು ಹೊಸ ಚೈತನ್ಯ ಬರುತ್ತದೆ. ಅಲ್ಲಿಂದ ನಾಯಿಯ ಹುಡುಕಾಟ ಆರಂಭವಾಗುತ್ತದೆ. ಕೊನೆಗೂ ಅವರ ಶ್ರಮವು ಸಾರ್ಥಕವಾಗುತ್ತದೆ. ನಾಯಿಯನ್ನು ಅದರ ಒಡತಿಗೆ ಒಪ್ಪಿಸಿ ಹಣ ಪಡೆಯುತ್ತಾರೆ ಮತ್ತು ಆ ಕೂಡಲೇ ಅದನ್ನು ಖರ್ಚುಮಾಡುತ್ತಾರೆ. 'ನೀವು ತಂದುಕೊಟ್ಟ ನಾಯಿ ನಮ್ಮದಲ್ಲ. ಅದರಂತೆ ಕಾಣುವ ಬೇರೆ ನಾಯಿ' ಎಂದು ಪ್ಲಾಂಟರಳಿಂದ ಪತ್ರಬಂದಾಗ ಅವರ ಅವಸ್ಥೆ ! ಅವಳು ಅವರನ್ನು ಹುಡುಕಿಕೊಂಡು ಬಂದಾಗ, ಅವಳ ಜೀವನ ಚರಿತ್ರೆಯನ್ನು ಬರೆಯುವ ಬಗೆಗೆ ಪ್ರಸ್ತಾವಿಸುತ್ತಾರೆ. 'ತನ್ನ ಜೀವನ ಚರಿತ್ರೆಯ ಬಗೆಗೆ ಪುಸ್ತಕ ರಚನೆಯಾಗುವುದೆಂದು' ತಿಳಿದು ಅವಳಿಗೆ ಎಲ್ಲಿಲ್ಲದ ಸಂಭ್ರಮ! 'ಆ ನೂರು ರೂಪಾಯಿ ನನ್ನ ಕುರಿತು ಬರೆಯಲಿರುವ ಗ್ರಂಥಕ್ಕಾಗಿ ಮುಂಗಡವಾಗಿರಲಿ' ಎಂದು ಹೇಳುತ್ತಾಳೆ.

ಈ ಕತೆಯಲ್ಲಿ ತಿಳಿಹಾಸ್ಯವು ಚಿಮ್ಮುತ್ತಿದ್ದರೂ, ಅದು ಅದೇ ಉಸಿರಿನಲ್ಲಿ ಆ ದಿನಗಳ ಕನ್ನಡ ಸಾಹಿತಿಗಳ ಚಿಂತಾಜನಕ ಪರಿಸ್ಥಿತಿಯ ಕಡೆಗೂ ಬೆಳಕು ಹಾಯಿಸುತ್ತದೆ.

ಕಾಮತರ ಕತೆಗಳಲ್ಲಿ ತುಂಬ ಜನಪ್ರಿಯವಾಗಿದ್ದುದು 'ಬೊಗ್ಗು ಮಹಾಶಯನು'. ಈ ಕತೆಯ ವಸ್ತು ಗಟ್ಟಿಯಾಗಿದೆ. ಆದರೆ ಮೊದಲ ಐದಾರು ಪುಟಗಳಲ್ಲಿ ಕತೆಗೆ ಸಂಬಂಧವಿಲ್ಲದ ವಿವರಣೆಗಳೇ ಜಾಸ್ತಿಯಾಗಿ ಇದೊಂದು ಪ್ರಬಂಧವೋ ಹರಟೆಯೋ ಎಂಬ ಭಾವನೆಯನ್ನು ಉಂಟುಮಾಡುತ್ತದೆ. ಕತೆಯು ಆರಂಭಗೊಂಡ ಮೇಲೆ, ಓದುಗನ ಆಸಕ್ತಿಯನ್ನು ಕೆರಳಿಸುತ್ತದೆ; ಓದಿಸಿಕೊಂಡು ಹೋಗುತ್ತದೆ.

ಊರಲ್ಲಿ ತುಂಬ ಜನಪ್ರಿಯರಾಗಿದ್ದ ಮುನ್ಸಿಫರಿಗೆ ಬೇರೊಂದು ಊರಿಗೆ ವರ್ಗವಾಗುತ್ತದೆ. ಬಸ್ಸುಗಳಿಲ್ಲದ ಆ ದಿನಗಳಲ್ಲಿ, ಅದೊಂದು ಅಮಾವಾಸ್ಯೆಯ ರಾತ್ರಿ ಅವರು, ತಮ್ಮ ತಂದೆಯೊಡನೆ ಎತ್ತಿನ ಗಾಡಿಯಲ್ಲಿ ಮಂಗಳೂರಿಗೆ ಹೊರಡುತ್ತಾರೆ.

“ಸಮುದ್ರದಿಂದ ಮೂರು ಗಾವುದ ದೂರದಲ್ಲಿರುವ ಆವೂರನ್ನು ಹಾದು ಮಂಗಳೂರಿಗೆ ಗಾಡಿ ಚಲಿಸುವುದು. ಆವೂರಿಗೆ ತಲುಪಲು ಇನ್ನೆರಡು ಮೈಲುಗಳಿವೆ; ಅಷ್ಟರಲ್ಲಿ, ಗಾಡಿಯ ಬದಿಯಲ್ಲಿ ಯಾರೋ ಸುಳಿದಂತಾಯಿತು. ಅದಾದ ಐದೇ ನಿಮಿಷಗಳಲ್ಲಿ ಗಾಡಿಯ ಎಡಚಕ್ರವು ತಪ್ಪಿತು; ಗಾಡಿ ವಾಲುತ್ತ ದಡಕ್ಕನೆ ಮಾರ್ಗದ ಮೇಲೆ ಬಿದ್ದಿತು! ಅದೊಂದು ಚಕ್ರಕ್ಕೆ ಸಿಕ್ಕಿಸಿದ ಕೀಲೇ ಇದ್ದಿಲ್ಲ. ಗಾಡಿಯೊಳಗೆ ಕೂತಿದ್ದವರು ಆಕಾಶದ ಮೇಲೆ ಮಲಗಿದ್ದಂತೆ ಭಾವಿಸುವಂತಾಯಿತು! ಅವರಿಗೆ ಇತರ ಯಾವ ಪೆಟ್ಟೂ ಆಗದಂತೆ 250 ಸೂಡಿ ಬೈಹುಲ್ಲಿನ ಹಾಸೇ ಅವರನ್ನು ಕಾಪಾಡಿತು. ಗಾಡಿಯವನು ಎತ್ತುಗಳ ಕೊರಳ ಹಗ್ಗವನ್ನು ಬಿಡಿಸಿದನು. ತನ್ನದೊಂದು ಕೈಯಲ್ಲಿ ಬಾರುಕೋಲನ್ನೂ, ಮತ್ತೊಂದರಲ್ಲಿ ಒಂದು ಕತ್ತಿಯನ್ನೂ ಧರಿಸಿದನು. ಗಾಡಿಗೆ ತೂಗಿದ್ದ ಲಾಟಾನು ಆಗ ಒಡೆದು ಹೋಗಿದ್ದಿತು. ಎತ್ತೆತ್ತಲೂ ಕತ್ತಲು!

ಗಾಡಿಯಿಂದ ಸಾಮಾನಿನ ಎರಡು ಗಂಟುಗಳನ್ನು ಗಾಡಿಯವನು ಹೊತ್ತನು; ಪೂಜಾದೇವರ ಕರಡಿಗೆಯನ್ನು (ಸುಮಾರು 2000 ರೂಪಾಯಿಯ ಸೊತ್ತು) ರಾಯರೇ ಹಿಡಿದುಕೊಂಡರು; ತೀರ್ಥರೂಪರು, ಪಾಪ, ಹಣ್ಣು ಮುದುಕರು. ರಾಯರ ಕೈ ಹಿಡಿದು ಮುಂಬರಿದರು. ದೂರದಲ್ಲಿ ಕಾಣುತ್ತಿದ್ದ ದೀಪದ ಕಡೆಗೆ ಗಾಡಿಯವನು ಅವರನ್ನು ಕರೆದೊಯ್ದನು. ಎತ್ತುಗಳು ಅವನ ಬೆನ್ನ ಹಿಂದೆಯೇ ಗುಲಾಮರಂತೆ ಕಾಲಿಟ್ಟವು. ಎಂತೂ, ದೀಪವಿದ್ದುವಲ್ಲಿಗೆ ಎಲ್ಲರೂ ಬಂದು ತಲಪಿದರು.

ಅದು ಆವೂರು ಭಾಗವತರ ಅಂಗಡಿಯ ದೀಪದ ಬೆಳಕಾಗಿದ್ದಿತು.”

ಗಾಡಿಯವನು ಅವರನ್ನು ಭಾಗವತರ ಬಳಿ ಬಿಟ್ಟು, ಪಟೇಲರ ಮನೆಗೆ ಹೋದನು. ಈ ಇಬ್ಬರು ಬಂದ ಕಾರಣ, ಭಾಗವತರಿಗೆ ಸ್ವಲ್ಪ ಧೈರ್ಯವಾಯಿತು. ಮೂರು ವರ್ಷಗಳ ಹಿಂದೆ ಕಣ್ಣಾನೂರು ಜೈಲಿಗೆ ರವಾನೆಯಾಗಿದ್ದ ಕೇಡಿ ಬೊಗ್ಗುವು ಅದೇ ವಾರದಲ್ಲಿ ಬಿಡುಗಡೆ ಹೊಂದಿ ಆವೂರಿಗೆ ಬಂದಿದ್ದಾನೆಂಬ ಸುದ್ದಿಯನ್ನು ಅವರು ಆಗ ತಾನೇ ಕೇಳಿದ್ದರು. ನಡುರಾತ್ರಿ ಸಮೀಪಿಸುತ್ತಿದ್ದಂತೆಲೇ ಎಲ್ಲರೂ ಅಲ್ಲೇ ಮಲಗಿದರು.

“ಅಷ್ಟರಲ್ಲಿ,- ನಡುಹರೆಯದ, ಕಿರು ದೋತರವನ್ನುಟ್ಟ, ತುಂಡಂಗಿ ತೊಟ್ಟ, ತಲೆಗೊಂದು ಮುಟ್ಟಾಳೆಯನ್ನಿಟ್ಟುಕೊಂಡ, ಗಟ್ಟಿಮುಟ್ಟಾದ, ಧಾಂಡಿಗನೊಬ್ಬನು ಅತ್ತ ಬಂದನು. ಅವನು ಬರುತ್ತಲೇ, ಮೂವರೂ ಎದ್ದು ಕೂತರು.

ಭಾಗವತರು:- ಯಾರೋ ಅದು?

ಬಂದವನು :- ನಾನು.

ಭಾಗವತರು:- ‘ನಾನು’ ಎಂದರೆ?

ಬಂದವನು :- ನನ್ನ ಗುರುತಿಲ್ಲವೇ? ನಾನು, ಬೊಗ್ಗು.

ಭಾಗವತರು:- ಏನು ಬೇಕು? ಸಿಹಿಯಾಳ, ಎಲೆ, ಅಡಿಕೆ, ಅವಲಕ್ಕಿ........?

ಬಂದವನು :- ಅವುಗಳಿಗಾಗಿ ಇಲ್ಲಿಗೆ ಬರಬೇಕೆ? ಮುರಿದ ಗಾಡಿಯಲ್ಲಿದ್ದ ಪ್ರಯಾಣಿಕರು ಇಲ್ಲಿಗೆ ಬಂದುದನ್ನು ತಿಳಿದು, ಇತ್ತ ಬಂದೆ.

ರಾಯರು(ಮುನ್ಸಿಫರು):- ನಮ್ಮಿಂದೇನಾಗಬೇಕು? ಅಥವಾ ನೀನೊಂದು ಹೊಸ ಗಾಡಿ ತರುವೆಯೋ ನಮ್ಮ ಸವಾರಿಗೆ? ಹಾಗಿದ್ದರೆ ಉಪಕಾರ.

ಬಂದವನು :- (ನಕ್ಕು) ಗಾಡಿಸವಾರಿಯ ಮಾತು ಹಾಗಿರಲಿ, - ನಿಮ್ಮ ಬಳಿಯಿರುವ ಹಣವನ್ನು ಇತ್ತ ಕೊಡಿ. ಹಾಗಾದಲ್ಲಿ ತೊಂದರೆ ಇಲ್ಲದೆ, ನಾನು ಹಿಂದೆ ಹೋಗುವೆನು. ಬೇಕಾದಾಗ ಗಾಡಿ ಮಾಡಿಕೊಂಡು ಸವಾರಿ ಮಾಡಿರಿ. ನನ್ನ ಅಡ್ಡಿಯಿಲ್ಲ.

ರಾಯರು :- ನಮ್ಮ ಬಳಿಯಲ್ಲಿ ಹಣವೇನೂ ಇಲ್ಲವಪ್ಪ! ಹಣವನ್ನು ಮೊದಲೇ ನಾವು ಹೋಗುವಲ್ಲಿಗೆ ಕಳುಹಿದ್ದೇವೆ. ಅಮಾವಾಸ್ಯೆ ರಾತ್ರಿಪ್ರಯಾಣ ಮಾಡುವವರು ನಾವಿಬ್ಬರೇ ಇರುತ್ತಾ, ಹಣದ ಕಂಟಕವನ್ನೂ ಕಟ್ಟಿಕೊಳ್ಳುವೆವೇ? ನಿನಗೆ ಅಷ್ಟು ತಿಳಿಯದೇ? ಇದೋ, ಇದು ನಮ್ಮ ಬಟ್ಟೆ, ಹಾಸುಗೆ, ಇತ್ಯಾದಿ; ಇದು ಪುಸ್ತಕಗಳ ಪೆಟ್ಟಿಗೆ. ಇದು ದೇವರ ಪೂಜೆಯ ಕರಡಿಗೆ.

ಬಂದವನು ಒಂದೊಂದನ್ನೇ ಕಣ್ಣಿಟ್ಟು ನೋಡುತ್ತಿದ್ದನು. ಈಗ ಕರಡಿಗೆಯ ಮೇಲೆ ಕಣ್ಣಾರಿದನು ಅವನ ದೃಷ್ಟಿಯು ಮುಂದಕ್ಕೆ ಚಲಿಸಲಿಲ್ಲ. ಟಪ್ಪನೆ ಅದನ್ನು ಕಸುಕೊಂಡನು. ಕರಡಿಗೆಯೊಳಗೆ ಇದ್ದ ಚಿನ್ನದ ವಿಗ್ರಹ, ಅದರ ರತ್ನಾಭರಣಾದಿಗಳು ಎಲ್ಲವನ್ನೂ ನೋಡಿದನು.

ಭಾಗವತರು:- ಅದೋ, ಬೊಗ್ಗು, ನೀನು ಇತರ ಕಳ್ಳರ ಹಾಗೆ ಕಳ್ಳನಲ್ಲ ಎನ್ನುತ್ತಾರೆ. ದೇವರು, ಧರ್ಮ, ಬಡವರು, ಅನಾಥರು, ಮೊದಲಾದವರಲ್ಲಿ ವಿಶೇಷ ಶ್ರದ್ಧೆಯುಳ್ಳವನಂತೆ. ಊಟ ಹಾಕಿದವರನ್ನು ಮರೆವವನಲ್ಲನಂತೆ. ಧನಿಗಳನ್ನು ಕದ್ದು ದರಿದ್ರರಿಗೆ ಧನ ಕೊಡುವವನಂತೆ. ಅದು ದೇವರ ವಿಗ್ರಹ, ದೇವರ ಆಭರಣಗಳು, ಅವನ್ನು ಕೊಳ್ಳೆ ಹೊಡೆಯುವುದೇ?............"

ಕಠಿಣಚಿತ್ತನಾದ ಕೇಡಿ ಬೊಗ್ಗುವು ಈ ಮಾತುಗಳನ್ನು ಲಕ್ಷಿಸುವುದಿಲ್ಲ. ಅವನು ತನ್ನ ಶರ್ತವನ್ನು ಮುಂದಿಡುತ್ತಾನೆ- "ಇನ್ನೊಂದು ತಾಸಿನೊಳಗಾಗಿ ಇವರು ಹೊಸ ಗಾಡಿ ತರಲಿ. ಇವರಿಗೆ ಅಪಾಯವೇನೂ ಇಲ್ಲದಂತೆ ಇವರು ಗಾಡಿ ಹತ್ತಿ ಹೋಗಬಹುದು. ನಾನು ಈ ಕರಡಿಗೆಯೊಡನೆ ಮರೆಯಾಗುವೆನು. ಇಲ್ಲದಿದ್ದಲ್ಲಿ

ಇವರಿಗೆ ಇಲ್ಲೇ ಬಿದ್ದು ಸಾಯುವ ಹಾಗೆ ಬಡಿಯುವೆನು. ನೀವ್ಯಾರೂ ಮಾತ್ತೆತ್ತ ಕೂಡದು. ಅತ್ತಿತ್ತ ಹೋಗಲೂ ಕೂಡದು. ಅಂಗಡಿಯವರೇ! ನೀವು ಈ ಊರಲ್ಲಿ ಪರಿಚಿತರು. ನೀವು ಗಾಡಿ ತರಹೋದರೆ ಪಠೇಲರಲ್ಲಿಗೆ ಅಥವಾ ಇನ್ನೆಲ್ಲಿಗಾದರೂ ಹೋಗಿ ಜನಕೂಡಿಸಿ ತರುವಿರಿ. ಈ ಮುದುಕರಾಗಲಿ ಇವರಾಗಲಿ ಹೋಗಲಿ. ಅವರಿಗೊಂದು ಲಾಟಾನು ಕೊಡಿರಿ. ಒಬ್ಬರು ಹೋಗಲಿ. ಇನ್ನೊಬ್ಬರು ಇಲ್ಲೇ ಇರಲಿ. ಒಂದು ತಾಸಿನೊಳಗೆ ಗಾಡಿ ತಂದರೆ ಅವರಿಬ್ಬರೂ ಸುರಕ್ಷಿತವಾಗಿ ಹೊರಡಲಿ. ಗಾಡಿ ಇಲ್ಲವಾದರೂ ಮರಳದೆ ಇದ್ದರೆ, ಇಲ್ಲಿ ಉಳಿದವರ ಕಾಲು ಮುರಿದುಹಾಕುವೆನು. ಗಾಡಿ ಇಲ್ಲದೆ ಮರಳಿದರೆ ನೀವು ಮೂವರನ್ನೂ ಇಲ್ಲಿ ಮರಗಳಿಗೆ ಕಟ್ಟಿಹಾಕಿ ಬಾಯಲ್ಲಿ ಬಟ್ಟೆ ತುರುಕಿಸಿಟ್ಟು ಬಾಯಿಕಟ್ಟಿ ಹೊರಡುವೆನು. ಹುಂ. ಇಷ್ಟೆ ನನ್ನ ದಯೆ."

ಆಗ ಮತ್ತೇನು ಮಾಡುವುದು? ರಾಯರು ಹೊರಟರು. "ಆಗಾಗ ಓಡಿದರು. ಒಂದು ಮೈಲು ಸಾಗಿತು. ದಾರಿಯುದ್ದಕ್ಕೂ, ಸಾಲು ಮರಗಳೂ ಅವುಗಳ ಹಿಂದೆ ಕಾಡೂ ಹೊರತು ಒಂದು ಅಂಗಡಿಯೂ ಇಲ್ಲ. ಅಲ್ಲೇ ಒಂದು ಭೂತದ ಗುಡಿ. ಅದಕ್ಕೆ ಬಾಗಿಲುಗಳಿಲ್ಲ. ದೊಡ್ಡದೊಂದು ಹುತ್ತವು ಎತ್ತರಕ್ಕೆ ಬೆಳೆದಿರಲು, ಅದಕ್ಕೆ ಒತ್ತಾಗಿ ಒಂದಾಳೆತ್ತರದ ಗೋಡೆಗಳನ್ನಿಟ್ಟು ಕಟ್ಟಿದ ಗುಡಿ! ಉದ್ದವಾದೊಂದು ಹುಲಿಯ ಗೊಂಬೆಯಿದೆ. ಅದರ ಬಣ್ಣ ಮಾಸಿ ಹೋಗಿದೆ. ಲಾಟಾನಿನ ಬೆಳಕಿಗೆ ಅದು ಒಂದು ಬಗೆಯಾಗಿ, ವಿಕಟವಾಗಿ, ವಿಕಾರವಾಗಿ, ಅಸಹ್ಯವಾಗಿ ಕಾಣುತ್ತಿದೆ. ರಾಯರು ಫಕ್ಕನೆ ದಿಗಿಲುಗೊಂಡರು. ಮೆಲ್ಲನೆ ಗರ್ಜಿಸಿದಂತಾಯಿತು. ರಾಯರ ಕಾಲು ತಡೆಯಿತು. ಗರ್ಜನೆ ಕರ್ಕಶವಾಗಿದ್ದಿತು; ಹತ್ತಿರಕ್ಕೆ ಬಂದಂತಾಯಿತು. ಇನ್ನಷ್ಟು ಕಾಲದಲ್ಲಿ, ದಾರಿಯಲ್ಲಿ ತನಗೆದುರಾಗಿ ಗರ್ಜನೆ ಸಮೀಪಕ್ಕೆ ಬರುತ್ತಿದೆ. ಗುಡಿಯಾಚೆಗೆ ಮಾರ್ಗವು ಅರ್ಧವೃತ್ತದಂತಾಗಿ ತಿರುಗಿದೆ. ಜನರ ಸುಳಿದಾಟವಿಲ್ಲ. ಗರ್ಜನೆ ತೀರ ಹತ್ತಿರದಿಂದ ಕೇಳಿಸಿತು. ಓಹೋ, ಅದೊಂದು ಗಾಡಿ. ಎರಡೆತ್ತಿನ ಗಾಡಿ. ಗಾಡಿ ತುಂಬ ಹುಲ್ಲಿದೆ. ಗಾಡಿಗೆ ಲಾಟಾನು ಮಾತ್ರವಿಲ್ಲ. ಗಾಡಿಯವನು ಧೀರನು, ಒಟ್ಟಾಳು. ಕೈಕೋಲಿಂದ ಹೊಡೆಯದೆಯೇ, ಆ ಇಳಿಜಾರಿನಲ್ಲಿ ಎತ್ತನ್ನು ಮೆಲ್ಲನೆ ನಡೆಯಿಸುತ್ತಾನೆ. ಗರ್ಜನೆಯು 'ಬೀರಿ'ಯ ಧ್ವನಿ."

ರಾಯರು ಗಾಡಿಯವನೊಡನೆ ಸಂಕ್ಷಿಪ್ತವಾಗಿ ಎಲ್ಲವನ್ನೂ ವಿವರಿಸಿ, ಅವನ ಸಹಾಯವನ್ನು ಬೇಡಿದರು. ಅವನು ಕೂಡಲೇ ರಾಯರನ್ನು ಗಾಡಿಯಲ್ಲಿ ಕುಳ್ಳಿರಿಸಿ, ಗಾಡಿಯನ್ನು ಓಡಿಸಿದನು. ಅಂಗಡಿಯಲ್ಲಿ ಉರಿಯುತ್ತಿದ್ದ ದೀಪದ ಬೆಳಕನ್ನು ದೂರದಿಂದಲೇ ಕಂಡ ಅವನು ಗಾಡಿಯನ್ನು ನಿಲ್ಲಿಸಿ, ತಾನೊಬ್ಬನೇ ಅಂಗಡಿಯ ಕಡೆಗೆ ನಡೆದನು.

ಅಂಗಡಿಗೆ ಹೋದವನು ಆರ್ಥಾಣೆಯ ವ್ಯಾಪಾರ ಬೇಕೆಂದು ಹಟಹಿಡಿದನು. "ಈಗ ವ್ಯಾಪಾರವಿಲ್ಲ" ಎಂದು ಕೇಡಿಯು ಇವನಿಗೆ ಗದರಿಸಿದನು. ಅಷ್ಟರಲ್ಲಿ ಶರ್ತದ ಸಮಯ ಕಳೆದ ಕಾರಣ, ಕೇಡಿಯು ವೃದ್ಧರ ಕಾಲಿಗೆ ಹೊಡೆಯಲು ತನ್ನ ದೊಣ್ಣೆ

ಎತ್ತಿದನು. ಆ ಕೂಡಲೇ ಗಾಡಿಯುವನು ತನ್ನ ಕೋಲಿನಿಂದ ಕೇಡಿಯ ಕುತ್ತಿಗೆಗೆ ಬಲವಾಗಿ ಹೊಡೆದನು. ಈ ಅನಿರೀಕ್ಷಿತ ಧಾಳಿಯಿಂದ ಕೇಡಿಯು ತತ್ತರಿಸಿಹೋದನು. ಒಂದೆರಡು ನಿಮಿಷಗಳಲ್ಲೇ ಗಾಡಿಯುವನು ಅವನ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿದನು. ಅನಂತರ ಕವಚಿಬಿದ್ದ ಗಾಡಿಗೆ ಅವನನ್ನು ಕೊಂಡೊಯ್ದು ಅದರೊಳಗೆ ಒರಗಿಸಿ, ಇತರರೂ ಸುಲಭವಾಗಿ ಬಿಡಿಸಲಾರದ ರೀತಿಯಲ್ಲಿ ಅವನನ್ನು ಚೆನ್ನಾಗಿ ಬಿಗಿದುಬಿಟ್ಟನು.

ಇಷ್ಟು ಮಾಡಿದ ನಂತರ, ರಾಯರನ್ನು ಮತ್ತು ಅವರ ತಂದೆಯನ್ನು ತನ್ನ ಗಾಡಿಯಲ್ಲಿ ಕುಳ್ಳಿರಿಸಿ ಮಂಗಳೂರಿನ ಕಡೆ ಗಾಡಿಯನ್ನು ಓಡಿಸಿದನು. ಬೆಳಗಾಗುವ ಹೊತ್ತಿಗೆ ಗಾಡಿ ಮಂಗಳೂರಿನ ಗೇಟಿನ ಬಳಿ ಮುಟ್ಟಿತು. ಅಲ್ಲಿ ಅವರನ್ನು ಇಳಿಸಿದ ಅವನು, "ಈಗ, ನಾನು ತಮ್ಮನ್ನು ಈ ಗಾಡಿಯಲ್ಲಿ ಕೂಡ್ರಿಸಿ, ಇಲ್ಲಿಯ ತನಕ ತಂದು ಮುಟ್ಟಿಸಿದುದಕ್ಕೂ, ದಾರಿಯಲ್ಲಿ ಆ ಕೇಡಿ ಬೊಗ್ಗುವಿನಿಂದಾದ ವಿಪತ್ತಿನಲ್ಲಿ ನಾನು ತಮಗೆ ನೆರವಾದುದಕ್ಕೂ, ಪಠೇಲರಿಗೆ ಒಂದು ಪತ್ರ ಬರೆದುಕೊಟ್ಟರೆ ಸರಿ. ಗಾಡಿಯ ಬಾಡಿಗೆ ಕೊಟ್ಟುದುದರಲ್ಲಿ, ಗಾಡಿಯ ಯಜಮಾನರಾದ ಆ ಪಠೇಲರಿಗೆಷ್ಟು ಎಂದು ತಿಳಿಸಿರಿ. ಉಳಿದುದೆಲ್ಲ ಈ ಎತ್ತುಗಳಿಗೆ! ನನಗೆ ಒಂದು ಕಾಸೂ ಅಗತ್ಯವಿಲ್ಲ." ಅವನು ಅಪೇಕ್ಷಿಸಿದಂತೆ ರಾಯರು ಅವನಿಗೆ ಪತ್ರ ಬರೆದುಕೊಟ್ಟರು. ಅನಂತರ ಮಂಗಳೂರಿಗೆ ಹೋಗಲಿರುವ ಬಾಡಿಗೆ ಗಾಡಿಯೊಂದರಲ್ಲಿ ಅವರನ್ನು ಕುಳ್ಳಿರಿಸಿ, ಇಬ್ಬರಿಗೂ ನಮಸ್ಕಾರ ಮಾಡಿ, ತಾನು ಬಂದ ದಾರಿಯಲ್ಲೇ ಹಿಂತಿರುಗಿದನು.

ಇಲ್ಲಿಯೇ ಈ ಕತೆ ಮುಗಿಯುತ್ತಿದ್ದಲ್ಲಿ, ಇದೇನು ಮಹಾಕತೆ? ಎಂದು ನೀವು ಕೇಳಬಹುದಿತ್ತು. ಕತೆಯು ಇನ್ನೂ ಮುಗಿದಿಲ್ಲ. ಸ್ವಲ್ಪ ಮಾತ್ರ ಉಳಿದಿದೆ. ಆದರೆ ಎಂಥ ಅನಿರೀಕ್ಷಿತ ತಿರುವನ್ನು ಅದು ಪಡೆಯುತ್ತದೆ! ಕತೆಯ ಅಂತ್ಯವನ್ನು ಕಾಮತರ ಮಾತುಗಳಲ್ಲಿಯೇ ಕೇಳಿತಿಳಿಯಬೇಕು.

"ಯಥಾಕಾಲದಲ್ಲಿ ರಾಯರು ಮಂಗಳೂರಿಗೂ, ಅಲ್ಲಿಂದ ತಮಗೆ ವರ್ಗವಾದ ಊರಿಗೂ ತಲಪಿದರು. ಕವಚಿಬಿದ್ದ ಗಾಡಿಯಲ್ಲಿ ಕಟ್ಟಿಕ್ಕಿದ ಕೇಡಿಗೆ ಏಳು ವರ್ಷದ ಕಠಿಣ ಸಜೆಯಾಯಿತು. ಆ ಮೊಕದ್ದಮೆಯ ವಾರ್ತೆಯನ್ನು ಪತ್ರಿಕೆಯಲ್ಲಿ ರಾಯರು ಓದಿದರು.

ಆಗತಾನೇ ಅವರಿಗೆ ಗೊತ್ತು, ತಮ್ಮನ್ನು 'ಕೇಡಿಬೊಗ್ಗು' ಎಂಬವನ ಬಾಯಿಂದ ತಪ್ಪಿಸಿ, ಮಂಗಳೂರಿಗೆ ತಲಪಿಸಿದ ಎರಡನೆಯ ಗಾಡಿಯುವನು, ಅಂದಿನ ರಾತ್ರಿಯೊಳಗೆ ಆ ಊರ ಪಠೇಲರಲ್ಲಿ ತನ್ನ ವಸತಿಯ ಹಾಜರಿ ಕೊಡಬೇಕಾಗಿದ್ದ, ಕಣ್ಣಾನೂರಿಂದ ಬಿಡುಗಡೆ ಹೊಂದಿದ ಬೊಗ್ಗು ಮಹಾಶಯನೆಂದು!"

ಕಾಮತರು ಒಬ್ಬ ಉತ್ತಮ ಗದ್ಯ ಲೇಖಕರು ಎಂಬುದನ್ನು ಈ ಕತೆಯಲ್ಲಿ ಬರುವ ಎರಡು ವರ್ಣನೆಗಳು ಸ್ಪಷ್ಟಪಡಿಸುತ್ತವೆ.

ಸೊಗಸೆನಿಸುವಾಗ, ರಾತ್ರಿ ಹೊತ್ತಿನಲ್ಲಿ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುವಾಗ ಆಗುವ ಅನುಭವದ ವರ್ಣನೆ. "ಆ ಕಾಲದ ಪಕ್ಕಿಗಳನ್ನು ಅನುಭವಿಸಿದವರಿಗೇ ಆ ಹಾದಿಯ ಸುಖ ಗೊತ್ತು. ಅದರಲ್ಲೂ ಬೇಸಿಗೆಯ ಬೇಗೆಯಲ್ಲಿ ಬೇರೆ; ಮಳೆಗಾಲದ ಇರುಳಲ್ಲಿ ಕೆಸರುಗದ್ದೆಯಂತೆ ತೋರುವಾಗ ಬೇರೆ. ಇಂತಹ ಮಾರ್ಗದಲ್ಲಿ ಎರಡೆತ್ತಿನ ಗಾಡಿ ಹತ್ತಿ ರಾತ್ರಿ ಸವಾರಿ ಮಾಡಲಿದ್ದರೆ, - ಅದರಲ್ಲೂ ಜತೆಯಲ್ಲಿ ಸಮವಯ, ಬಳಿಯಲ್ಲಿ ಭಾವ, ರಾತ್ರಿಯಲ್ಲಿ ಹುಣ್ಣಿಮೆಯ ಬೆಳ್ದಿಂಗಳು ಇರುವಾಗ,–ನೂರು ಸೂಡಿ ಬೈಹುಲ್ಲಿನ ಹಾಸಿಗೆಯ ಮೇಲೆ ಚೊಕ್ಕವಾಗಿ ಬಿಡಿಸಿದ ಕೇದಗೆಗರಿಯ ಚಾಪೆಯ ಮೇಲಿನ ಆಸನಶಯನಗಳ ವೈಭವ,–ಒಂದು ಸಲ ಇಳಿಜಾರು ದೊರೆತೊಡನೆ ಬಂಡಿಯಾಳು ಗಾಡಿ ನಿಲ್ಲಿಸಿ, ಅದರಡಿಯಲ್ಲಿ ಒಂದು ಹಗ್ಗಕ್ಕೆ ಸಿಕ್ಕಿಸಿದ ತುಂಡು ಕೋಲನ್ನು ತಿರುಪಿ ಚಕ್ರಗಳಿಗೊಂದು ಮರದ ತುಂಡು ಒತ್ತುವಂತೆ ಮಾಡುವ ವಿಧಾನದಿಂದ ಪುನಃ ಎತ್ತು ಗಾಡಿಯೆಳೆದೊಡನೆ ಸವಾರಿ ಮಾಡುವವರ ದೇಹದಲ್ಲೆಲ್ಲ ಒಂದು ಬಗೆಯ ವಿದ್ಯುತ್ತು ಹರಿದಂತಾಗುವ ರೋಮಾಂಚನಕಾರಿ ಚಮತ್ಕಾರ,– ಎತ್ತಿಗೆ ಹುರುಳಿಯಿಡಲು ಅದನ್ನು ಬೇಯಿಸುವ ಖಾಲಿಡಬ್ಬಿಗಳು ಗಾಡಿಯ ಕೆಳಗೆ ತೂಗುತ್ತ ಅತ್ತಿತ್ತ ಗೂಟಗಳಿಗೆ ತಗಲಿ ಆಗುವ ಜಾಗಟೆಯ ನಿನಾದಾನಂದ,– ನಿದ್ರಿಸಿದಲ್ಲಿ ತೂಕಡಿಸುವ ಹಾಗೆಯೇ ಕಿವಿಯನ್ನು ಇರಿಯುವ 'ಬೀರಿ'ಯ ಉರುಳಾಟದ ಚೀತ್ಕೃತಿಯು, ಯಾವ ಇಲೆಕ್ಟ್ರಿಕ್ ಹೋರ್ನಿಗಿಂತಲೂ ಹೆಚ್ಚಾಗಿ ಆರ್ಭಟಿಸುತ್ತ, ಭೂತಗಳನ್ನು ಉಚ್ಚಾಟನೆಗೊಳಿಸಿ, ದಾರಿಯುದ್ದಕ್ಕೂ ಇರುವ ಕಾಡುಗಳಲ್ಲಿನ ಹುಲಿಗಳಲ್ಲಿ ದಿಗಿಲನ್ನು ಹಬ್ಬಿಸುವ, ವೈಚಿತ್ರ್ಯ,- ಆ ಹೋರ್ನಿನ ಜತೆಗೆ ಸಮತಾನವಾಗಿ ಬಂಡಿಯಾಳಿನ 'ಓ ಓ' ಪಲ್ಲವಿಯ ಆಲಾಪನೆ,–ತಾಸಿಗೆ ಮೂರು ಮೈಲುಗಳ ಸರಾಸರಿಯ ನಡಿಗೆಯಿಂದ ಊರಿಂದೂರಿಗೆ ಸೇರುವ ವಿಲಾಸ,–ಇದನ್ನೆಲ್ಲ ಬಲ್ಲವರೇ ಬಲ್ಲರು,–ಪರಮಾತ್ಮನನ್ನು ಬಲ್ಲವರ ಹಾಗೆ!"

ಕಾಮತರ ಬರೆಹದಲ್ಲಿನ ಬೆಳಗಿನ ವರ್ಣನೆಯನ್ನು ಗಮನಿಸೋಣ-"ಅದು ಉಷಃಕಾಲ. ರಾತ್ರಿಯಲ್ಲಿ ನಿದ್ದೆ ಇರಲಿ, ಇಲ್ಲದಿರಲಿ, ಈ ಮುಹೂರ್ತದ ತಂಗಾಳಿ ಎಂತಹವನಲ್ಲೂ ನವಚೇತನವನ್ನುಂಟುಮಾಡುವುದು. ನಕ್ಷತ್ರಗಳು ಒಂದೊಂದಾಗಿ ಅಡಗತೊಡಗಿದುವು. ಪ್ರಾತಃಸ್ಮರಣೆಗೆ ಪಂಚಪತಿವ್ರತೆಯರ ಸ್ತೋತ್ರವಾಗಲೆಂದೇನೋ, ಹಕ್ಕಿಗಳಲ್ಲಿ ಒಂದು 'ಸೀ-ತಾ' ಎನ್ನುವುದು; ಆಗ ಕೇಳಿಸುವುದೆಲ್ಲವೂ ಪಂಚಮ ಸ್ವರಗಳ ಇಂಚರಗಳೇ. ದೂರದಲ್ಲಿರುವ ಆ ಕಡಲನ್ನು ನೋಡಿರಿ; ಆಕಾಶವು ಕೆಳಕ್ಕಿಳಿಯುತ್ತ ಬಂದಂತೆ, ವಾಯುರೂಪದಿಂದ ದ್ರವರೂಪವಾಯಿತೋ ಎನ್ನಿಸುವಂತಿದೆ. ಮೋಡಗಳನ್ನು ನೋಡಿರಿ; ಯಾವ ಯಾವ ಸ್ವರ್ಗವಾಸಿಗಳು ರಾತ್ರಿಯಲ್ಲಿ ಪವಡಿಸಿದ ಹಾಸುಗೆಗಳೋ ಎನ್ನುವಂತಿದೆ. ಸೂರ್ಯಕಿರಣಗಳು ಬೆಳ್ಳಗಾಗಿ ತೋರುವುದಾದರೆ, ಈ ಮೋಡಗಳಲ್ಲಿ ಆ ಬಿಳುಪಿನೊಳಗೆ ಸೇರಿರುವ ಇತರ ಬಣ್ಣಗಳೆಲ್ಲ ಒಂದೊಂದಾಗಿ ಕ್ಷಣಕ್ಕೊಮ್ಮೆ ತೋರುತ್ತಿವೆ. ಭೂಮಿಯು ನಿರ್ಜೀವ ಪದಾರ್ಥ,

ಜಡಮಣ್ಣು ಎಂದು ಹೇಳುವವರು ಬೆಳಿಗ್ಗಿನ ಜ್ಞಾನದಲ್ಲಿ ಅವಳ ಸೊಬಗನ್ನು ಕಂಡರೆ, ಅವಳಲ್ಲಿ ಚೇತನವು ಮಿತಿಮೀರಿರುವುದರಿಂದಲೇ ವಿರುದ್ಧಭಾವದಿಂದ ಜಡವಾಗಿ ಕಾಣುವಳೋ ಎಂದು ಭಾಸವಾಗುವಂತಿದೆ. ಸೂರ್ಯನನ್ನು ಬರಿಗಣ್ಣಿಂದ ನೋಡಬೇಕಾದರೆ, ಆಗತಾನೇ ಮನುಷ್ಯನ ಮಹತ್ವವು ಆಗಣ ಆತನ ನೆರಳಲ್ಲೇ ವ್ಯಕ್ತ,- ಅದೆಷ್ಟು ದೂರ! ಎಷ್ಟು ಭೂಭಾಗವನ್ನೂ ಇತರ ಸೃಷ್ಟಿಪದಾರ್ಥಗಳನ್ನೂ ತನ್ನ ಆಶ್ರಯದಲ್ಲಿ ಇರಗೊಳಿಸಬಲ್ಲುದು! ಸೃಷ್ಟಿಯ ಸೊಬಗು, ಮನುಷ್ಯನ ಮಹತ್ವ, ವಿಶ್ವದಲ್ಲಿನ ಪ್ರತಿಯೊಂದರಲ್ಲಿರುವ ಚೇತನದ ಪ್ರಕಾಶ, ಜೀವನದ ಉದ್ದೇಶ, ಎಲ್ಲವನ್ನೂ ಪ್ರಾತಃಕಾಲದಲ್ಲಿ ಪಂಚಭೂತಗಳು ಮೌನವಾಗಿ ಸಾರದೆ ಇಲ್ಲ."

ಪುರಾಣದ ಕತೆಗಳು:

ಕಾಮತರು ಮಕ್ಕಳಿಗಾಗಿ ಪುರಾಣದ ಕತೆಗಳ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಚಂಡಕೌಶಿಕ, ನಾಗಾನಂದ, ಕರ್ಣನ ಕಥೆ, ರನ್ನನ ಗದಾಯುದ್ಧ ಕಥೆ, ಆರ್ಯಮತೋಪಾಖ್ಯಾನ (ಇದರಲ್ಲಿ ಪುರಾಣದ 31 ಕತೆಗಳು ಸರಳ ಹಾಗೂ ಪರಿಣಾಮಕಾರಿಯಾದ ಭಾಷೆಯಲ್ಲಿವೆ), ಭೀಷ್ಮನ ಕಥೆ, ಯಾದವಕೃಷ್ಣ, ಬಾಲಕರ ಮಹಾಭಾರತ - ಇವೇ ಆ ಪುಸ್ತಕಗಳು. ಪುರಾಣದ ಕತೆಗಳನ್ನು ಹೇಳುವಾಗಲೂ ಗಂಭೀರವಾದ ಸಾಮಾಜಿಕ ಚಿಂತನ ಇಲ್ಲದಿಲ್ಲ. ಹನುಮಂತನ ಕತೆಯಲ್ಲಿ, ಹನುಮಂತನ ಮಾತುಗಳನ್ನು ಕೇಳಿರಿ - "ಈ ಮದ್ಯದ ದೆಸೆಯಿಂದ ವಾನರರೆಂದು ಕರೆದುಕೊಳ್ಳುವವರು ಇನ್ನೂ ನರರಾಗದೆ ಇರುವರು. ಮದ್ಯದಲ್ಲಿ ಆಸಕ್ತಿ ಇಲ್ಲದ ರಾಮನು ಧೀರನರನು ಎನಿಸಿಕೊಂಡಿರುವನು. ಮದ್ಯಾಸಕ್ತಿಯೇ ಮುಕ್ತಿನಾಶಕ್ಕೆ ಹೇತುವು. ಎಷ್ಟು ಕಾಲಕ್ಕೆ ಮದ್ಯಪಾನಕ್ಕೆ ಯಾವನೊಬ್ಬನು ದಾಸನೊ, ಅವನೆಂದೂ ರಾಜನಾಗನು, ಯೋಗ್ಯನೆನಿಸನು."

"ಕರ್ಣನ ಕಥೆ" ನನಗೆ ತುಂಬ ಮೆಚ್ಚುಗೆಯಾದ ಪುಸ್ತಕ. ಈ ಕುರಿತು ಈಗಾಗಲೇ ನಾನು ಪ್ರಸ್ತಾವಿಸಿದ್ದೇನೆ.

"ರನ್ನನ ಗದಾಯುದ್ಧ ಕಥೆ" ತುಂಬ ಜನಪ್ರಿಯವಾಗಿದ್ದ ಪುಸ್ತಕ. ಇದು ಪಠ್ಯಪುಸ್ತಕವೂ ಆಗಿತ್ತು. ಇದರ ಬಗ್ಗೆ ಶ್ರೀ ಎಂ. ರಾಮಚಂದ್ರ ಅವರು ಈ ರೀತಿ ಬರೆದಿದ್ದಾರೆ - "ಪದ್ಯ ಭಾಷೆಯಲ್ಲಿ ರನ್ನನು ಯಾವ ಮೇಲ್ಮೆಯನ್ನು ಮೆರೆದಿರುವನೋ ಅದಕ್ಕೆ ಒಂದಿಷ್ಟು ಅಪಚಾರವಾಗದಂತೆ, ಅದರ ಗುರುತ್ವಕ್ಕೆ ತಕ್ಕಂತೆ ಅಷ್ಟೇ ಮೇಲು ಮಟ್ಟದ, ಅಷ್ಟೇ ಗಂಭೀರ ಮನೋಹರವಾದ ಗದ್ಯ ಭಾಷೆಯು ಬಳಕೆಯಾಗಿದೆ. ಈ ಸಂಗ್ರಹದಲ್ಲಿ - ರನ್ನನು ಹೊಸಗನ್ನಡ ಕವಿಯಾಗಿರುತ್ತಿದ್ದರೆ ಅವನ ಗದ್ಯ ಭಾಷೆ ಹೀಗೆಯೇ ಇರುತ್ತಿತ್ತೇನೋ! ಒಂದೆರಡು ಉದಾಹರಣೆಗಳನ್ನು ನೋಡಿರಿ. '........ ಭೀಮನ ಕೈಯಲ್ಲಿ ಭೀಕರವಾಗಿ ತೋರುವ ಆ ಗದೆಯು ಜೆಡಗೇನು? ಮದ್ದಾನೆಗಳ ಮಸ್ತಕಗಳನ್ನು ಪುಡಿಗೈವ ಸಿಂಹರಾಜನ ತೋಳೋ? ಅಥವಾ ಉನ್ನತವಾದ ಪರ್ವತಗಳ

ನೆತ್ತಿಯನ್ನು ಸೀಳುವ ಸಿಡಿಲಿನ ಗುಂಡೋ?....... ಅವನದೊಂದೇ ಏಟಿಗೆ ಕುರುಕ್ಷೇತ್ರದಲ್ಲಿ ಹಣ್ಣಾಗಿ, ಹೆಣವಾಗಿ, ಪಿಶಾಚಿಗಳಿಗೆ ತುತ್ತಾಗಿ, ನುಚ್ಚುನೂರಾಗಿ, ಹುಡಿಹುಡಿಯಾಗಿ, ಅಟ್ಟಿಕಟ್ಟಿ ಬಿದ್ದಿರುವ ಹಗೆಗಳ ಹಿಂಡು, ಭೀಮನ ವೀರತ್ವವನ್ನು ಪ್ರಪಂಚಕ್ಕೆ ಸಾರುವುದಲ್ಲವೇ?" ('ಬಾಡದ ಹೂವುಗಳು'. ಪುಟ 28)

ಕಾದಂಬರಿಗಳು:

ಕಾಮತರು "ಕುಮಾರ ಭೀಮಸಿಂಹ" ಎಂಬ ಐತಿಹಾಸಿಕ ಕಾದಂಬರಿಯನ್ನೂ, "ಪ್ರೇಮಪಿಪಾಸೆ" ಮತ್ತು "ಕನ್ಯಾಬಲಿ" ಎಂಬ ಸಾಮಾಜಿಕ ಕಾದಂಬರಿಗಳನ್ನೂ ಬರೆದಿದ್ದಾರೆ. ಈ ಕಾದಂಬರಿಗಳು ನನಗೆ ಸಿಕ್ಕಿಲ್ಲ. 1914ರ ಎಪ್ರಿಲ್ 4 ರಂದು ಪ್ರಕಟನಾದ "ಚಂದ್ರಹಾಸಾಭ್ಯುದಯು" ಎಂಬ ಸಂಗೀತ ನಾಟಕದ ಕೊನೆಯಲ್ಲಿ ಕಾಮತರು ಈ ಕೃತಿಗಳ ಬಗ್ಗೆ ಈ ರೀತಿ ಬರೆದಿದ್ದಾರೆ–

ಕುಮಾರ ಭೀಮಸಿಂಹ:

ರಾಜಪುತ್ರರ ಶೌರ್ಯೋದಾರ್ಯಗಳನ್ನು ಪ್ರದರ್ಶಿಸುವ ಐತಿಹಾಸಿಕ ಕಾದಂಬರಿ. ಮೈಸೂರಿನ 'ಕಾದಂಬರೀ ಸಂಗ್ರಹ'ದಲ್ಲಿ ಪ್ರಕಟಿಸಲ್ಪಟ್ಟದು. ಪ್ರೌಢಶೈಲಿಯಿಂದ ಬರೆಯಲ್ಪಟ್ಟದು. ಬೆಲೆ ೧ ಆಣೆ.

ಪ್ರೇಮಪಿಪಾಸೆ:

ಸಂಸಾರದಲ್ಲಿ ತಲೆದೋರುತ್ತಲಿರುವ ಪ್ರೇಮ-ಪ್ರಣಯಗಳ ವಿವಿಧ ಛಾಯೆಗಳಿಂದ ಅಂಕಿಸಲ್ಪಟ್ಟಿರುವ ಮನೋರಂಜಕ ಕಾದಂಬರಿ. ಸಾಮಾನ್ಯ ಭಾಷೆಯಿಂದಲೇ ಬರೆಯಲ್ಪಟ್ಟದು. 'ಕಾದಂಬರೀ ಸಂಗ್ರಹ'ದಲ್ಲಿ ಪ್ರಕಾಶಿತವಾದುದು. ಬೆಲೆ ೩ ಆಣೆ.

ಕನ್ಯಾಬಲಿ:

ಕುಮಾರಿ ಸ್ನೇಹಲತಾ ದೇವಿಯು, ಈಗಣ ಸಮಾಜವ್ಯಾಧಿಯಾದ ವರದಕ್ಷಿಣೆಯ ಹಾವಳಿಯನ್ನು ಆವ ಬಗೆಯಿಂದ ತಡೆಗಟ್ಟಿದಳೆಂಬುದು ವಾಚಕರೆಲ್ಲರಿಗೂ ಇಷ್ಟುಕಾಲದೊಳಗಾಗಿ ತಿಳಿಯದೆ ಇರದು. ಈ ಕಾದಂಬರಿಯನ್ನೊಮ್ಮೆ ಓದಿನೋಡಿರಿ. ವರದಕ್ಷಿಣೆಯ ಪೀಡೆಯ ಕರ್ಕಶ ಚಿತ್ರವು ಆಗ ತಾನೆ ತಿಳಿಯಬರುವುದು. ಮೈಸೂರಿನ ಹನುಮಾನ್ ಕಂಪೆನಿಯವರ 'ಮಧುರವಾಣಿ'ಯಲ್ಲಿ ಪ್ರಕಾಶಿತವಾದುದು. ಬೆಲೆ ೬ ಆಣೆಗಳು. ಪ್ರಥಮ ಮುದ್ರಣವು ಫೆಬ್ರುವರಿಯಲ್ಲಿಯೇ ಪ್ರಕಟಿಸಲ್ಪಟ್ಟಿದ್ದರೂ ಕೆಲವೇ ಪ್ರತಿಗಳಿವೆ!!

ಇತಿಹಾಸ ಗ್ರಂಥ:

ಕಾಮತರು "ಮಹಾರಾಷ್ಟ್ರ" ಎಂಬ ಒಂದು ಉತ್ತಮ ಇತಿಹಾಸ ಗ್ರಂಥವನ್ನು ಬರೆದಿದ್ದಾರೆ. ಈ ಗ್ರಂಥವು ಇಂದಿನ ಇತಿಹಾಸಜ್ಞರಿಗೂ ಮಾದರಿಯಾಗಿದೆ. ಈ ಗ್ರಂಥದ "ವಿಜ್ಞಾಪನೆ"ಯಲ್ಲಿ ಆವರು ಹೇಳುತ್ತಾರೆ-"ಇತಿಹಾಸವೆಂದರೆ,- ರಾಜರ

ಜೀವನ ವೃತ್ತಾಂತಮಾತ್ರವೆ ಅಲ್ಲ; ಜನಾಂಗದ ಹೃದಯದಲ್ಲಿ ಮೂಡಿದ ನಾನಾ ಅಭಿಪ್ರಾಯಗಳೂ ಉದ್ದೇಶಗಳೂ, ಸಾಧನೆಗಳೂ, ಅವುಗಳಿಗೆ ಉಂಟಾದ ನಾನಾ ತಿಕ್ಕಾಟಗಳೂ, ಮತ್ತವುಗಳು ಇಡಿ ಜನಾಂಗಕ್ಕೆ ಉಂಟುಮಾಡಿದ ಫಲಾಫಲಗಳೂ ಕೂಡಿದ ಚರಿತ್ರವಾದರೆ ಮಾತ್ರ ಇತಿಹಾಸವು ಅಲ್ಲಿ ಸಿದ್ಧವಾಗುವುದು."

ಕಾಮತರು ಇತಿಹಾಸವನ್ನು ಹೇಗೆ ಚಿತ್ರಿಸಿದ್ದಾರೆ? ಒಂದು ಉದಾಹರಣೆ ನೋಡಿ- "ಆರ್ಯರೂ ಅನಾರ್ಯರೂ ಸೇರಿ, ಭಾರತೀಯ ಹಿಂದೂ ಸಮಾಜವು ಉಂಟಾಗಿದೆ. ಉತ್ತರ ಭಾರತದಲ್ಲಿ ಆರ್ಯರ ಪ್ರಾಬಲ್ಯವು ಹೆಚ್ಚಾಗಿರುವುದರಿಂದ ಅಲ್ಲಿ ಎಷ್ಟೋ ಬಗೆಯ ಜಾತಿಗಳುಂಟಾಗಿವೆ, ಜಾತಿ ಭೇದವು ಅಲ್ಲಿ ಉಗ್ರವಾಗಿದೆ. ದಕ್ಷಿಣ ಭಾರತದ ದಕ್ಷಿಣ ಅಂಶವು ಅನಾರ್ಯ ಪ್ರಧಾನವಾದುದು; ಅಲ್ಲಿಯೂ ಜಾತಿಭೇದದ ಉಗ್ರತೆಯು ಪ್ರಬಲವಾಗಿದೆ. ಆದರೆ ಮಹಾರಾಷ್ಟ್ರವು ಇವೆರಡೂ ಪ್ರದೇಶಗಳ ಮಧ್ಯದಲ್ಲಿರುವ ಕಾರಣ. ಆರ್ಯರೂ ಅನಾರ್ಯರೂ ಇಲ್ಲಿ ಸಮ್ಮಿಲಿತರಾಗಿ, ಸ್ಮಾರ್ತರೂ ವೈಷ್ಣವರೂ ಹತ್ತಿರ ಹತ್ತಿರವಾಗಿದ್ದರೂ, ಒಂದು ಸಂಪ್ರದಾಯವು, ಮತ್ತೊಂದನ್ನು ಧಿಕ್ಕರಿಸುವುದಿಲ್ಲ. ಇಂಥ ನಡತೆಯು ಭಾರತವರ್ಷದ ಮಿಕ್ಕ ಪ್ರಾಂತ್ಯಗಳಲ್ಲಿ ತೀರ ಕಡಿಮೆ. ಒಟ್ಟಿನ ಮೇಲೆ, ದೇಶವಾಸಿಗಳಲ್ಲಿ ಶೂದ್ರರು ಒಂದು ಬಗೆಯ ಕ್ಷತ್ರಿಯರೊ ವೈಶ್ಯರೊ ಎಂಬಂತೆ ಕಾಣಿಸಿಕೊಳ್ಳುವರಲ್ಲದೆ ಕೇವಲ ಪತಿತರಂತೆ ತೋರುವುದಿಲ್ಲ. ಇಲ್ಲಿ ಕೆಳಜಾತಿಯ ಸಾಧುಗಳೂ ಕವಿಗಳೂ, ದೇಶವಾಸಿಗಳೆಲ್ಲರ ಶ್ರದ್ಧೆಯನ್ನೂ ಭಕ್ತಿಯನ್ನೂ ಪಡೆದಿರುವರು. ಸಮಾಜದ ಎಲ್ಲ ಅಂಗಗಳೂ ಹೀಗೆ ಒಮ್ಮನಸ್ಸಿಂದ ದೇಶಹಿತಕ್ಕಾಗಿ ಹೇಚಾಡುವಾಗ, ಹಿಂದೂ ಮುಸಲ್ಮಾನರೂ ಈ ದೇಶದಲ್ಲಿ ಪರಸ್ಪರ ಪ್ರೀತಿಯಿಂದ ಬದುಕುವ ಹಾಗೆ ಇತರ ಪ್ರಾಂತಗಳಲ್ಲಿ ಕಾಣುವುದಿಲ್ಲ."

ನಾಟಕಗಳು:

ಕಾಮತರು ಸುಮಾರು ಅರುವತ್ತು ನಾಟಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಹೆಚ್ಚಿನವು ಏಕಾಂಕಗಳು. ಕವನ, ಸಣ್ಣಕತೆಗಳಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ನಾಟಕಗಳನ್ನೇ ಅವರು ಬರೆದಿದ್ದರೆಂಬುದು ಗಮನಾರ್ಹ. ದಕ್ಷಿಣ ಕನ್ನಡ ಜಿಲ್ಲೆಯ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ನಾಟಕಗಳನ್ನಾಡಿಸುವ ಪದ್ಧತಿಯನ್ನು ಆರಂಭಿಸಿದವರೇ ಕಾಮತರು.

ಕಾಮತರ ಹೆಚ್ಚಿನ ನಾಟಕಗಳು ಈಗ ಸಿಗುತ್ತಿಲ್ಲ. 'ಮೌರ್ಯ ಸಿಂಹಾಸನ' ಮತ್ತು 'ಉದ್ಧಾರಾನಂದ' ನಾಟಕಗಳ ಕುರಿತು ಈ ಮೊದಲೆ ಬರೆದಿದ್ದೇನೆ. 'ಅಂದಿನ ಆವೂರು' ಗ್ರಂಥದಲ್ಲಿ ಶ್ರೀ ಜಿ. ಆರ್. ಶೆಣೈ ಅವರು ಕಾಮತರ ನಾಟಕಗಳ ಬಗ್ಗೆ ಈ ರೀತಿ ಬರೆದಿದ್ದಾರೆ- "........ಅವರ ನಾಟಕಗಳನ್ನು ಅನುಕ್ರಮವಾಗಿ ಓದಿದರೆ, ಲೇಖಕರ ಅನುಕ್ರಮವಾದ ಮನಃಸ್ಥಿತಿಯು ವಿಶದವಾಗಿ ತಿಳಿಯುವುದು. ಏಕೆಂದರೆ ಇತರ ಬರಹಗಳಿಗಿಂತಲೂ ಈ ನಾಟಕಗಳೇ ಅವರ ಮನಸ್ಸನ್ನು ಪ್ರತಿಬಿಂಬಿಸಿ

ತೋರಿಸುತ್ತವೆ. ಇದರಿಂದ ನಾಟಕ ಬರೆಯುವುದು ಅವರಿಗೆ ಹೆಚ್ಚಾಗಿ ಪ್ರಿಯಕರವಾಗಿದ್ದಿತೆಂದೂ ಅದು ಅವರಿಗೆ ಒಂದು ಕುಶಲತೆಯಾಗಿದ್ದಿತೆಂದೂ ತಿಳಿಯಬಹುದು. ಅವರ ನಾಟಕಗಳಲ್ಲಿನ ಭಾಷಾಸರಳತೆ, ಅವುಗಳಲ್ಲಿನ ಅನುಪಮವಾದ ಶಬ್ದಲಿಪಿ. ಅಲ್ಲಲ್ಲಿ ಕಾಣಿಸುವ ಸೂಕ್ಷ್ಮವಾದ ನಗೆಯ ಮಾತುಗಳು, ಭಾಷಾಗಾಂಭೀರ್ಯ, ಉತ್ಕೃಷ್ಟವಾದ ಆಧುನಿಕ ವಿಚಾರ-ಇವು ಅವರ ವೈಶಿಷ್ಟ್ಯಗಳಾಗಿವೆ. ಅವರ ಪಾತ್ರ ರಚನೆಯು ತಡೆಯಿಲ್ಲದುದಾಗಿದ್ದು, ಹಳೆಯ ಉಡುಪುಗಳಲ್ಲಿದ್ದರೂ ಅತಿ ಆಧುನಿಕವೆನ್ನಬಹುದು. ಪ್ರತಿಯೊಂದು ನಾಟಕವನ್ನು ಓದಿ ಮುಗಿಸುವಾಗ ಓದುಗನ ಮನಸ್ಸಿನಲ್ಲಿ ಒಂದು ಸಮಸ್ಯೆಯನ್ನು ಹುಟ್ಟಿಸಿಬಿಡುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ, ಇವೆಲ್ಲ ನಾಟಕಗಳು ಶ್ರೀ ಕಾಮತರ ಅಸಾಮಾನ್ಯ ಪ್ರತಿಭೆಯನ್ನು ಸ್ಪಷ್ಟವಾಗಿ ಬೆಳಕಿಗೆ ತರುತ್ತವೆ. ಕೆಲವು ನಾಟಕಗಳ ವಸ್ತು ವಿಷಯಗಳನ್ನು ಅವರು ಬೇರೆ ಭಾಷೆಗಳಿಂದ ಎತ್ತಿರುವರಾದರೂ, ಕಾಮತರ ಕೈಯಲ್ಲಿ ಅವು ಬೇರೆ ರೂಪವನ್ನು ತಾಳಿ ಕೇವಲ ಹೊಸದಾಗಿ ಮಾರ್ಪಟ್ಟಿರುವುವು. ಬೇರೆ ಭಾಷೆಯ ನಾಟಕಗಳಿಂದ ಉದ್ಧೃತವಾದ ವಿಷಯಗಳನ್ನು ನಮ್ಮ ನಾಡು, ನಮ್ಮ ಜನರು, ನಮ್ಮ ಸ್ಥಿತಿಗತಿ, ಇವುಗಳಿಗೆ ಅನುಕೂಲಿಸುವಂತೆ ಮಾಡಿ ಅದಕ್ಕೆ ಬೇಕಾದ ತನ್ನದೇ ಒಂದು ರೀತಿಯ ಸೊಬಗನ್ನು ಕೊಟ್ಟು, ತನ್ನ ಲೋಕಾನುಭವವನ್ನು ಅದರಲ್ಲಿ ತುಂಬಿಸಿ, ಭಾಷಾಂತರಗಳೆಂದು ಕರೆಯಲ್ಪಡಲು ಅಸಾಧ್ಯವಾಗುವಂತೆ ನವೀನ ನಾಟಕಗಳನ್ನೇ ರಚಿಸಿಬಿಡುತ್ತಿದ್ದರು. ………………ಪೌರಾಣಿಕ ಕಥೆಗಳು ಅವರ ಸುಂದರವಾದ ಹಲವು ಏಕಾಂಕ ನಾಟಕಗಳ ವಸ್ತುಗಳಾಗಿವೆ. ಅವುಗಳಲ್ಲಿ ಚಂದ್ರಹಾಸಾಭ್ಯುದಯ, ತುಕಾರಾಮ, ಮಧುಸೂದನ, ಅರ್ಜುನನ ಚಾತುರ್ಮಾಸ, ದಾಮಾಜಿಪಂತ, ನಾಗಾನಂದ, ಮಧ್ಯಮವ್ಯಾಯೋಗ, ಸಾಧನೆ, ಕೃಷ್ಣಸಂಧಾನ, ಚಿತ್ರಾಂಗದ ಇವು ಕೆಲವಾಗಿವೆ. ಇವುಗಳ ಕಥೆಗಳು ಪುರಾಣಕಾಲದ್ದಾಗಿದ್ದರೂ, ಶ್ರೀ ಕಾಮತರು ಅವುಗಳೆಲ್ಲವುಗಳಿಗೆ ಆಧುನಿಕ ರೂಪವನ್ನು ಕೊಟ್ಟು, ಅವನ್ನು ಬರೆವ ಕಾಲದಲ್ಲಿ ನಮ್ಮ ದೇಶದಲ್ಲಿ ತಲೆದೋರಿದ ಸಮಸ್ಯೆಗಳನ್ನು ಅವು ಪ್ರತಿಪಾದಿಸುವಂತೆ ಬರೆದಿರುವರು……………

ಅವರು ಬರೆದ ಸಾಮಾಜಿಕ ನಾಟಕಗಳಲ್ಲಿ ಮುಖ್ಯವಾದುವುಗಳೆಂದರೆ ‘ಶುಕ ಶಿಕ್ಷಣ’, ‘ಯೋಗಕ್ಷೇಮ’, ‘ವಜ್ರಮುಷ್ಟಿ’, ‘ಮರ್ಜಿ’, ‘ದಿವಂಗತ’, ‘ಉದ್ಧಾರಾನಂದ’, ‘ಪುನರ್ಜನ್ಮ’, ‘ವಂತಿಗೆ’, ‘ಸದ್ರಿಸುಬ್ಬ’ ಮತ್ತು ‘ಮೆಂಬರು’. ಚಂದಾ ಎತ್ತಲು ಮತ್ತು ಧರ್ಮಕಾರ್ಯಗಳಿಗೆ ಹಣ ವಸೂಲು ಮಾಡಲು ತಿರುಗುವವರ ಪೀಡೆಯನ್ನು ವಿನೋದಕರವಾದ ರೀತಿಯಲ್ಲಿ ‘ವಂತಿಗೆ’ ನಾಟಕದಲ್ಲಿ ಚಿತ್ರಿಸಿರುತ್ತಾರೆ. ಕೋರ್ಟಿನಲ್ಲಿ ಕಕ್ಷಿಗಾರರು ಪಡುವ ಕಷ್ಟನಷ್ಟಗಳ ಚಿತ್ರವನ್ನು ‘ಸದ್ರಿಸುಬ್ಬ’ ನಾಟಕದಲ್ಲಿ ಕಾಣಬಹುದು. ಇನ್ನು, ‘ದಿವಂಗತ’ದಲ್ಲಿ ಅಕ್ಕತಂಗಿಯರು, ಸತ್ತಿರುವಳೆಂದು ಭಾವಿಸಲ್ಪಟ್ಟ ತಮ್ಮ ತಾಯಿಯ ಸಂಪತ್ತನ್ನು ಹಂಚಿಕೊಳ್ಳಲು ಹೂಡಿದ ಕಾಳಗವನ್ನು ವರ್ಣಿಸಿರುವರು. ‘ಉದ್ಧಾರಾನಂದ’ವು ಲೇ ಮಿಸರೇಬಲ್ ಪುಸ್ತಕದ ಪ್ರಸಿದ್ಧವಾದ

'ಬಿಷಪ್ಸ್ ಕೇಂಡಲ್ ಸ್ಟಿಕ್ಸ್' ಎಂಬ ವಸ್ತುವಿನಿಂದ ಎತ್ತಿದ್ದಾಗಿದೆ. ಮಿತ್ರಮಂಡಲಿಯ ಪುಸ್ತಕವೊಂದರಲ್ಲಿ ಪ್ರಕಟವಾದ 'ಪುನರ್ಜನ್ಮ'ವು ಅತ್ಯಂತ ಸರಸವಾದ ವಿನೋದಾಭಿನಯವಾಗಿದ್ದು ಕನ್ನಡ ಸಾಹಿತ್ಯದಲ್ಲಿ ಬಹು ಅಪರೂಪವಾದುದಾಗಿದೆ. ಅದು ಒಬ್ಬ ಲೋಭಿಯ ಅವಸ್ಥೆಯನ್ನು ತೋರಿಸುವ ನಾಟಕವು. ಅವನ ಲೋಭವನ್ನು ಹೋಗಲಾಡಿಸಲು ಅವನ ಬಂಧುಬಾಂಧವರು ಒಳಸಂಚು ನಡೆಸಿ ಅವನು ಸತ್ತಿರುವನೆಂದು ಪ್ರಕಟಿಸಿ ಅವನ ಕಣ್ಮುಂದೆಯೇ ಅವನ ಉತ್ತರಕ್ರಿಯೆಗಳ ಅಣಿಮಾಡುತ್ತಾರೆ. ಮೊದಲಿಂದ ಕೊನೆಯತನಕವೂ ನಕ್ಕುನಕ್ಕು ಸಾಕಾಗುತ್ತದೆ................'ಮೆಂಬರು' ನಾಟಕವು ಚುನಾವಣೆಯ ಸಮಸ್ಯೆಯನ್ನು ಬಿಡಿಸುವ ವಿನೋದಾತ್ಮಕ ನಾಟಕವಾಗಿರುವುದು. 'ವಜ್ರಮುಷ್ಟಿ'ಯು ಗುರುಗೋವಿಂದನ ಜೀವನದೊಳಗಿನ ಒಂದು ಘಟನೆಯನ್ನು ಬೆಳೆಯಿಸಿ ಮಾಡಿದ ಕೃತಿಯು. ಇದರಲ್ಲಿ ಹರಿಜನೋದ್ಧಾರ ಮತ್ತು ಅಸ್ಪೃಶ್ಯತಾನಿವಾರಣೆಯ ಕುರಿತು ಉತ್ಕೃಷ್ಟವಾದ ಪ್ರತಿಪಾದನೆಯಿದೆ.

ಶ್ರೀ ಕಾಮತರು ಕೆಲವು ಐತಿಹಾಸಿಕ ನಾಟಕಗಳನ್ನು ಬರೆದಿರುವರು. 'ಮೌರ್ಯ ಸಿಂಹಾಸನ', 'ಪ್ರತಾಪಸಿಂಹ', 'ಚಂದ್ರರಾವ್ ಮೋರೆ' ಇವುಗಳಲ್ಲಿ ಐತಿಹಾಸಿಕ ನೇಪಥ್ಯದಲ್ಲಿ ಬರೆಯುತ್ತಿದ್ದ ಕಾಲದ ಪ್ರಸ್ತುತ ಸಮಸ್ಯೆಗಳನ್ನು ಸಾಧ್ಯವಿದ್ದಷ್ಟು ಚರ್ಚಿಸಲು ಪ್ರಯತ್ನಿಸಿದ್ದಾರೆ.. ಮರಗಳೂ, ಮೃಗಗಳೂ ರಂಗದ ಮೇಲೆ ಬಂದು ತಮ್ಮ ಸಮಸ್ಯೆಗಳನ್ನು ಕುರಿತು ತಾವೇ ಮಾತಾಡುವಂತೆ ಮಾಡಿದ ಮೊದಲನೇ ಲೇಖಕರು ಶ್ರೀ ಕಾಮತರೆಂದು ಹೇಳಬೇಕು. ಇವುಗಳಲ್ಲಿ 'ಯುದ್ಧಾಂತ್ಯ'ವು ಒಂದು ಉತ್ಕೃಷ್ಟವಾದ ನಾಟಕವಾಗಿದೆ. ಪ್ರಬಲವಾದ ಯುದ್ಧವಾಗಿ ಮಾನವಕುಲವೇ ಅಳಿದ ಮೇಲೆ ಕಾಡೊಂದರಲ್ಲಿ ಹುಲಿ, ಸಿಂಹ, ಹಾವು, ಎತ್ತು, ಕುದುರೆ, ನಾಯಿ, ಮಂಗ, ರೋಗಾಣು ಇವು ಕಲೆತು ಮಾನವನ ಬುದ್ಧಿಗೇಡಿತನಕ್ಕಾಗಿ ಒಬ್ಬರನ್ನೊಬ್ಬರು ಕೊಂದುಕೊಂಡುದಕ್ಕಾಗಿ, ನಕ್ಕು ಆನಂದಿಸುತ್ತವೆ. ತಮ್ಮನ್ನು ಹಿಂಸಿಸುತ್ತಿದ್ದ, ತಮ್ಮ ಮೇಲೆ ಆಧಿಪತ್ಯವನ್ನು ನಡೆಸುತ್ತಿದ್ದ ಮಾನವಕುಲವೇ ನಿರ್ನಾಮವಾದುದಕ್ಕಾಗಿ ಒಂದು ಪೀಡೆ ನಿವಾರಣೆಯಾಯಿತೆನ್ನುವುವು. ನಾಯಿ ಮಾತ್ರ ಮನುಷ್ಯನಿಗಾಗಿ ಮರುಗುತ್ತಿದೆ. ಇದು ಶ್ರೀ ಕಾಮತರು ಬರೆದ ಉದಾತ್ತ ನಾಟಕಗಳಲ್ಲೊಂದು. ಇದನ್ನು ಅವರು ಕಳೆದ ದಶಂಬರದಲ್ಲಿ ಬರೆದುದರಿಂದ ಇದು ಅವರ ನುರಿತ ಅನುಭವದ ತಿರುಳೆಂದರೂ ಸಲ್ಲುವುದು................................"

"ಯುದ್ಧಾಂತ್ಯ" ನಾಟಕದ ವಸ್ತುವು ನನಗೆ ತುಂಬ ಮೆಚ್ಚುಗೆಯಾಗಿದೆ. ಜಗತ್ತಿನ ದಿನನಿತ್ಯದ ಆಗುಹೋಗುಗಳಿಗೆ ಕಾಮತರು ಅದೆಷ್ಟು ಕ್ಷಿಪ್ರವಾಗಿ ಸ್ಪಂದಿಸುತ್ತಿದ್ದರು ಎಂಬುದಕ್ಕೆ ಇದೂ ಒಂದು ಉತ್ತಮ ನಿದರ್ಶನ. ಮೊದಲ ಜಾಗತಿಕ ಯುದ್ಧದಿಂದಾದ ಅನಾಹುತವನ್ನು ಬಲ್ಲ ಕಾಮತರಿಗೆ ದ್ವಿತೀಯ ಜಾಗತಿಕ ಯುದ್ಧವು ಆರಂಭವಾದಾಗ, ಸಹಜವಾಗಿಯೇ ಆತಂಕವಾಗಿದ್ದಿರಬೇಕು. ಮನುಷ್ಯನು,

ಬುದ್ಧಿವಂತನೆನಿಸಿಯೂ, ಇತಿಹಾಸದಿಂದ ಏನೇನನ್ನೂ ಕಲಿಯುವುದಿಲ್ಲವೇಕೆ? ಎಂದು ಅವರು ಚಿಂತನ ಮಾಡಿದ್ದಿರಬೇಕು. ಹುಚ್ಚು ಆವೇಶದಲ್ಲಿ, ಪ್ರತಿಷ್ಠೆಯ ಹಂಬಲದಿಂದ ವಿವಿಧ ದೇಶಗಳು ಪರಸ್ಪರ ಯುದ್ಧ ಮಾಡಲು ತೊಡಗಿದರೆ, ಅದು ಮಾನವ ಜನಾಂಗದ ನಾಶದಲ್ಲೇ ಅಂತ್ಯವಾಗಲಿದೆ ಎಂದು ಅವರು ತರ್ಕಿಸಿರಬೇಕು. ದ್ವಿತೀಯ ಜಾಗತಿಕ ಯುದ್ಧ ಅಂತ್ಯಗೊಂಡದ್ದಾದರೂ ಹೇಗೆ? ಜಪಾನಿನ ನಾಗಸಾಕಿ ಮತ್ತು ಹಿರೋಶಿಮಾ ನಗರಗಳ ಮೇಲೆ ಪರಮಾಣು ಬಾಂಬುಗಳನ್ನು ಸ್ಫೋಟಿಸಿದ ಮೇಲಲ್ಲವೇ? ಇಂದು ಜಗತ್ತಿನ ರಾಷ್ಟ್ರಗಳು ಎರಡು ಗುಂಪುಗಳಲ್ಲಿ ಹಂಚಿಹೋಗಿ, ಯುದ್ಧದಲ್ಲಿ ತೊಡಗಿದರೆ? ಕಾಮತರ 'ಯುದ್ಧಾಂತ್ಯ'ವೇ ಬಹುಮಟ್ಟಿಗೆ ನಡೆಯುವುದು! ಒಂದು ಸಣ್ಣ ವ್ಯತ್ಯಾಸ ವೆಂದರೆ, ಮಾನವ ಜನಾಂಗದ ನಾಶವನ್ನು ಕುರಿತು ಹರ್ಷಿಸಲು ಯಾವೊಂದು ಪ್ರಾಣಿಯೂ ಉಳಿಯದು; ಅಷ್ಟೆ!

ಕಾಮತರು 1940ರಲ್ಲಿಯೇ ನಿಧನರಾದರು. ಆಗಿನ್ನೂ, ಅಮೇರಿಕದಲ್ಲಿನ ಕೆಲವು ವಿಜ್ಞಾನಿಗಳನ್ನು ಬಿಟ್ಟರೆ, ಯಾರಿಗೂ ಪರಮಾಣು ಬಾಂಬಿನ ಕಲ್ಪನೆಯಿರಲಿಲ್ಲ. ಇಂಥ ಒಂದು ಮಾರಕ ಅಸ್ತ್ರವನ್ನು ವಿಜ್ಞಾನಿಗಳು ಬಹುಬೇಗನೆ ಸಂಶೋಧಿಸಬಹುದೆಂದು ಕಾಮತರು ಊಹಿಸಿರಬೇಕು. ಏನಿದ್ದರೂ, "ಬಾನಿನಾಜೆಗೆ ನೋಟ, ಯುಗದ ಕೊನೆಗೂ ಓಟ"ದ ಕಲ್ಪನೆಯಿದ್ದ ಸಾಹಿತಿಯಲ್ಲವೇ ಅವರು? ಒಂದನೆ ಪುಸ್ತಕದಲ್ಲಿ ಹುರುಳಿ ಭೀಮರಾವ್ ಅವರು 'ನಮ್ಮ ಜಿಲ್ಲೆಯ ಹಾಸ್ಯಸಂಪತ್ತು' ಎಂಬ ಲೇಖನದಲ್ಲಿ ಕಾಮತರ ಬಗ್ಗೆ ಈ ರೀತಿ ಬರೆದಿದ್ದಾರೆ – "ಶ್ರೀ ಪಂಜೆಯವರಂತೆ ದಿವಂಗತ ಶ್ರೀ ಎಂ. ಎನ್.ಕಾಮತರೂ ಹಾಸ್ಯರಸಭರಿತವಾದ ಲೇಖನ ಪ್ರಹಸನಗಳನ್ನು ಬರೆಯುವಲ್ಲಿ ಸಿದ್ಧ ಹಸ್ತರು; ನಿಸ್ಸೀಮರು; ನಿಪುಣರು. ಹಾಸ್ಯರಸದ ಕೊಪ್ಪರಿಗೆಯನ್ನೇ ಅವರು ಹುಟ್ಟು ವಾಗಲೇ ತಮ್ಮ ಜತೆಯಲ್ಲಿ ತಂದಿದ್ದರು. ಅವರ ಮಾತುಕತೆಗಳೂ ಹಾಗೆ; ಲೇಖನಗಳೂ ಹಾಗೆ. ಅಂಥ ಲೇಖನಾದಿಗಳನ್ನು ಅವರು ಬರೆದುದು ಒಂದೆರಡಲ್ಲ; ಹೇರಳ. 'ಕಂಠೀರವ', 'ಸ್ವದೇಶಾಭಿಮಾನಿ', 'ಭಾರತಿ', 'ಸ್ವದೇಶೀ ಪ್ರಚಾರಕ' ಮೊದಲಾದ ಹಲವಾರು ಪತ್ರಿಕೆಗಳಲ್ಲಿಯೂ ಅವರ ವಿನೋದ ಚಿತ್ರಗಳನ್ನೋದದವರಿಲ್ಲ. ಅವರ ಹಾಸ್ಯದ ಜಾಣ್ಮೆ, ಶೈಲಿಯ ಸೌಂದರ್ಯವನ್ನು ಯಾರೂ ಮೆಚ್ಚಬೇಕು. ಈ ಜಿಲ್ಲೆಯ ಹಾಸ್ಯಸಾಹಿತ್ಯಕ್ಕೆ ಅವರು ಅರ್ಪಿಸಿದ ಸೇವೆ ಮರೆಯತಕ್ಕುದಲ್ಲ. ಜಿಲ್ಲೆಯ ಹಾಸ್ಯ ಸಾಹಿತ್ಯ ಇವರಿಂದಲೂ ಬಹಳ ಮಟ್ಟಿಗೆ ಬೆಳೆದಿದೆ ಎಂಬುದಕ್ಕೆ ನಿದರ್ಶನವಾಗಿ 'ಮರ್ಜಿ' ಎಂಬ ಅವರ ಕೈವಾಡದ ಒಂದು ಮನೋಹರ ಪ್ರಹಸನದ ಒಂದು ದೃಶ್ಯವನ್ನು ಇಲ್ಲಿ ಉಲ್ಲೇಖಿಸಲಾಗುತ್ತಿದೆ.

[ಅದೊಬ್ಬ ಕಮಿಶನರ ಬಂಗಲೆ; ಕಮಿಶನರು ಮನೆಯಲ್ಲಿಲ್ಲ; ಬಂಗ್ಲೆಯ ಹೊರಗೆ ಹೆದ್ದಾರಿಯಲ್ಲಿ ಒಂದು ಗಾಡಿ ಬಂದು ನಿಂತು ಅದರಿಂದ ಒಬ್ಬ ತರುಣಿಯೂ ತರುಣನೂ ಇಳಿಯುವರು; ಏನೋ ತಮಾಷೆ ಮಾಡಬೇಕೆಂದು ಅವರು ತಮ್ಮಲ್ಲೇ ಮಾತಾಡಿ

ಕೊಂಡು, ಬಂಗ್ಲೆಗೆ ಬರುವರು; ಅಲ್ಲಿದ್ದ ಪೇದೆಯು ಕೈಯಲ್ಲಿ ಯಜಮಾನಿಗೊಪ್ಪಿಸಲು ತಮ್ಮರೆಡು ಕಾರ್ಡುಗಳನ್ನು ಕೊಡುವರು; ಪೇದೆ ಅವನ್ನು ಯಜಮಾನಿಗೊಪ್ಪಿಸುವನು; ಆಕೆ ಅವನ್ನು ತೆಗೆದುಕೊಳ್ಳುವಳು. ಇದಾ ಸನ್ನಿವೇಶ.]

ಸುನೀತಿ: (ಯಜಮಾನಿ. ಕಾರ್ಡುಗಳನ್ನು ಹಿಡಿದುಕೊಂಡು) ಬೆಳಿಗ್ಗೆ ಕೆಲಸ ತುಂಬ ಇದ್ದಾಗಲೇ ಇವರಾರಪ್ಪ? ಜನರಿಗೆ ಬುದ್ಧಿ ಎಂಬುದೇ ಇಲ್ಲವೇಕೆ? ನನ್ನ ಕನ್ನಡಕ ಎಲ್ಲಿದೆ? ದಾಸಿ ಹೋಗಮ್ಮ, ನನ್ನ ಕನ್ನಡಕವನ್ನೊಮ್ಮೆ ಹುಡುಕಿ ತಾ, ಈ ಕಾರ್ಡುಗಳನ್ನೋದಬೇಕಾಗಿದೆ.

ದಾಸಿ : (ಹುಡುಕಿ) ಹುಡುಕಿ ಹುಡುಕಿ ಸತ್ತೆನಮ್ಮ, ಸಿಕ್ಕಲಿಲ್ಲವಲ್ಲ! ಎಲ್ಲಿ ಹೋಯ್ತಮ್ಮ ನಿಮ್ಮ ಕನ್ನಡಕ?

ಸುನೀತಿ: ಹುಡುಕು; ಕನ್ನಡಿಬಳಿ, ಮೇಜಿನ ಮೇಲೆ, ಕಬಾಟಿನ ತಲೆಯ ಮೇಲೆ ಅಥವಾ ಮೇಜಿನ ಒಳಗೆ, ಕಸದ ಬುಟ್ಟಿಯಲ್ಲಿದ್ದರೂ ಇರಬಹುದು! ಅಲ್ಲೇ ಇರಬೇಕು, ಮತ್ತೆಲ್ಲಿಗೆ ತಾನೇ ಹೋದೀತು? (ಯಾರನ್ನೋ ಕರೆದು) ಯಾರಲ್ಲಿ? ಮತ್ತೊಂದು ನಾಯಿ ಬಗಳುತ್ತಿದೆ; ನೋಡು! ಒಡೆ ಅದರ ಮುಸುಡನ್ನು! ಎಲ್ಲಿಯಾದರೂ ಹಾಲುಮಡಿಕೆಗೆ ಬಾಯಿಯಿಕ್ಕೀತು.

ದಾಸಿ : (ಪುನಃ ಹುಡುಕಿ) ಸಿಕ್ಕಲಿಲ್ಲವಮ್ಮಾ! ಬೂಟ್ಸುಗಳೊಳಗೂ ಹುಡುಕಿ ನೋಡಿದೆನಮ್ಮ! ಕೊಡೆ ಬಿಡಿಸಿಯೂ ನೋಡಿದೆನಮ್ಮ! ಹುಡುಕುವುದಕ್ಕೇನೇನೂ ಉಳಿದಿಲ್ಲಮ್ಮ, ಆದರೂ ಸಿಕ್ಕಲಿಲ್ಲವಮ್ಮ!

ಸುನೀತಿ: ದಾಸಿ, ಹುಚ್ಚು ಹುಡುಗಿ! (ಯಾರನ್ನೋ ಕರೆದು) ಎಲೆ! ನಿನ್ನೆ ಬೆಣ್ಣೆಯೆಲ್ಲವನ್ನೂ ಮುಕ್ಕಿದೆ, ಆ ಬೆಕ್ಕು-ಅದೋ ಬಂತು, ಕೊಲ್ಲದನ್ನು ಕೊಲ್ಲು!

ಪೇದೆ : ಬೆಕ್ಕಿಲ್ಲಮ್ಮ ಅಲ್ಲಿ; ಅದು ಕಾಗೆ!

ಸುನೀತಿ: ಎಂದರೆ ನನಗೆ ಕಾಣದೆ? ಕಾಗೆ ಕಾ ಕಾ ಎಂದು ಕೂಗುವುದು; ಅದೂ ಈ ಬೆಕ್ಕಿನಂತೆ ಕಪ್ಪಾಗಿದೆ., ನಿಜ - ಬೆಕ್ಕನ್ನೋಡಿಸು.

ಪೇದೆ : (ಓಡಿ ಹೋಗಿ ಪುನಃ ಬಂದು) ಬೆಕ್ಕಿಲ್ಲಮ್ಮ.

ಸುನೀತಿ: ಬೆಕ್ಕಿಲ್ಲ? ನಿನಗೆ ಸಿಕ್ಕಿಲ್ಲ! ನೀನು ಯಾವ ಕೆಲಸಕ್ಕೂ ಬಾರದ ಮಲ್ಲನಯ್ಯ! ಜಗುಲಿಯ ಕಸಗುಡಿಸು - ನಡೆ, ಹೋಗು(ಹೋಗುವನು). ದಾಸೀ,ದಾಸೀ, ಸಿಕ್ಕಿತೇನೇ ಕನ್ನಡಕ? ಇದನ್ನೂ ನಾನೇ ಹುಡುಕಬೇಕೇ? (ಏಳುವಳು; ಆಗಲೆ ಕನ್ನಡಕವು ಗೂಡಿನೊಡನೆ ದೊಪ್ಪನೆ ಕೆಳಗೆ ಬೀಳುವುದು) ಇಲ್ಲಿದೆಯಲ್ಲ! ಆದರೂ ಆ ಹೆಂಗಸು ಇಡಿಯ ಮನೆಯನ್ನು ಹುಡುಕುತ್ತಿದ್ದಾಳೆ! ಕಣ್ಣಿಲ್ಲವೇ ಅವಳಿಗೆ! (ಕನ್ನಡಕವಿಟ್ಟುಕೊಂಡು ಕಾರ್ಡುಗಳನ್ನೋದುತ್ತ)

ಎಸ್. ರೋಯಿ, ಐ. ಸಿ. ಎಸ್! ಮಿಸ್ಟರ್ ಎಂಡ್ ಮಿಸೆಸ್ ರಾಯ್. ಇವರು ಯಾರಪ್ಪ?.... ಅಮ್ಮಯ್ಯಾ, ನನ್ನ ತಲೆ! ನಮ್ಮ ಶೀಲಾ ಸೌಮ್ಯರು! ಏನು ಆಟ ನೋಡಬಾರದೆ? ನಮ್ಮಲ್ಲಿಗೆ ಬಂದಿದ್ದು ಜಗುಲಿಯಲ್ಲೇ ನಿಂತಿದ್ದು ಕಾರ್ಡು ಕಳುಹಿಸಿಕೊಟ್ಟಿದ್ದಾರೆ! ಓಯ್ ಭಟ್ಟರೆ, ಜಮಾದಾರ, ದಾಸಿ ನೀವೆಲ್ಲ ಯಾವ ಮಸಣಕ್ಕೆ ನಡೆದಿರಿ? ಮಗಳೂ ಅಳಿಯನೂ ಹೊರಗೆ ನಿಂತಿದ್ದಾರೆ, ನೀವೆಲ್ಲ ಕುರುಡರಾಗಿ ಹೋದಿರೇನು?

[ಹೆಸರೆತ್ತಿದವರೆಲ್ಲ ಯಜಮಾನಿಯಿದ್ದಲ್ಲಿಗೆ ಓಡಿಬಂದರು. ದಾಸಿ ತರಕಾರಿ ಹೆಚ್ಚುತ್ತಿದ್ದವಳು ಕೈಯಲ್ಲಿ ಕತ್ತಿ, ಭಟ್ಟರು ಒಗ್ಗರಣೆ ಹಾಕುತ್ತಿದ್ದಂತೆ ಓಡಿ ಬಂದುದರಿಂದ ಅವರ ಕೈಯಲ್ಲಿ ಸೌಟು, ಮಾಲಿಯು ತೋಟದಲ್ಲೇನೋ ಅಗೆಯುತ್ತಿದ್ದವನು ಅವನ ಕೈಯಲ್ಲಿ ಗುದ್ದಲಿ, ಜಮಾದಾರ ಕಸಗುಡಿಸುತ್ತಿದ್ದವನು ಅವನ ಕೈಯಲ್ಲಿ ಕಸಬರಿಕೆ, ಇವುಗಳ ಸಮೇತ ಎಲ್ಲರೂ ಹಾಜರಾದರು.]

ಎಲ್ಲರೂ: ಏನಾಗಿದೆಯಮ್ಮ, ಅಯ್ಯೋ, ಏನಾಯಿತು?

ಸುನೀತಿ: ಆಗಿದೆ, ಆಗಿದೆ, ಆಗಿದೆ - ನಮ್ಮ ಪುತ್ರಿಯೂ ಅಳಿಯ ಬಾಬುನೂ ಹೊರಗೆ ನಿಂತೇ ಇದ್ದಾರೆ, ನೀವೆಲ್ಲರೂ ಗೊರಕೆ ಹೊಡೆಯುತ್ತ ನಿದ್ದೆ ಹೋಗಿದ್ದಿರೇ ಎಂತ?

ಎಲ್ಲರೂ: ಹೂಂ - ಹೂಂ - ಅವರೇ! ನಮ್ಮವರಲ್ಲದೆ ಆಚೆ ಮನೆಯ ಸುಬ್ಬಾ ಜೋಯಿಸರ ಮಗಳೂ ಅಳಿಯನೂ ಎಂದು ಹೇಳಿದೆಯೇನು?

[ಎಲ್ಲರೂ ಜಗಲಿಯ ಕಡೆ ನೋಡಿದರು; ಅಲ್ಲಿ ಯಾರೂ ಇದ್ದಿಲ್ಲ.]

ಪೇದೆ : ಅವರು ಎತ್ತಲೋ ಹೋದರಮ್ಮ!

ಸುನೀತಿ: ಇಲ್ಲ, ಇಲ್ಲ, ಚೆನ್ನಾಗಿ ಅತ್ತಿತ್ತ ಹುಡುಕು, ತಡಿ, ನಾನೇ ಹೋಗಿ ನೋಡುತ್ತೇನೆ.

[ಎಲ್ಲರೂ ಹೊರಗೆ ಬರುತ್ತಿದ್ದಂತೆ, ಒಳಕೋಣೆಯಿಂದ ಆಳಿಯ ಸೌಮ್ಯನೂ ಮಗಳು ಶೀಲಳೂ ನಗುತ್ತ ಹೊರಬರುವರು.]"

ಶ್ರೀಯುತ ಸುಧಾಂಶುಕುಮಾರ ಹಾಲದಾರ, ಐ.ಸಿ.ಎಸ್. ಇವರ ಲೇಖನದ ಆಧಾರದಿಂದ ಬರೆದುದಾಗಿ ಕೊನೆಯಲ್ಲಿ ಉಲ್ಲೇಖವಿರುವ 'ಮರ್ಜಿ!' [ನಾಲ್ಕು ದೃಶ್ಯಗಳಲ್ಲಿ ಒಂದು ಕಥೆ] ಎಂಬ ಒಂದಾಣೆಮಾಲೆಯಲ್ಲಿ ಅಚ್ಚಾದ ವಿನೋದಪ್ರಹಸನದ ಮೊದಲ ದೃಶ್ಯದ ಆರಂಭದಿಂದ ಪ್ರಸ್ತುತಭಾಗವನ್ನು ಆಯ್ದುಕೊಳ್ಳಲಾಗಿದೆ.

ಲಲಿತ ಪ್ರಬಂಧ

1936ರಲ್ಲಿ ಮಂಗಳೂರಿನ 'ಮಿತ್ರಮಂಡಲಿ'ಯು ಪ್ರಕಟಿಸಿದ 'ತರಂಗ' ಎಂಬ ಪ್ರಬಂಧ ಸಂಗ್ರಹಕ್ಕೆ ವಿಶೇಷ ಮಹತ್ವವಿದೆ. ಇದನ್ನು ಹೊಸಗನ್ನಡದ ಮೊದಲ ಪ್ರಬಂಧ ಸಂಕಲನವಾಗಿ ಪರಿಗಣಿಸಬಹುದು. ಈ ಸಂಗ್ರಹದ ಮೊದಲ ಪ್ರಬಂಧವೇ ಎಂ. ಎನ್. ಕಾಮತರ 'ನನ್ನ (ಅಥವಾ ನಿಮ್ಮ) ಕೊಡೆ'. ಇದರಲ್ಲಿ ಮೊದಲಿನಿಂದ ಕೊನೆಯವರೆಗೂ ತಿಳಿಹಾಸ್ಯವು ಒಂದೇ ರೀತಿಯಾಗಿ ಹರಿಯುವುದನ್ನು ಕಾಣಬಹುದು. ಈ ಪ್ರಬಂಧದ ಪ್ರಾರಂಭವನ್ನು ಗಮನಿಸೋಣ:

"ನಿಮ್ಮಂತೆಯೆ ನನಗೂ ಮಳೆಗಾಲವೆಂದರೆ ಒಗ್ಗುವುದಿಲ್ಲ; ಬಹಳ ಬೇಸರ. ಅಡ್ಡವಾಗಿ ಬೀಸಿ, ಮೇಲಿಂದ ಸುರಿದು,ನಮ್ಮನ್ನೆಲ್ಲ ಮಿಯಿಸಿ, ಯಾರ್‍ಯಾರ ಮನೆ ಹಟ್ಟಿ ಕೊಟ್ಟಿಗೆಗಳ ಮಾಡುಗಳ ಅಂಚಿನ ಆಶ್ರಯಕ್ಕಾಗಿ ಓಡಿಸುವ, ಆ ಮಳೆಗಾಲವನ್ನೆಲ್ಲ ತಾಜಾ ರಜಾಕಾಲವೆಂದು ನಿರ್ಧರಿಸಿದರೆ ನಷ್ಟವೇನಾದೀತು? ಸನ್ಯಾಸಿಗಳಿಗೇ ಎಂದೇನು, ನಮ್ಮೆಲ್ಲರಿಗೆ (ಬೇಸಾಯಿಗಳಲ್ಲದವರಿಗೆ) ಒಂದು ಚಾತುರ್ಮಾಸ ರಜಾವ್ರತವೆಂದು ಕಲ್ಪಿಸಿಕೊಟ್ಟರೆ ಅನ್ಯಾಯವಾದೀತೇ? ಆದರೆ, ರಜೆಗಳ ಮಾತೇ ಹೀಗೆ: ಅಗತ್ಯವಿದ್ದಾಗ ಸಿಗಲಾರದು; ಬೇಡ ಎಂದರೆ ಮೊದಲೇ ಗಜೇಟಿನಲ್ಲಿ ಪ್ರಕಟವಾಗಿ ಒತ್ತಾಯದಿಂದ ಮನೆಯಲ್ಲಿ ಕುಳ್ಳಿರಿಸುವರು. ರಜೆಗೂ ಸಜೆಗೂ ಸಂಬಂಧವಿದೆ. ಬೇಕಾದಾಗ ಸಿಕ್ಕದುದು ರಜೆ; ಬೇಡವಾದಾಗ ಸಿಗುವುದು ಸಜೆ."

ಕೊಡೆಯ ಬಗ್ಗೆ ಪೀಠಿಕೆ ಈ ರೀತಿ ಆರಂಭವಾಗುತ್ತದೆ–"ಎರಡು ಮಳೆ ಸುರಿಯಿತೋ, ನಾಯಿಕೊಡೆ, ಕಪ್ಪೆಕೊಡೆ, ಕಾಗೆಕೊಡೆ ಮೊದಲಾದ ಅಳಿಂಬೆಗಳು ತಲೆಯೆತ್ತುವುವು. ಮತ್ತೇನು ಮನುಷ್ಯನು ಕಡಿಮೆಯವನೇ? ಅವಸರವಸರವಾಗಿ ತನ್ನ ಕೊಡೆ ಎಲ್ಲಿದೆ ಎಂದು ಹುಡುಕುತ್ತಾ ಮನೆಯನ್ನೆಲ್ಲ ತಲೆಕೆಳಗಾಗುವಂತೆ ಮಗುಚುವನು. ಎಂಟು ತಿಂಗಳು ವಿರಹಜ್ವರ ಹಿಡಿದು ಮೂಲೆಪಾಲಾದ ಕೊಡೆಯು, ಜೀರ್ಣಶೀರ್ಣವಾಗಿ ಇದೇ ಮಳೆಗಾಲದ ನಾಲ್ಕು ತಿಂಗಳ ವಿಹಾರಕ್ಕಾಗಿ ನಮ್ಮ ಪಾಣಿಗ್ರಹಣ ಮಾಡುತ್ತಿದೆ. ಪರಂತು, ಎಲ್ಲ ವಧುಗಳಂತೆ, ವಿರಹಿಣಿಯಾದ ಕೊಡೆಯು ಕೈಹಿಡಿದವನ ತಲೆಯ ಮೇಲೂ ಕೆಲವು ಕಣ್ಣೀರು ತಟಕುಗಳನ್ನು, ಅಂತಹ ವಿರಹ ಕಾಲದಲ್ಲಿ ಮಳೆ ಸುರಿದರೆ ಸುರಿಸದೆ ಇಲ್ಲ. ಒಳ್ಳೆ ಬಲವಾಗಿ ಗಾಳಿ ಬೀಸುವಾಗ ಈ ಅಬಲೆಯು, ತನಗೆ ಇಷ್ಟು ದಿನ ದೊರೆತ ಅಲ್ಪ ಮರ್ಯಾದೆಗಾಗಿ ಪ್ರತೀಕಾರ ಮಾಡಲು, ಕೈಹಿಡಿದಾತನನ್ನು ಬಿಟ್ಟು, ಎತ್ತಲೋ ಹಾರಿ, ಮುರಿದು ಬೀಳುವುದೂ ಉಂಟು; ಅಥವಾ ಯಾವನೊಬ್ಬ ನವವಧು ನಿರೀಕ್ಷಕನ ಕೈಸೇರುವುದೂ ಉಂಟೆನ್ನುವ; ಆಗ ಅದೊಂದು ಪುನರ್ವಿವಾಹವಾಗುವುದು."

ತಮ್ಮ ಜೀವನಯಾನದಲ್ಲಿ ಅದೇ ಮೊದಲ ಬಾರಿಗೆ ಕ್ರಯಕೊಟ್ಟು ತಂದ ಒಂದು ಕೊಡೆಯ ಇತಿಹಾಸವನ್ನು ಅದೆಷ್ಟು ರಸವತ್ತಾಗಿ ಚಿತ್ರಿಸಿದ್ದಾರೆ. ನೋಡಿರಿ -

ಕೊಡೆಮಾರುವವನೊಡನೆ ಕೇಳುತ್ತೇನೆ - "ಯಾರಿಗೂ ಸಿಗಲಾರದ, ಹಡಗು, ರೈಲು ಮೋಟಾರು ಶಾಲೆ ಹೊಟೇಲು ಕಛೇರಿ ಅಂಗಡಿ ಇತ್ಯಾದಿಗಳಲ್ಲಿ ನನ್ನ ಕೈಬಿಟ್ಟು ಹೋಗಲಾರದ, ಮತ್ತೊಬ್ಬರು ಮುಟ್ಟಿದರೆ ಹುಚ್ಚುನಾಯಂತೆ, ಘಟಸರ್ಪದಂತೆ ಕಡಿಯುವ ಅಂತಹದೇನಾದರೂ ಒಂದು ಬಗೆಯ ಕೊಡೆಯುಂಟೇ?" 'ಸರಿ ಹೇಳಿದಿರಿ. ಇಕ್ಕೊಳ್ಳಿ, ಇದೇ ತಮಗೆ ಬೇಕಾದುದು. ಸಟಕ್ಕನೆ ತೆರೆಯಬಹುದು. ಪಟಕ್ಕನೆ ಮುಚ್ಚಬಹುದು, ನೋಡಿರಿ ಇದನ್ನು, ಹೀಗೆ' ಎನ್ನುತ್ತ, ಅವನು ಆ ಕೊಡೆಯ ಸಟಕ್ - ಪಟಕ್‌ಗಳನ್ನು ವಿವರಿಸಿದನು. ಆಲಿಬಾಬನು ಹೇಳಿದ್ದ 'ಸಿಸೇಮ ತೆರೆ' - 'ಸಿಸೇಮೆ ಮುಚ್ಚು' ಎಂಬಾ ಮಾತುಗಳನ್ನು ಕಾಸಿಮನು ಕಲಿತಂತೆ ಅವನಿಂದ ಈ ಸಟಕ್ - ಪಟಕ್‌ಗಳನ್ನು ಕಲಿತುಕೊಂಡೆನು, ಕೊಡೆಯನ್ನೂ ಕೊಂಡುಕೊಂಡೆನು; ಪಾಣಿಗ್ರಹಣವಾಯಿತು.

ಮುಂದೆ ನಾಲ್ಕಾರು ಅಂಗಡಿಗಳಿಂದ ನನ್ನ ಮನೆಗೆ ಬೇಕಾದ ಧಾನ್ಯಾದಿಗಳನ್ನು ಹತ್ತೆಂಟು ಕಟ್ಟುಗಳಲ್ಲಿ ಕಟ್ಟಿಸಿಕೊಂಡು, ಮನೆಗೆ ಮರಳಿದೆನು - ಚಿಕ್ಕ ಪುಟ್ಟ ಪಿಳ್ಳೆಗಳನ್ನು ಜತನದಲ್ಲಿ ನಡೆಯಿಸಿ ತರುವ ಹೇಂಟೆಯ ಹಾಗೆ.

ಕೊಡೆಯು, ಈ ಹೊಸ ಕೊಡೆಯು ಕೈಯಲ್ಲೇ ಇರುವಾಗ ಮಳೆಯ ಬೆದರಿಕೆ ಇದ್ದೀತೆ? ಹಾಗೆಂದು ನನ್ನ ಹೊಸ ಕೊಡೆಯನ್ನು ಬಿಡಿಸಿ ಎತ್ತಿ ಹಿಡಿದು ಪೇಟೆಯಲ್ಲೆಲ್ಲ ಪ್ರದರ್ಶಿಸುವುದೂ ಉತ್ತಮವೆ? ಅದಕ್ಕಾಗಿ ಅದನ್ನು ಹೆಗಲಿಗೆ ಸಿಕ್ಕಿಸಿ ತೂಗುತ್ತ ಬರುತ್ತಿದ್ದೆನು. ಕೈಗಳಲ್ಲಂತೂ ಈ ಧಾನ್ಯಾದಿಗಳ ಕಟ್ಟುಗಳಿದ್ದುವು. ಇಕ್ಕಡೆಗಳಲ್ಲಿನ ಶಾಲೆಗಳಿಂದ ಮಧ್ಯಾಹ್ನದ ಅವಕಾಶದಲ್ಲಿ ಬಾಲಕಬಾಲಿಕೆಯರ ಹಿಂಡುಗಳು ದಡಬಡನೆ ಹೊರಬೀಳುವಾಗಲೆ, ಅವರಿಗೆಲ್ಲ ನೀರಾಟದ ಸಂದರ್ಭವೊದಗಲೆಂದೋ ಏನೋ, ಧಾರಾಳ ಮಳೆ ಫಕ್ಕನೆ ಸುರಿಯಿತು. ಆದರೆ ನಾನೇ ಹೆದರುವವನು? ಪ್ರತಿಯೊಂದು ಮಗುವೂ ಕೊಡೆಬಿಡಿಸಿಕೊಂಡು ನಡೆಯುತ್ತಿದೆ, ನಾನು ಸುಮ್ಮನಿರುವೆನೆ? ನಾನು, - ನನ್ನ ಕೊಡೆಯನ್ನು ಎತ್ತಿ, ಸಟಕ್ಕನೆ ಅದು ತೆರೆಯುವ ಅದರ ಕೀಲನ್ನು ಒತ್ತಿ ಒತ್ತಿ ಒತ್ತಿದಷ್ಟಕ್ಕೆ, ಅದು ಮುಚ್ಚಿ ಮುಚ್ಚಿ ಮುಚ್ಚಿಯೇ ಬಿಗಿಯುತಿತ್ತು! ನನ್ನನ್ನೂ ನನ್ನ ಕೊಡೆಯನ್ನೂ ನೋಡಿ ನಗುತ್ತಾ ನಕ್ಕು ನೋಡುತ್ತಾ ಆ ಶಾಲಾ ಮಕ್ಕಳು ತಮ್ಮ ಕೊಡೆಗಳನ್ನು ಸುದರ್ಶನ ಚಕ್ರಗಳಂತೆ ಕೈಗಳಲ್ಲಿ ತಿರುಗಿಸುತ್ತಾ ಹೋಗುತ್ತಿರುವಾಗ, ಒಂದು ಕೊಡೆ ನನ್ನ ಟೊಪ್ಪಿಯನ್ನು ಕೆಳಕ್ಕಿಳಿಸಿತು; ಅದನ್ನೆತ್ತುವಾಗ, ಮಾರ್ಗದಲ್ಲಿ ಅಲ್ಲೇ ಆದ ಕೆಸರಿನ ಮೋಹದಿಂದ ಕೈಗಳಲ್ಲಿದ್ದ ಧಾನ್ಯಗಳ ಕಟ್ಟುಗಳು ಸಡಿಲಾಗಿ ಉರುಳಿ, ಧಾನ್ಯವನ್ನೆಲ್ಲ ಆ ಕೆಸರಲ್ಲೇ ಬಿತ್ತಿದಂತಾಯಿತು. ಮತ್ತಾವನೋ ಮುನ್ನಡೆವ ಸಿನೇಮಾ ನೋಟೀಸು ಹಂಚುವ ಪೋರನು ನನ್ನ ಟೊಪ್ಪಿಯನ್ನು ಮೆಟ್ಟಿಯೇ ನಡೆದನು. ಖಾದೀಟೊಪ್ಪಿ, ಎರಡೂವರೆ ಆಣೆ ಹೋಯಿತು. ಹಾಗೂ ಮಕ್ಕಳ ಮೆರವಣಿಗೆ ಮುಗಿದು, ಮಳೆಯೂ ತಡೆದಬಳಿಕ, ಹೆಗಲಿಗೆ ತೂಗಿ ಸಿದ್ಧೆ ಮಾಡುತಿದ್ದ

ನನ್ನ ಕೊಡೆ ಆಗ ತಾನೆ ಜಾಗ್ರತವಾಗಿ ಸಟಕ್ಕನೆ ಅರಳಿ, ನನ್ನ ಬೆನ್ನಿಗೊಂದು ಡುಬ್ಬವೆದ್ದಂತಾಯಿತು, - ಥೂ! ಇರಲೆಂದು ಹಾಗೆ ಎತ್ತಿಕೊಂಡು ಬಿಡಾರಕ್ಕೆ ನಡೆದೆನು. ಮನೆಯೊಳಗೆ ನುಗ್ಗಿ, ಕೊಡೆಯನ್ನು ಮಡಚಿಡಬೇಕೆನ್ನುವಾಗ, ಪಟಕ್ಕನೆ ಮಡಚಪಿ ಬಾಧಿಸತೊಡಗಿತು. ಒಣಬಟ್ಟೆ ಹಾಕಿಕೊಳ್ಳುವವರೆಗೆ ಅಲ್ಲೇ ಬಿದ್ದುಕೊಳ್ಳಲೆಂದು, ಒಂದು ಕಡೆ ಮಡಗಿ, ಒಳಕ್ಕೆ ನಡೆದೆನು.

ಒಂದು ಗಳಿಗೆಯ ತರುವಾಯು, ಹೊರಕ್ಕೆ ಬಂದು ನೋಡಿದರೆ, ನನ್ನ ಕೊಡೆ ನಾನು ಕುಳ್ಳಿರಿಸಿವಲ್ಲಿಲ್ಲ; ಹಸಿವಾಗಿ ಚಳಲಿ ಜೆಂಡಾಗಿ ಮೂರ್ಛೆಹೋದಂತೆ ಬಿದ್ದುಕೊಂಡಿದೆ!"

ಈ ಸಟಕ್ - ಪಟಕ್ ಕೊಡೆಯು ಬಹುಕಾಲ ಲೇಖಕರ ಬಳಿ ಉಳಿಯು ವುದಿಲ್ಲ. ಯಾರೋ ಒಬ್ಬರು ಅದನ್ನು ಕದ್ದೊಯ್ಯುತ್ತಾರೆ. ಆಗವರು ದೇಶೀಕೊಡೆ ಯೊಂವನ್ನು ಖರೀದಿಸುತ್ತಾರೆ. ಈ ಕೊಡೆಯಾದರೂ ಹೇಗಿದೆ? "ಈ ಮಜಭೂತು ಕೊಡೆಯನ್ನು ಬೆನ್ನ ಹಿಂದೆ ಹಿಡಿದರೆ, ಭೂತಕ್ಕೆ ಅಣಿಕಟ್ಟಿದಂತಾಗುವುದು; ಹೆಗಲ ಮೇಲಿಟ್ಟರೆ, ದಶಾವತಾರದ ವೀರಭದ್ರನ ಕಿರೀಟದಂತಾಗುವುದು: ನೆತ್ತಿಯ ಮೇಲೆ ಎತ್ತಿ ಹಿಡಿದರೆ, ತಿರುಪತಿಯ ಮಹೋತ್ಸವದಂತೆ ಆ ವರಾಹವು ಕಂಗೊಳಿಸುವುದು."

ಈ ದೇಶೀಕೊಡೆಯನ್ನು ಹಿಡಿದು ಲೇಖಕರು ಶಹರಿಗೆ ಹೋದಾಗ, ಅವರಿಗಾದ ಅನುಭವವೇನು?-"ಶಹರಿನಲ್ಲಿ ನಾನು ಹೋದಲ್ಲೆಲ್ಲ ಹಿಂದೆ ಮುಂದೆ ಮಕ್ಕಳ ಹಿಂಡು. ಕೇಳುತ್ತಾರೆ- 'ಟಿಕೇಟು' ಎಷ್ಟು? ಎಂದು. ನನಗೆ ಅರ್ಥವಾಗಲಿಲ್ಲ. ಯಾವುದೋ ಒಂದು ಜಾತ್ರೆಯ ಕಾಲದಲ್ಲಿ ಚಿಕ್ಕಚಿಕ್ಕ ಕುದುರೆಗಳಂತೆ ಕಾಣುವ ಮರದ ಆಸನ ಗಳಲ್ಲಿ ಕುಳಿತು, ಸುತ್ತುಸುತ್ತು ತಿರುಗುವ ಒಂದು ಬಗೆಯ ವಿನೋದವಿದೆಯಷ್ಟೆ. ಅವರ ಡೇರೆಯ ಹಾಗೆ ನನ್ನ ಕೊಡೆ ಅವರಿಗೆ ಕಾಣುತ್ತಿದೆಯಂತೆ! ಅವರ ಮಾತಿರಲಿ. ಎರಡೂ ಬದಿಗಳಲ್ಲಿನ ಅಂಗಡಿಗಾರರೂ 'ಖೋ' ಎಂದು ನಗುವುದೇಕಯ್ಯಾ! ನನ್ನ ಸ್ವದೇಶೀ ಕೊಡೆಯ ಇದಿರಲ್ಲಿ, ನಿಮ್ಮ ಕೊಡೆಕಟ್ಟುಗಳ ಮಾರಾಟವಾಗದೆಂದು ಅಳಬಾರದೆ? ಮತ್ತೂ, ಹಿಂದಣಿಂದ ಜಟ್ಕಾ ಹೊಡೆವವನೂ,- ಏ ಕೊಡೆ! ದಾರಿ! ಎಂದು ಕೂಗುವುದೇಕೆ?"

ಇಂಥ ಸರಸ ನಿರೂಪಣೆಯಿಂದ ವಾಚಕರ ಚಿತ್ತವನ್ನು ಸೆಳೆಹಿಡಿಯುಂವ ಶಕ್ತಿ ಕಾಮತರಿಗೆ ಸಹಜವಾಗಿ ವೈಗೂಡಿದಂತಿದೆ.

ಕನ್ನಡದ ನವೋದಯ ಸಾಹಿತ್ಯದ ಮೊದಲಲ್ಲಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಲು ಕಾರಣರಾದ ಮಂಗಳೂರು ಕಡೆಯ ಮೂವರು ಸಾಹಿತಿಗಳೆಂದರೆ- ಪಂಜೆ ಮಂಗೇಶರಾಯರು, ಎಂ. ಗೋವಿಂದ ಪೈಯವರು ಮತ್ತು ಎಂ. ಎನ್. ಕಾಮತರು. ಪಂಜೆಯವರು ಹುಟ್ಟು ಕವಿಗಳು.

"ಬಂಗಾರದ ಜರಿಯ ಬಿಸಿಲ ಕಿರೀಟದ ಶೃಂಗಾರದ ತಲೆ ಎತ್ತುವನು;
ತೆಂಗಿನ ಕಂಗಿನ ತಾಳೆಯ ಬಾಳೆಯ ಅಂಗಳ ರಂಗನು ಮುತ್ತುವನು."

ಎಂದು ವರ್ಣರಂಜಿತವಾಗಿ ರವಿಯನ್ನು ಬಿಂಬಿಸಿದ ಕವಿಯಲ್ಲವೆ ಅವರು? ಪಂಜೆಯವರು ಬದುಕಿದ್ದಾಗಲೇ ಸಾಹಿತ್ಯಕ್ಷೇತ್ರದಲ್ಲಿನ ತಮ್ಮ ದುಡಿಮೆಗೆ ತಕ್ಕ ಮನ್ನಣೆ ಪಡೆದವರು.

ಪ್ರಾಸತ್ಯಾಗದ ಸಾಹಸಮಾಡಿ ಮೊತ್ತಮೊದಲು ಕನ್ನಡದಲ್ಲಿ ಕವನ ರಚಿಸಿದ ಕೀರ್ತಿ ಗೋವಿಂದ ಪೈಯವರಿಗೆ ಸಲ್ಲುತ್ತದೆ. ಕವಿ, ನಾಟಕಕಾರ ಹಾಗೂ ಸಂಶೋಧಕರಾಗಿ ಹೆಸರಾದ ಪೈಯವರಿಗೂ ಅವರು ಬದುಕಿದ್ದಾಗಲೇ ಮನ್ನಣೆ ಪ್ರಾಪ್ತವಾಗಿದೆ.

ಎಂ. ಎನ್. ಕಾಮತರು ಕವಿ, ಕತೆಗಾರ, ನಾಟಕಗಾರರಾಗಿ ಕನ್ನಡ ಸಾಹಿತ್ಯದ ಕಾಯಕವನ್ನು ಮಾಡಿದವರಾದರೂ ನಾಟಕದಲ್ಲೇ ಇವರದು ಮೇಲುಗೈಯೆಂದು ನನಗನಿಸುತ್ತದೆ.

ಎಲ್ಲಕ್ಕಿಂತಲೂ ಮುಖ್ಯವಾದ ವಿಚಾರವೆಂದರೆ ಕಾಮತರ ಸಾಹಿತ್ಯಕೃತಿಗಳಲ್ಲಿ ಮಿಂಚುವ ಅವರ ಸಾಮಾಜಿಕ ಕಳಕಳಿ. ಆ ದೃಷ್ಟಿಯಿಂದ ನೋಡಿದಾಗ ಕಾಮತರು ಹೊಸಗನ್ನಡ ಸಾಹಿತ್ಯದ ಮೊದಲ ಕ್ರಾಂತಿಕಾರರಾಗಿ ಕಾಣಿಸುತ್ತಾರೆ. ಅಷ್ಟಾಗಿಯೂ, ಬದುಕಿದ್ದಾಗ ಅವರಿಗೆ ನ್ಯಾಯವಾಗಿ ಸಲ್ಲಬೇಕಿದ್ದ ಮನ್ನಣೆ ಸಿಗಲಿಲ್ಲ. ಅವರು ತೀರಿ ಹೋದ ಮೇಲಂತೂ ಅವರ ಹೆಸರು ಮರವೆಯ ಕತ್ತಲಲ್ಲಿ ಕರಗಿಹೋಯಿತು. ಈಗ ಸಾಹಿತಿ ಕಾಮತರ ಬಗ್ಗೆ ಮಾತಾಡಿದರೆ, "ಯಾವ ಕಾಮತರು?" ಎಂಬ ಪ್ರಶ್ನೆಯೇ ಉತ್ತರರೂಪವಾಗಿ ಕೇಳಿಬರುತ್ತದೆ. ಈ ರೀತಿಯ ಕಟು ಅನುಭವದಿಂದ ಮನಸ್ಸು ನೋಯುತ್ತದೆ. ಇದು ಹೀಗಾಗಬಾರದು, ಈ ಜನ್ಮಶತಮಾನೋತ್ಸವದ ಆಚರಣೆಗಳಿಂದಲಾದರೂ ಎಂ. ಎನ್. ಕಾಮತ್ ಅವರ ಹೆಸರು ಮರವೆಯ ಮುಸುಕಿನೊಳಗಿಂದ ಹೊರಬರಲಿ; ಕನ್ನಡ ನಾಡಿನಲ್ಲಿ ಅವರ ನೆನಪು ಸದಾ ಹಸಿರಾಗಿರಲಿ.

ಗ್ರಂಥಋಣ

1. ಅಂದಿನ ಆಪೂರು (ಮಿತ್ರಮಂಡಳಿ, ಮಂಗಳೂರು; 1941)
2. ಜಯಕರ್ನಾಟಕ (ಮೇ, 1940)
3. "ರತ್ನ ಮಂಜೂಷ"ದಲ್ಲಿ ಪಿ.ಕೆ. ನಾರಾಯಣ ಅವರ ಲೇಖನ, "ನಮ್ಮ ಕಾಮತರು" (ಅಖಿಲ ಭಾರತ 51ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿ, ಧರ್ಮಸ್ಥಳ, ದಕ್ಷಿಣ ಕನ್ನಡ; 1979)
4. "ಕಾಮನ ಬಿಲ್ಲು" (1933) ಸಣ್ಣಕತೆಗಳ ಸಂಕಲನದ ಅ. ನ. ಕೃಷ್ಣರಾಯರ ಮುನ್ನುಡಿ.
5. "ಕಂಡೂ ಕಾಣದ ನೋಟಗಳು" (1941) ಸಣ್ಣಕತೆಗಳ ಸಂಕಲನದ ಅ. ನ. ಕೃಷ್ಣ ರಾಯರ ಮುನ್ನುಡಿ.
6. ಕನ್ನಡ ಎರಡನೆಯ ಪದ್ಯಪುಸ್ತಕ (ಸಂಪಾದಕರು-ಪಂಜೆ ಮಂಗೇಶರಾಯರು; 1925)
7. ಮೆಕ್ಮಿಲನರ ಕನ್ನಡ ಪಾಠಪುಸ್ತಕಾವಳಿ - ಐದನೆಯ ಪುಸ್ತಕ (ಸಂಪಾದಕರು - ಕೆ. ಶ್ರೀನಿವಾಸ ಕಿಣಿ ಮತ್ತು ಎಂ. ಎನ್. ಕಾಮತ್; 1936)
8. ಮುರಳೀಧರ ಉಪಾಧ್ಯ ಹಿರಿಯಡಕ ಅವರ "ಎಮ್. ಎನ್. ಕಾಮತ್" (ಪ್ರಕಾಶಕರು : ಐ. ಬಿ. ಎಚ್. ಪ್ರಕಾಶನ; 1975)
9. ಎಂ. ರಾಮಚಂದ್ರ ಅವರ "ಬಾಡದ ಹೂವುಗಳು" (ಅಪರ್ಣಾ ಪ್ರಕಾಶನ, ಮೈಸೂರು; 1977)
10. ಮೆಕ್ಮಿಲನರ ಕನ್ನಡ ಪಾಠಪುಸ್ತಕಾವಳಿ - 3 (ಸಂಪಾದಕರು: ಕೆ. ಶ್ರೀನಿವಾಸ ಕಿಣಿ ಮತ್ತು ಉಗ್ರಾಣ ಮಂಗೇಶರಾವ್; 1941)
11. ಟಿ. ಎಸ್. ಎಲ್. ಸಿ. ಪರೀಕ್ಷೆಯ ಪಾಠ ಪುಸ್ತಕ (1951)
12. II AISCO conference 1973 Souvenir
13. Souvenir published by G. S. B. Sabha. Bombay on the occasion of its Silver Jubilee function(1959)
14. ತರಂಗ (ಮಿತ್ರಮಂಡಳಿ, ಮಂಗಳೂರು; 1936)
15. ಅಭಿನವ ಸಾಹಿತ್ಯಮಾಲೆ; ಒಂದನೆಯ ಪುಸ್ತಕ (1954)
16. ಕನ್ನಡ ಸಾಹಿತ್ಯಮಾಲೆ; ಭಾಗ ಎರಡು (1949)
17. ಕನ್ನಡ ಭಾಷಾ ಪಾಠಗಳು, ಮೂರನೆ ಮಾಲೆ (1949)

ಲೇಖಕರ ಪರಿಚಯ

ಜಿ. ವರದರಾಯ ಪೈ

ಜನನ 14—4—1945. ಪುತ್ತೂರು ಸಂತ ಫಿಲೋಮಿನಾ ಕಾಲೇಜಿನ ಹಳೆವಿದ್ಯಾರ್ಥಿ; ಎಂ.ಎಸ್ಸಿ., ಪದವೀಧರರು. 1969ರಿಂದ ಮೂಲ್ಕಿಯ ವಿಜಯಾ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಉಪನ್ಯಾಸಕರು. ಇವರ ಹಲವು ಬಿಡಿ ಲೇಖನಗಳು ಈಗಾಗಲೆ ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್, ಕನ್ನಡಪ್ರಭ, ಉದಯವಾಣಿ, ಪ್ರಜಾಮತ ಇತ್ಯಾದಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

"ಜಿ. ಎನ್. ಲಕ್ಷ್ಮಣ ಪೈಯವರ ಬದುಕು-ಬರೆಹ" ಇವರ ಇತ್ತೀಚೆಗಿನ ಕೃತಿ.

ಈ ಕೃತಿಯ ಕುರಿತು......

ಶ್ರೀ ಜಿ. ವರದರಾಯ ಪೈ ಅವರ 'ಎಮ್. ಎಸ್. ಕಾಮತ್ - ಒಂದು ಪರಿಚಯ' ಎಂಬ ಈ ಕಿರುಹೊತ್ತಗೆ ಹೊಸತಲೆಮಾರಿನವರಿಗೆ ಕಾಮತರ ಪರಿಚಯವನ್ನು ಮಾಡಿಕೊಡುವ ದೃಷ್ಟಿಯಿಂದ ಗಮನಾರ್ಹ ವಾಗುತ್ತದೆ. ಹಲವು ಆಕರಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ, ತಮಗೆ ಲಭ್ಯವಾದ ಪತ್ರಪುಸ್ತಕಗಳನ್ನೂ, ಕಾಮತರ ಕೃತಿಗಳನ್ನೂ ಪರಾಂಬರಿಸಿ, ಇದರಲ್ಲಿ ಎಮ್. ಎಸ್. ಕಾಮತರ ಬದುಕು-ಬರೆಹಗಳ ಪರಿಚಯವನ್ನು ಸ್ಥೂಲವಾಗಿ ಶ್ರೀಯುತರು ಮಾಡಿದ್ದಾರೆ. ಎಮ್. ಎಸ್. ಕಾಮತರನ್ನು ಕುರಿತು ಮರೆದವರನ್ನು ಜಾಗೃತಗೊಳಿಸಲು, ಅರಿಯದವರಿಗೆ ಪರಿಚಯ ನೀಡಲು, ಆಸಕ್ತರಿಗೆ ಆ ನಿಟ್ಟಿನಲ್ಲಿ ಮುಂದುವರಿಯಲು ಇದು ಮಾರ್ಗ ದರ್ಶಿಯಾಗುತ್ತದೆ. ಎಮ್. ಎಸ್. ಕಾಮತರ ಬಾಲ್ಯ, ವಿದ್ಯಾಭ್ಯಾಸ, ವಿವಾಹ, ಬದುಕಿನ ಬವಣೆ, ಕ್ರಾಂತಿಕಾರಕ ಮನೋಧರ್ಮ, ಸಾಮಾಜಿಕ ಕಳಕಳಿ, ಕನ್ನಡದ ದುಡಿಮೆಯ ನಾನಾ ಮಜಲುಗಳು, ಅವರ ಲಭ್ಯ ಕೃತಿಗಳ ಪರಿಚಯಗಳು - ಈ ಕೃತಿಯಲ್ಲಿ ಒಡಮೂಡಿವೆ.

'ಜಿ. ಎಸ್. ಲಕ್ಷ್ಮಣ ಪೈಯವರ ಬದುಕು - ಬರೆಹ' ಎಂಬ ತಮ್ಮ ಕೃತಿಯಿಂದ ಈಗಾಗಲೆ ಸಾಹಿತ್ಯಕ್ಷೇತ್ರದಲ್ಲಿ ಕಾಲಿರಿಸಿದ ಶ್ರೀ ಜಿ. ವರದರಾಯ ಪೈ ಅವರ ಈ ಕೃತಿ ಕೂಡ ಓದುಗರ ಮೆಚ್ಚುಗೆಗಳಿಸಿ, ಸಾಹಿತ್ಯಾಸಕ್ತರಲ್ಲಿ ಎಮ್. ಎಸ್. ಕಾಮತರ ಕುರಿತು ಕುತೂಹಲ, ಅಧ್ಯಯನಶೀಲತೆಗಳನ್ನು ಬೆಳೆಸಲಿ ಎಂದು ಆಶಿಸುತ್ತೇನೆ. ಇದು, ಎಮ್. ಎಸ್. ಕಾಮತರ ಕುರಿತು ಕೆಲವು ಅಮೂಲ್ಯ ದಾಖಲೆಗಳನ್ನೂ ಮಾಹಿತಿಗಳನ್ನೂ ಒದಗಿಸುವಷ್ಟರ ಮಟ್ಟಿನ ಸೀಮಿತ ಉದ್ದೇಶವನ್ನಿಟ್ಟು ಕೊಂಡಿರುವ ಕೃತಿಯಾದುದರಿಂದ, ಆ ನಿಟ್ಟಿನಲ್ಲಿ ಸಾರ್ಥಕವಾಗುತ್ತದೆ.

(ಮುನ್ನುಡಿಯಿಂದ)

ದರ್ಬೆ, ಪುತ್ತೂರು, ದ. ಕ.
ಮಾರ್ಚ್ 5, 1984

ವಿ. ಬಿ. ಮೊಳೆಯಾರ
ಪ್ರಾಧ್ಯಾಪಕ ಮತ್ತು ಮುಖ್ಯಸ್ಥ
ಕನ್ನಡ ವಿಭಾಗ, ಸಂತ ಫಿಲೋಮಿನಾ ಕಾಲೇಜು

ರಾಜೇಶ್ ಪವರ್ ಪ್ರೆಸ್, ಪುತ್ತೂರು ದೂರವಾಣಿ: 476